
01-15 ಜೂನ್, 2011
KARKAN/2007/20389
12-00
ಪ್ರಸ್ತುತ
ಪಾಕ್ಷಿಕ
ರಾಜಕೀಯ
ಚದುರಂಗ

ಸತ್ಯಸುದ್ದಿಯ
# ಪ್ರಸ್ತುತ
ಪಾಕ್ಷಿಕ
PRASTHUTHA KANNADA FORTNIGHTLY

ಮೇ 15-31, 2011 ಸಂಪುಟ : 5 ಸಂಚಿಕೆ : 10 ಬೆಲೆ : 12.00 ಪುಟ : 60 ಮಂಗಳೂರು




## ಅಂತರಾಳದಲ್ಲಿ...

>>


**ಅಂಕಣಗಳು**

| | |
|---|---|
| ಮೀಟುಗೋಲು | 05 |
| ಪ್ರತಿಕ್ರಿಯೆ | 04 |
| ರಾಷ್ಟ್ರೀಯ ವಾರ್ತೆ | 56 |
| ಅಂತಾರಾಷ್ಟ್ರೀಯ | 57 |
| ಮಿನಿಕಥೆ: | 20 |
| ಸುದ್ದಿಸಮುಚ್ಚಯ | 49 |
| ಇಂಚರ | 34 |
| ಇನಿದನಿ | 36 |

**ಲೇಖನಗಳು**

| | |
|---|---|
| ಕೋಟ್ಯಾಧಿಪತಿಗಳಾಗಲು... | 22 |
| ಕಿಲಾಡಿ ಜೋಡಿಯ ಕೊನೆಯ ಆಟ | 28 |
| ಶಿಕ್ಷಣ ಕ್ಷೇತ್ರದಲ್ಲಿ ಬ್ಯಾರಿ ಮಹಿಳೆ | 30 |
| ಮುಮ್ತಾಝ್ ಕಾಝಿ... | 32 |
| ಮೌಲ್ಯಯುತ ಶಿಕ್ಷಣ ನಮ್ಮದಾಗಲಿ | 44 |

**ವಿಶೇಷ ಲೇಖನ**

| | |
|---|---|
| ರಾಜಕೀಯ ಚದುರಂಗ | 08 |


ಪ್ರಧಾನ ಸಂಪಾದಕರು
ಕೆ.ಎಂ. ಶರೀಫ್

ಸಂಪಾದಕರು
ಫಯಾಝ್ ಎನ್.

ಸಹ ಸಂಪಾದಕರು
ಶಬೀರ್ ಕೆ.

ಸಂಪಾದಕ ಮಂಡಳಿ:
ಇಲ್ಯಾಸ್ ಮುಹಮ್ಮದ್. ಅಬ್ದುಲ್ ರಝಾಕ್ ಕೆಮ್ಮಾರ.
ಅಸ್ಲಮ್ ಹಸನ್. ಅಬ್ದುಲ್ ಹಮೀದ್ ಕೆ.ವೈ.
ಶಾಹಿದಾ ಎ., ಇಮ್ತಿಯಾಝ್. ಶಾಹಿದಾ ತಸ್ನೀಮ್.

ಗ್ರಾಫಿಕ್ ಡಿಸೈನರ್
ಎಂ. ಶಬೀರ್

ವ್ಯವಸ್ಥಾಪಕರು
ಅಬ್ದುಲ್ ಖಾದರ್ ಪಿ.

PRASTHUTHA
KANNADA FORTNIGHTLY
Media House
10-23-1009(1), Dr.Ansari Road,
Near Yatheem Khana Hall
Bunder, Mangalore-575001
Ph: 0824-2410454 Fax:0824-2410454
e-mail : prasthutha2007@gmail.com



ಎಡರಂಗ ಸರಕಾರದ ಜನವಿರೋಧಿ ನೀತಿಯಿಂದಾಗಿ ಪಶ್ಚಿಮ ಬಂಗಾಳದಲ್ಲಿ ಲಾಭಪಡೆದುಕೊಂಡ ದೀದಿ-8



ರಾಜಕೀಯ ಚದುರಂಗದಾಟದಲ್ಲಿ ಜನಸಾಮಾನ್ಯರು ಬಲಿಪಶುಗಳಾಗುತ್ತಿದ್ದಾರೆ -13



ಕೋಟ್ಯಾಧಿಪತಿಗಳಾಗಲು ಜನಸೇವೆಯ ಮುಖವಾಡುತ್ತಿರುವ ರಾಜಕಾರಣಿಗಳು- 22



ಶಿಕ್ಷಣ ಪಡೆಯುವುದು ಪ್ರತಿಯೊಬ್ಬರ ಮೂಲಭೂತ ಹಕ್ಕು. ಆದರೆ ಅದು ಮೌಲ್ಯಯುತವಾರಬೇಕು- 44

Edited, Printed and published by K.M. Shareef, 10-23-1009(1) Dr.Ansari Road, Bunder, Mangalore-575001, Owned by Sthuthi Publications & Information Trust, 10-23-1009(1) Dr.Ansari Road, Bunder, Mangalore-575001, Tel: 0824-2410454, Email- prasthutha2007@gmail.com Printed at Maadhyama communication Ltd, 127, Industrial Area, Bykampady, Mangalore-11.

## ದಾರಿ ತಪ್ಪಿಸುತ್ತಿರುವ ಮಾಧ್ಯಮಗಳು

ಮುಸ್ಲಿಂ ಜನ ಸಮುದಾಯವನ್ನು ದಾರಿ ತಪ್ಪಿಸುತ್ತಿರುವ ಮಾಧ್ಯಮಗಳು ಇಂದು ದೇಶದಲ್ಲಿ ಬೇರೂರಿ ನಿಂತಿದೆ. ಇಸ್ಲಾಂ ಧರ್ಮದ ಸಂಸ್ಕೃತಿ, ನಿಯಮ ಹಾಗೂ ಪಾಲನೆಯನ್ನು ಟಿ.ವಿ.ಮಾಧ್ಯಮಗಳು ಮೂಲೆ ಗುಂಪಾಗಿಸಿದೆ.

ಧಾರಾವಾಹಿಗಳಿಂದ ಹಿಡಿದು ಚಲನಚಿತ್ರದವರೆಗೂ ನಗ್ನತೆಯ ಪ್ರದರ್ಶನ ಹಾಗೂ ನೀತಿಗೆಟ್ಟ ಸಂಸ್ಕೃತಿಯನ್ನು ಪ್ರಸಾರಪಡಿಸುವ ಮಾಧ್ಯಮಗಳಿಂದ ಮಕ್ಕಳು, ಯುವಕ-ಯುವತಿಯರು ಪಾಶ್ಚಾತ್ಯ ಸಂಸ್ಕೃತಿಯ ದಾಸರಾಗುತ್ತಿದ್ದಾರೆ. ಇಸ್ಲಾಂ ನೀತಿ ನಿಯಮ ಹಾಗೂ ಸಂಸ್ಕೃತಿಗೆ ವಿರುದ್ಧವಾಗಿ ನಡೆಯಲು ಮಾಧ್ಯಮಗಳು ಇಂದು ಪ್ರೇರಣೆಯಾಗಿವೆ.

ವ್ಯಭಿಚಾರ, ಕಳ್ಳತನ ಹಾಗೂ ಹತ್ಯೆಯನ್ನು ಯಾವ ರೀತಿ ನಡೆಸಬೇಕು ಎಂಬುದನ್ನು ವಿವರಣಾತ್ಮಕವಾಗಿ ಮಾಧ್ಯಮವು ಪ್ರಸಾರ ಮಾಡುತ್ತಿದೆ. ಈ ನಿಟ್ಟಿನಲ್ಲಿ ಮುಸ್ಲಿಂ ಸಮುದಾಯದ ಯುವಕ ಯುವತಿಯರು ಹಾಗೂ ಮಕ್ಕಳು ಟಿ.ವಿ.ಮಾಧ್ಯಮಗಳು ಪ್ರಸಾರ ಮಾಡುವ ನೀತಿಗೆಟ್ಟ ಕಾರ್ಯಕ್ರಮಗಳ ವೀಕ್ಷಣೆಯಿಂದ ದೂರ ಉಳಿಯಬೇಕಾಗಿದೆ.

ಇಸ್ಲಾಂನ ತತ್ವ ಸಿದ್ಧಾಂತ ಹಾಗೂ ಆದರ್ಶಗಳನ್ನು ಮೂಲೆಗುಂಪಾಗಿಸದೇ ಮತ್ತು ಉಜ್ವಲ ಭವಿಷ್ಯಕ್ಕಾಗಿ ನಾ ವು ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದ್(ಸ)ರವರು ತೋರಿದ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು.

ಇಮ್ರಾನ್, ಎಲಿಯಾರ್ ಸ್ಟೇಟ್

## ಜನತೆಗೆ ಪೆಟ್ರೋಲ್ ದರ ಏರಿಕೆಯ ಬರೆ

ಪೆಟ್ರೋಲ್ ಬೆಲೆ ಮತ್ತೇ ಏರಿಕೆಯಾಗಿದೆ. ಈಗಾಗಲೇ ಹಲವು ಬಾರಿ ಪೆಟ್ರೋಲ್ ದರ ಏರಿಕೆ ಮಾಡಿರುವುದರಿಂದ ಜನಸಾಮಾನ್ಯನ ಮೇಲೆ ಇನ್ನಷ್ಟು ಬರೆ ಎಳೆದಂತಾಗಿದೆ.

ಕಳೆದ 9 ತಿಂಗಳಲ್ಲಿ 11 ಬಾರಿ ಪೆಟ್ರೋಲ್ ದರ ಏರಿಕೆ ಮಾಡಲಾಗಿದೆ. ಪೆಟ್ರೋಲ್ ದರ ಏರಿಕೆಯಲ್ಲಿ ಇದೊಂದು ದಾಖಲೆ ಎಂದರೂ ಅಡ್ಡಿಯಿಲ್ಲ. ಪಟ್ರೋಲ್‌ನ್ನು ಸರಕಾರವು ಖಾಸಗೀಕರಣಗೊಳಿಸಿದ ಮೇಲೆ ಬೆಲೆ ಏರಿಕೆಯಾಗುತ್ತಲೇ ಇದೆ ವಿನಃ ಬೆಲೆ ಇಳಿಕೆಯಾಗುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಇದೀಗ ಒಮ್ಮೆಲೆ 5 ರೂ. ಬೆಲೆ ಏರಿಕೆ ಮಾಡಲಾಗಿದೆ. ಪೆಟ್ರೋಲ್ ಸಂಸ್ಥೆಗಳು ಜನಸಾಮಾನ್ಯನ ಮೇಲೆ ಯಾವುದೇ ಕರುಣೆ ತೋರದೆ ತಮ್ಮ ಜೇಬು ತುಂಬಿಸಿಕೊಳ್ಳುತ್ತಿದೆ. ಇದರ ವಿರುದ್ಧ ಪ್ರತಿಭಟಿಸಲು ಜನರ ಧ್ವನಿಯು ಕ್ಷೀಣಿಸಿದಂತಾಗಿದೆ.

ಪರಿಸ್ಥಿಯು ಹೀಗೆಯೇ ಮುಂದುವರಿದರೆ ಪೆಟ್ರೋಲ್ ದರ ಗಗನಕ್ಕೇರುವ ಸಾಧ್ಯತೆ ಇದೆ. ಬೇಕಾಬಿಟ್ಟಿ ಪೆಟ್ರೋಲ್ ದರ ಏರಿಕೆ ಮಾಡುವುದರ ವಿರುದ್ಧ ಜನರು ಬೀದಿಗಿಳಿದು ಪ್ರತಿಭಟನೆ ನಡೆಸದಿದ್ದರೆ ಗಂಡಾಂತರ ತಪ್ಪಿದ್ದಲ್ಲ.

ದೀಪಕ್, ಮಡಿಕೇರಿ




**ಓದುಗರು, ಬರಹಗಾರರು ತಮ್ಮ ಅಭಿಪ್ರಾಯ, ಲೇಖನ, ಬರಹಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.**

**ಹೊಸ ಕಚೇರಿ ವಿಳಾಸ ಇಂತಿದೆ.**

ಪ್ರಸ್ತುತ ಪಾಕ್ಷಿಕ
ಡಿ.ನಂ.10-23-1009(1)
ಮೀಡಿಯಾ ಹೌಸ್, ಡಾ.ಅನ್ಸಾರಿ ರಸ್ತೆ
ಯತೀಮ್‌ಖಾನಾ ಹಾಲ್ ಬಳಿ, ಬಂದರ್
ಮಂಗಳೂರು-1
**ಈ ಮೇಲ್ ವಿಳಾಸ:**
prasthutha2007@gmail.com

## ಗುಜರಾತ್ ಸರಕಾರದ ವಿರುದ್ಧ ಕ್ರಮ ಕೈಗೊಳ್ಳಲಿ

2002ರ ಹತ್ಯಾಕಾಂಡದಲ್ಲಿ ಇಡೀ ವಿಶ್ವವನ್ನೇ ಬೆಚ್ಚಿ ಬೀಳಿಸಿದ ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರ ಮೋದಿ ಯಾವುದೇ ಅಡ್ಡಿ ಆತಂಕವಿಲ್ಲದೆ ಸರಕಾರ ನಡೆಸುತ್ತಿದ್ದಾನೆ.

ಮಾನವ ಹತ್ಯಾಕಾಂಡ, ನಕಲಿ ಎನ್‌ಕೌಂಟರ್ ಹೀಗೆ ಮಾನವ ಹಕ್ಕುಗಳ ಉಲ್ಲಂಘನೆ ಇಲ್ಲಿ ನಡೆಯುತ್ತಿದೆ. ವರದಿಯೊಂದರ ಪ್ರಕಾರ ಗುಜರಾತ್‌ನಲ್ಲಿ 7282 ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳು ದಾಖಲಾಗಿದೆ.

ಆದ್ದರಿಂದ ಗುಜರಾತ್‌ನಲ್ಲಿ ಸಂವಿಧಾನಬದ್ಧ ಆಡಳಿತ ವ್ಯವಸ್ಥೆಗೆ ಕೇಂದ್ರ ಕ್ರಮ ಕೈಗೊಳ್ಳಬೇಕು.

ತೌಫೀಕ್, ಕೈಕಂಬ

## ಸಂಪಾದಕೀಯ

### ಮೂರು ವರ್ಷಗಳ ಕರಾಳ ದಿನಗಳು

ಇದೇ ಮೇ 30ರಂದು ಕರ್ನಾಟಕ ಬಿಜೆಪಿ ಸರಕಾರ ಮೂರು ವರ್ಷಗಳ ಆಡಳಿತಕ್ಕೆ ಕರ್ನಾಟಕ ಜನತೆ ಸಾಕ್ಷಿಯಾಗಲಿದ್ದಾರೆ. ಈ ಮೂರು ವರ್ಷಗಳಲ್ಲಿ ಏಳು-ಬೀಳು, ನೋವು- ನಲಿವು ಉಂಡವರು ಕರ್ನಾಟಕದ ಜನತೆ. ಮೇಲ್ನೋಟಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಸರಕಾರವು ಏಳುಬೀಳು, ನೋವು- ನಲಿವಿನೊಂದಿಗೆ ಮೂರು ವರ್ಷಗಳ ಆಡಳಿತವನ್ನು ಪೂರೈಸುತ್ತಿದೆ ಎಂದು ಬಣ್ಣಿಸಲಾಗುತ್ತದೆ. ವಾಸ್ತವದಲ್ಲಿ ಮೂರು ವರ್ಷಗಳ ಬಿಜೆಪಿ ಆಡಳಿತದ ಸಂತ್ರಸ್ತರು ಕನ್ನಡಿಗರಾಗಿದ್ದಾರೆ.

ಯಡಿಯೂರಪ್ಪ ಸರಕಾರವು ಅಸ್ತಿತ್ವಕ್ಕೆ ಬಂದ ಮೇಲೆ ಮಾಧ್ಯಮಗಳಲ್ಲಿ ರಾಜಕೀಯದ್ದೇ ಮುಖ್ಯ ಸುದ್ದಿ. ಕೆಲವು ಮಂದಿ ಪತ್ರಕರ್ತರಿಗೆ ಸರಕಾರದ ಅವ್ಯವಹಾರ, ಅಕ್ರಮ, ಭ್ರಷ್ಟಾಚಾರ, ವಿವಾದಗಳ ಬಗ್ಗೆ ಬರೆದು ಸುಸ್ತಾಗಿ ಬರೆಯುವುದನ್ನೇ ನಿಲ್ಲಿಸಿದ್ದಾರೆ. ಆದರೆ ಅಕ್ಷರ ಹೋರಾಟಕ್ಕೆ ದಣಿವು ಇರಬಾರದು. ಈಗ ಮೂರು ವರ್ಷಗಳನ್ನಷ್ಟೇ ಬಿಜೆಪಿ ಸರಕಾರ ಪೂರೈಸಿದೆ, ಇನ್ನು ಎರಡು ವರ್ಷಗಳನ್ನು ಹೇಗಾದರೂ ಮಾಡಿ ಪೂರ್ತಿಗೊಳಿಸುತ್ತಾರೆ ಎಂಬುದನ್ನು ಇತ್ತೀಚಿನ ವಿದ್ಯಮಾನಗಳು ಖಚಿತಪಡಿಸುತ್ತಿವೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ 110 ಸೀಟುಗಳೊಂದಿಗೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಬಿಜೆಪಿಗೆ ಅಧಿಕಾರಕ್ಕೇರಲು 6 ಸ್ಥಾನಗಳ ಅವಶ್ಯಕತೆ ಇತ್ತು. ಈ ಸಂದರ್ಭದಲ್ಲಿ ಪಕ್ಷೇತರರನ್ನು (ಅದುವರೆಗೆ ಬಿಜೆಪಿ ವಿರೋಧಿ ನಿಲುವು ಹೊಂದಿದ್ದ ಪಕ್ಷೇತರರು) ಸೆಳೆದುಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿತ್ತು. ಇಷ್ಟಕ್ಕೇ ಸುಮ್ಮನಿರದ ಬಿಜೆಪಿಯು ತನ್ನ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಅಪರೇಷನ್ ಕಮಲ ಎಂಬ ಸಂವಿಧಾನಬಾಹಿರ ರಾಜಕೀಯ ಪ್ರಕ್ರಿಯೆಗೆ ಇಳಿಯಿತು. ರಾಜ್ಯದಲ್ಲಿ ಅತ್ಯಂತ ಹೊಲಸು ರಾಜಕೀಯಕ್ಕೆ ಅಪರೇಷನ್ ಕಮಲ ಮುನ್ನುಡಿ ಬರೆಯಿತು. ಇಲ್ಲಿಂದ ಆರಂಭವಾದ ರಾಜಕೀಯ ಡೊಂಬರಾಟಗಳು ಇವತ್ತಿನವರೆಗೂ ರಾಜ್ಯದ ಜನತೆಗೆ ಪುಕ್ಕಟೆ ಮನರಂಜನೆ ನೀಡುತ್ತಿದೆ.

'ಅಭಿವೃದ್ಧಿಯೇ ಆಡಳಿತ ಮಂತ್ರ' ಎಂದು ಘೋಷಿಸಿಕೊಂಡು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಯಡಿಯೂರಪ್ಪ, ಅಧಿಕಾರಕ್ಕೇರಿದ ವಾರವೊಂದರಲ್ಲೇ ಹಾವೇರಿಯಲ್ಲಿ ರೈತನೊಬ್ಬನನ್ನು ಬಲಿತೆಗೆದುಕೊಳ್ಳುವ ಮೂಲಕ ಸುದ್ದಿಯಾದರು. ರಸಗೊಬ್ಬರ ಪೂರೈಕೆಗಾಗಿ ರೈತರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದ ವೇಳೆ ಪೊಲೀಸರು ನಡೆಸಿದ ಗೋಲಿಬಾರ್‌ಗೆ ರೈತ ಮುಖಂಡ ಸಿದ್ದಲಿಂಗಪ್ಪ ಚೂರಿ ಎಂಬಾತ ಬಲಿಯಾದ. ಖೇದಕರ ಸಂಗತಿ ಎಂದರೆ ಯಡಿಯೂರಪ್ಪ ಸರಕಾರವು, ಮೃತ ರೈತನಿಗೆ ಗೂಂಡಾ ಎಂದು ಮರಣೋತ್ತರ ಸರ್ಟಿಫಿಕೇಟ್ ನೀಡಿತು. ಮಾತ್ರವಲ್ಲ, ಪ್ರತಿಭಟನೆ ನಡೆಸಿದ್ದು ರೈತರಲ್ಲ, ಬಾಡಿಗೆ ಗೂಂಡಾಗಳು. ಇದೆಲ್ಲ ವಿರೋಧ ಪಕ್ಷಗಳ ಪಿತೂರಿ ಎಂದು ಹೇಳಿಕೆ ನೀಡಿರುವುದು ರೈತಾಪಿ ವರ್ಗವನ್ನೇ ದಿಗ್ಭ್ರಮೆಗೊಳಿಸಿತು.

2008ರ ಅಂತ್ಯದ ಅಲ್ಪಸಂಖ್ಯಾತ ಕ್ರಿಶ್ಚಿಯನ್ನರ ಮೇಲೆ ಏಕಕಾಲಕ್ಕೆ ರಾಜ್ಯಾದ್ಯಂತ ದಾಳಿ ನಡೆಯಿತು. ಮಂಗಳೂರು, ಬೆಂಗಳೂರು, ಶಿವಮೊಗ್ಗ, ಉಡುಪಿ ಸೇರಿದಂತೆ ಹಲವೆಡೆ ಚರ್ಚುಗಳ ಮೇಲೆ ದಾಳಿ, ಕ್ರಿಶ್ಚಿಯನ್ನರ ಮೇಲೆ ದೌರ್ಜನ್ಯ ನಡೆಯಿತು. ಮತ್ತು ಅಮಾಯಕರ ಮೇಲೆ ಸುಳ್ಳುಕೇಸನ್ನು ದಾಖಲಿಸಲಾಯಿತು. ಚರ್ಚು ದಾಳಿಯ ಹೊಣೆಯನ್ನು ಹಿಂದುತ್ವವಾದಿ ಸಂಘಟನೆಯು ವಹಿಸಿಕೊಂಡಿದ್ದರೂ ಆರೋಪಿಗಳ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದ ಬಿಜೆಪಿ ಸರಕಾರ, ತನಿಖೆಗೆ ಸೋಮಶೇಖರ್ ಆಯೋಗವನ್ನು ರಚಿಸಿತು. ಆಯೋಗದ ಮೂಲಕ ಸರಕಾರದ ಪರವಾಗಿ ಮತ್ತು ಸಂಘಪರಿವಾರದ ಪರವಾಗಿ ವರದಿ ರಚಿಸಿಕೊಂಡ ಯಡಿಯೂರಪ್ಪ, ಅಲ್ಪಸಂಖ್ಯಾತ ಸಮುದಾಯಕ್ಕೆ ಭಾರೀ ದ್ರೋಹವೆಸಗಿದರು.

ಮೈಸೂರಿನ ಕ್ಯಾತಮಾನರನಹಳ್ಳಿ ಪ್ರಕರಣವು ರಾಜ್ಯಾದ್ಯಂತ ಭಾರೀ ಸುದ್ದಿಯಾಯಿತು. ಇದು ತಥಾಕಥಿತ ಅಲ್ಪಸಂಖ್ಯಾತ ಮುಸ್ಲಿಮ್ ಸಮುದಾಯ ಮತ್ತು ಬಿಜೆಪಿ ಸರಕಾರ ಪರಸ್ಪರ ಮುಖಾಮುಖಿಯಾಗಿ ಸಂಘರ್ಷಕ್ಕಿಳಿದ ಘಟನೆ. ಮಸೀದಿಯಲ್ಲಿ ಹಂದಿಮಾಂಸವಿರಿಸಿದ ಪ್ರಕರಣಕ್ಕೆ ಸಂಬಂಧಿಸಿ ಸೃಷ್ಟಿಗೊಂಡ ಗಲಭೆಯು ಸ್ಫೋಟಗೊಂಡು ಮೈಸೂರಿನಾದ್ಯಂತ ಪಸರಿಸಿತು. ಆಗ ಮೈಸೂರು ಉಸ್ತುವಾರಿ ಸಚಿವರಾಗಿದ್ದವರು ಶೋಭಾ ಕರಂದ್ಲಾಜೆ. ಮುಸ್ಲಿಮರ ಬೇಟೆಗೆಂದೇ ಇಳಿದ ಆಡಳಿತ ವ್ಯವಸ್ಥೆಯು ಹಲವು ಮಂದಿ ಮುಸ್ಲಿಮರನ್ನು ಸುಳ್ಳುಕೇಸು ದಾಖಲಿಸಿ ಬಂಧನದಲ್ಲಿರಿಸಿತು. ಇದರ ವಿರುದ್ಧ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಹಮ್ಮಿಕೊಂಡಿದ್ದ ಜೈಲು ಭರೋ ಚಳವಳಿಯ ಮೇಲೆ ಪೊಲೀಸರು ಲಾಠಿ ಪ್ರಹಾರ, ಆಶ್ರುವಾಯು ಪ್ರಯೋಗಿಸಿದರು. ಪ್ರತಿಭಟನಕಾರರನ್ನು ಬಂಧಿಸಿ ಸುಮಾರು 75 ದಿನಗಳ ಕಾಲ ಅಕ್ರಮ ಬಂಧನದಲ್ಲಿರಿಸಿದ ಬಿಜೆಪಿ ಸರಕಾರಕ್ಕೆ ಹೈಕೋರ್ಟು ಛೀಮಾರಿ ಹಾಕಿತ್ತು. ಮಾತ್ರವಲ್ಲ, ಅಮಾಯಕರಿಗೆ 50 ಸಾವಿರ ರೂಪಾಯಿ ದಂಡ ಪಾವತಿಸುವಂತೆ ಪೊಲೀಸ್ ಇಲಾಖೆಗೆ ಹೈಕೋರ್ಟ್ ಸೂಚಿಸಿತ್ತು. ಈ ಘಟನೆಯು ಬಿಜೆಪಿ ಸರಕಾರವು ಯಾವ ರೀತಿ ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂಬುದನ್ನು ಸಾಬೀತುಪಡಿಸಿತು.

47ನೇ ಪುಟಕ್ಕೆ

### ಕಾಂಗ್ರೆಸ್‌ನಿಂದ ಬಿಜೆಪಿಯ ರಕ್ಷಣೆ

ಬಿಜೆಪಿ ಸರಕಾರವು ಇದೀಗ ಅಪರಾಧಿ ಸ್ಥಾನದಲ್ಲಿರುವುದು ಸಾಬೀತಾಗಿದೆ. ವಿಶ್ವಾಸ ಮತ ಯಾಚನೆ ವೇಳೆ ಸಂವಿಧಾನದ ಆಶಯಗಳಿಗೆ ಮಣ್ಣೆರಚಿ ತನ್ನ ಅಧಿಕಾರವನ್ನು ಭದ್ರಪಡಿಸಿಕೊಂಡಿತ್ತು.

ಕಳೆದ ಅಕ್ಟೋಬರ್‌ನಲ್ಲಿ ನಡೆದಿದ್ದ ವಿಶ್ವಾಸ ಮತ ಯಾಚನೆಯ ಮೇಳೆ ಬಿಜೆಪಿ ಸರಕಾರವು ಅಲ್ಪಮತಕ್ಕೆ ಕುಸಿದಿತ್ತು. ಸರಕಾರದ ವಿರುದ್ಧ ಬಂಡಾಯವೆದ್ದಿದ್ದ ಬಿಜೆಪಿ ತನ್ನ 11 ಮಂದಿ ಶಾಸಕರನ್ನು ಮತ್ತು 5 ಮಂದಿ ಪಕ್ಷೇತರ ಶಾಸಕರ ಸದಸ್ಯತ್ವವನ್ನು ವಿಶ್ವಾಸ ಮತ ಯಾಚನೆಯ ದಿನದಂದೇ ಅನರ್ಹಗೊಳಿಸಿತ್ತು. ಈ ಮೂಲಕ ಸಂವಿಧಾನ ಬಾಹಿರವಾಗಿ ತಾನು ಅಧಿಕಾರವನ್ನು ಉಳಿಸಿಕೊಂಡಿತ್ತು.

ಬಿಜೆಪಿಯು ಸಂವಿಧಾನ ಬಾಹಿರವಾಗಿ ವರ್ತಿಸಿರುವುದನ್ನು ಇದೀಗ ಸುಪ್ರೀಂಕೋರ್ಟ್ ಗಂಭೀರವಾಗಿ ಪರಿಗಣಿಸಿದೆ. ಆದರೆ ಕಾಂಗ್ರೆಸ್ ಹೈಕಮಾಂಡ್ ಮಾತ್ರ ಬಿಜೆಪಿ ಸರಕಾರದ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗುತ್ತಿಲ್ಲ. ಬದಲಾಗಿ ಇನ್ನಷ್ಟು ಅವಕಾಶಗಳನ್ನು ಕಲ್ಪಿಸುತ್ತಿದೆ. ರಾಜ್ಯದ ಬಿಜೆಪಿ ಸರಕಾರದ ಪರವಾಗಿ ಕಾಂಗ್ರೆಸ್ ಹೈಕಮಾಂಡ್ ಇದೇ ಧೋರಣೆ ತಾಳಿದರೆ ಮುಂದೊಂದು ದಿನ ರಾಜ್ಯ ಕಾಂಗ್ರೆಸ್ ನಾಮಾವಶೇಷಗೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ.

ಶಬ್ಬೀರ್ ಅಲಿ, ಬೆಂಗಳೂರು

### ಒಸಾಮಾನ ಚಿತ್ರಣ ತೆರಿದಟ್ಟ ಲೇಖನ

ಪ್ರಸ್ತುತ ಪಾಕ್ಷಿಕದ ಮೇ 1-15ರ ಸಂಚಿಕೆಯಲ್ಲಿ ಪ್ರಕಟವಾದ 'ಇನ್ನು ಒಬಾಮಾ ಮಾತ್ರ' ಎಂಬ ಮುಖಪುಟ ಲೇಖನವು ಬಹಳ ಅರ್ಥವತ್ತಾಗಿ ಮೂಡಿ ಬಂದಿದೆ.

ಪೂರ್ವಗ್ರಹ ಪೀಡಿತ ಮಾಧ್ಯಮಗಳು ಒಸಾಮಾ ಬಿನ್ ಲಾಡೆನ್ ಬಗ್ಗೆ ಕಪೋಲಕಲ್ಪಿತ ವರದಿಗಳನ್ನು ಪ್ರಕಟಿಸುತ್ತಿರುವಾಗ ಒಸಾಮಾ ಬಿನ್ ಲಾಡೆನ್ ಬಗೆಗಿನ ನೈಜವಾದ ಸಂಪೂರ್ಣ ಚಿತ್ರಣವು ಈ ಲೇಖನದಲ್ಲಿ ವ್ಯಕ್ತವಾಗಿದೆ. ಸೌಮ್ಯವಾದಿಯಾಗಿದ್ದ ಒಸಾಮಾ ಹೋರಾಟಗಾರ ನಾಗುವವರೆಗಿನ ಸ್ಪಷ್ಟ ಚಿತ್ರಣವು ಈ ಲೇಖನದಲ್ಲಿ ದೊರೆಯುತ್ತದೆ.

ಅಮೆರಿಕಾದ ವಸಾಹತುಶಾಹಿ ನೀತಿಯ ವಿರುದ್ಧ ಹೋರಾಟ ನಡೆಸುತ್ತಿದ್ದ ಒಸಾಮಾನನ್ನು ಅಮೆರಿಕಾವು ಜಗತ್ತಿನ 'ಮೋಸ್ಟ್ ವಾಂಟೆಡ್' ಭಯೋತ್ಪಾದಕನನ್ನಾಗಿ ಚಿತ್ರಿಸಿತು. ಆ ಬಳಿಕ ಅಮೆರಿಕಾವು ಅಫ್ಘಾನಿಸ್ತಾನ, ಇರಾಕ್‌ನಲ್ಲಿ ನಡೆಸಿದ ದಾಳಿಗಳಲ್ಲಿ ಲಕ್ಷಾಂತರ ಅಮಾಯಕ ಜನರು ಸಾವನ್ನಪ್ಪಿದ್ದಾರೆ, ನೋವನ್ನುಂಡಿದ್ದಾರೆ.

ಅಮೆರಿಕಾ ತನ್ನ ಸಾಮ್ರಾಜ್ಯಶಾಹಿ ನೀತಿಯನ್ನು ವಿಸ್ತರಿಸಲು ಮತ್ತು ರಕ್ತದಾಹವನ್ನು ತೀರಿಸಿಕೊಳ್ಳಲು ಒಸಾಮಾ ಎಂಬ ಭೂತವನ್ನು




ತೇಲಿಬಿಟ್ಟಿತು. ಒಸಾಮಾ ಹಲವು ವರ್ಷಗಳ ಹಿಂದೆಯೇ ಮೃತನಾಗಿದ್ದಾನೆ ಎಂಬುದನ್ನು ಹಲವು ದಾಖಲೆಗಳು ಸ್ಪಷ್ಟಪಡಿಸುತ್ತಿದ್ದರೂ ಅಮೆರಿಕಾವು ತಾನು ಒಸಾಮಾನನ್ನು ಇತ್ತೀಚಿಗಷ್ಟೇ ಕೊಂದೆ ಎಂದು ಜನರನ್ನು ನಂಬಿಸುತ್ತಿದೆ.

ಏನೇ ಆಗಲಿ, ಮುಸ್ಲಿಂ ರಾಷ್ಟ್ರಗಳಲ್ಲಿ ನಡೆಯುತ್ತಿರುವ ರಕ್ತಪಾತಕ್ಕೆ ಒಸಾಮಾ ಬಿನ್ ಲಾಡೆನ್‌ನ ಅನುಯಾಯಿಗಳು ಇನ್ನಷ್ಟು ಹುಟ್ಟಿದರೂ ಯಾವುದೇ ಅಚ್ಚರಿಯಿಲ್ಲ. ಏಕೆಂದರೆ ಭಯೋತ್ಪಾದನೆಗೆ ಅಮೆರಿಕಾವೇ ಪ್ರತ್ಯಕ್ಷ ಕಾರಣವಾಗಿದೆ ಎಂಬುದನ್ನು ಈ ಲೇಖನವು ಸ್ಪಷ್ಟಪಡಿಸಿದೆ.

ಮುಹ್ಸಿನ್, ಉಡುಪಿ

### ಮೌಢ್ಯತೆಯ ಸೃಷ್ಟಿಗೆ ಕಾರಣರಾರು?

ನಡೆದಾಡುವ ದೇವರು ಈಗ ಇಲ್ಲವಾಗಿದ್ದಾರೆ. ಸಾಯಿಬಾಬಾ ತನ್ನನ್ನು ದೇವರೆಂದು ಬಿಂಬಿಸುತ್ತಿದ್ದರೂ ಕೂಡ ಸ್ವತಃ ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅಂದರೆ ಮನುಷ್ಯ ಯಾವತ್ತಿದ್ದರೂ ಮನುಷ್ಯನೇ. ಆತ ಯಾವತ್ತೂ ದೇವನಾಗಲಾರ. ತಮ್ಮ ಬೇಳೆಬೇಯಿಸಿಕೊಳ್ಳಲು ಇಂತಹ ದೇವರ ಸೃಷ್ಟಿಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಬಹಳ ಮುತುವರ್ಜಿವಹಿಸಿ ಕಾರ್ಯ ನಿರ್ವಹಿಸುತ್ತವೆ. ಇದರೊಂದಿಗೆ ಜನರಲ್ಲಿರುವ ಮೌಢ್ಯತೆ ಇಂದಿನ ಕಾಲದಲ್ಲಿ ದೇವಮಾನವರನ್ನು ಸೃಷ್ಟಿಸುತ್ತಿದೆ.

ಕಳೆದ ಸಂಚಿಕೆಯಲ್ಲಿ ಪ್ರಸುತ್ತ ಪಾಕ್ಷಿಕದಲ್ಲಿ ಪ್ರಕಟವಾಗಿದ್ದ 'ಸಾಯಿಬಾಬಾರ ಧರ್ಮಾರ್ಥಗಳು ಪ್ರಜಾತಂತ್ರದ ಅಣಕವಲ್ಲವೇ?' ಎಂಬ ಲೇಖನವು ಆಧ್ಯಾತ್ಮ ಎಂದು ನಂಬಿಸಿ ಜನರನ್ನು ಮರಳು ಮಾಡುವ ಪವಾಡಗಳನ್ನು ಬಯಲಿಗೆಳೆದಿದೆ.

ಇಂದು ಸಾಯಿಬಾಬಾ ಮಾಡಿರುವ ಪವಾಡಗಳೆಲ್ಲಾ ಹಲವು

ಸಂಶಯಗಳನ್ನು ಹುಟ್ಟುಹಾಕಿದೆ. ಆದರೆ ಸಾಯಿಬಾಬಾ ಮಾಡಿರುವ ಪವಾಡಗಳಿಗಿಂತಲೂ ಹೆಚ್ಚಾಗಿ ಅವರು ಮಾಡಿರುವ ಸಮಾಜಸೇವೆಯನ್ನು ಮಾತ್ರ ಗುರುತಿಸಬೇಕು. ಅಂದರೆ ಜನಸಾಮಾನ್ಯರು ಹಸಿದಿದ್ದಾಗ, ತಮ್ಮ ಮೂಲಭೂತ ಅವಶ್ಯಕತೆಗಳಿಂದ ವಂಚಿತರಾಗಿದ್ದಾಗ ಸಾಯಿಬಾಬಾ ನೆರವಾದರು. ಹೀಗೆ ಹಸಿದಿದ್ದವರಿಗೆ ಅನ್ನ ನೀಡಿದಾತ ಸಮಾಜ ಸೇವಕ ಎನಿಸಿಕೊಳ್ಳುತ್ತಾನೆ.

ಇಂದು ಮೌಢ್ಯತೆಗಳ ಬೆಳವಣಿಗೆಗೆ ಮತ್ತು ದೇವಮಾನವರ ಸೃಷ್ಟಿಗೆ ಸರಕಾರವೇ ನೇರ ಹೊಣೆಯಾಗಿದೆ. ಸದಾ ಹಗರಣ, ಭ್ರಷ್ಟಾಚಾರಗಳಿಂದಲೇ ಕಾಲ ದೂಡುತ್ತಿರುವ ಸರಕಾರ ಜನಸಾಮಾನ್ಯರ ಯಾವುದೇ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಅವರ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಮುಂದಾಗುತ್ತಿಲ್ಲ. ಇದನ್ನೇ ಬಂಡವಾಳವನ್ನಾಗಿಸುವ ಪಟ್ಟಭದ್ರ ಹಿತಾಸಕ್ತಿಗಳು ದೇವಮಾನವನನ್ನು ಸೃಷ್ಟಿಸಲು ಯಶಸ್ವಿಯಾಗಿ ಜನರನ್ನು ಮೌಢ್ಯತೆಯ ಕಡೆಗೆ ದೂಡುತ್ತಾರೆ.

ರಾಜೇಶ್, ಉಡುಪಿ

## ರಾಜ್ಯ ಸರಕಾರದ ವಿರುದ್ಧ ಕ್ರಮಕ್ಕೆ ಕಾಂಗ್ರೆಸ್ ಹೈಕಮಾಂಡ್ ಮುಂದಾಗಲಿ

ಯಡಿಯೂರಪ್ಪ ನೇತೃತ್ವದ ರಾಜ್ಯ ಸರಕಾರವು ಕಳೆದ ಕೆಲವು ತಿಂಗಳುಗಳ ಹಿಂದೆ 16 ಶಾಸಕರ ಸದಸ್ಯತ್ವವನ್ನು ಅನರ್ಹಗೊಳಿಸಿ ಸಂವಿಧಾನ ಬಾಹಿರವಾಗಿ ಆಡಳಿತ ನಡೆಸುತ್ತಿತ್ತು. ಈ ಬಗ್ಗೆ ಪ್ರಕರಣ ವಿಚಾರಣೆ ಕೈಗೆತ್ತಿಕೊಂಡಿದ್ದ ಸುಪ್ರೀಂ ಕೋರ್ಟ್ ಅನರ್ಹ ಶಾಸಕರ ಪರವಾಗಿ ತೀರ್ಪುನೀಡಿದ್ದು, ರಾಜ್ಯದ ಬಿಜೆಪಿ ಸರಕಾರದ ಕ್ರಮವು ಸಂವಿಧಾನ ಬಾಹಿರವಾಗಿದೆ ಎಂದು ತೀರ್ಪು ನೀಡಿತ್ತು. ಸರಕಾರದ ಈ ಕ್ರಮವನ್ನು ಸುಪ್ರೀಂಕೋರ್ಟ್ ಕಟು ಮಾತುಗಳಲ್ಲಿ ಟೀಕಿಸಿತ್ತು.

ಇದೀಗ ಸುಪ್ರೀಂ ಕೋರ್ಟ್‌ನ ತೀರ್ಪು ಹೊರಬಿದ್ದ ಬೆನ್ನಲ್ಲೇ ರಾಜ್ಯಪಾಲರು ರಾಜ್ಯ ಸರಕಾರವನ್ನು ಅಮಾನತಿನಲ್ಲಿಡಬೇಕು ಎಂದು ಶಿಫಾರಸು ಮಾಡಿದ್ದರು. ಆದರೆ ಕಾಂಗ್ರೆಸ್ ಹೈಕಮಾಂಡ್ ಇದಕ್ಕೆ ಸಮ್ಮತಿ ಸೂಚಿಸಿಲ್ಲ. ಕಾಂಗ್ರೆಸ್ ಹೈಕಮಾಂಡ್ ತನ್ನ ಸ್ವಾರ್ಥ ಸಾಧನೆಗಾಗಿ ರಾಜ್ಯದ ಜನತೆಯನ್ನು ಬಲಿಪಶು ಮಾಡಿ ಬಿಜೆಪಿ ಸರಕಾರವನ್ನು ಬಹುದೊಡ್ಡ ಗಂಡಾಂತರದಿಂದ ಪಾರು ಮಾಡಿದೆ.

ಭ್ರಷ್ಟಾಚಾರ, ಹಗರಣಗಳಲ್ಲಿ ಮುಳುಗಿ ಹೋಗಿರುವ ಮತ್ತು ಸಂವಿಧಾನಕ್ಕೆ ವಿರುದ್ಧವಾಗಿ ಆಡಳಿತ ನಡೆಸುತ್ತಿರುವ ರಾಜ್ಯದ ಬಿಜೆಪಿ ಸರಕಾರದ ವಿರುದ್ಧ ಕ್ರಮ ಕೈಗೊಳ್ಳಲು ಕಾಂಗ್ರೆಸ್ ಹೈಕಮಾಂಡ್ ಮುಂದಾಗಲಿ. ಇದು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಅತ್ಯಗತ್ಯವಾಗಿದೆ.

ರಾಯನ್ ಫೆರ್ನಾಂಡಿಸ್, ಪಕ್ಷಿಕೆರೆ

## ಭ್ರಷ್ಟ ರಾಜಕಾರಣಿಗಳ ವಿರುದ್ಧ ಕಾನೂನು ಕ್ರಮ ಅಗತ್ಯ

ಭಾರತದಲ್ಲಿ ಭ್ರಷ್ಟಾಚಾರ ಮಿತಿಮೀರುತ್ತಿದೆ. ಇಲ್ಲಿನ ರಾಜಕೀಯ ವ್ಯವಸ್ಥೆಯು ಭ್ರಷ್ಟಾಚಾರವನ್ನು ಪೋಷಿಸಿ ಬೆಳೆಸುತ್ತಿದೆ. ರಾಜಕಾರಣಿಗಳ ಪ್ರಭಾವದಿಂದಲೇ ಭ್ರಷ್ಟಾಚಾರ ವಿರೋಧಿ ಆಂದೋಲನಗಳು ಕೂಡ ಇಂದು ಕಲೆಗುಂದುತ್ತಿವೆ.

ಈಗಾಗಲೇ ಕಾಮನ್‌ವೆಲ್ತ್ ಹಗರಣದಲ್ಲಿ ಭಾಗಿಯಾರುವ ಸುರೇಶ್ ಕಲ್ಮಾಡಿ, ದೇಶವನ್ನೇ ಬೆಚ್ಚಿ ಬೀಳಿಸಿದ 2ಜಿ ಸ್ಪೆಕ್ಟ್ರಂ ಹಗರಣದಲ್ಲಿ ಭಾಗಿಯಾರುವ ಎ.ರಾಜಾ, ಈಗಾಗಲೇ ಜೈಲು ಪಾಲಾಗಿರುವ ಸಂಸದೆ ಕನ್ನಿಮೋಳಿ, ಸ್ವಜನ ಪಕ್ಷಪಾತದಲ್ಲಿ ತೊಡಗಿರುವ ಕರ್ನಾಟಕ ಮುಖ್ಯಮಂತ್ರಿ ಯಡಿಯೂರಪ್ಪ ಇಂತಹ ಹಲವು ರಾಜಕೀಯ ಪುಡಾರಿಗಳಿಂದ ಭ್ರಷ್ಟಾಚಾರವು ಅನಾವರಣಗೊಂಡಿದೆ.

ಭ್ರಷ್ಟ ರಾಜಕಾರಣಿಗಳ ವಿರುದ್ಧ ಕ್ರಮ ಕೈಗೊಳ್ಳಲು ಭಾರತ ದೇಶದಲ್ಲಿ ಸಮರ್ಪಕ ಕಾನೂನು ಇಲ್ಲದೇ ಇರುವುದು ಇನ್ನಷ್ಟು ಭ್ರಷ್ಟ ರಾಜಕಾರಣಿಗಳ ಹುಟ್ಟಿಗೆ ಕಾರಣವಾಗಿದೆ. ಭ್ರಷ್ಟಾಚಾರವನ್ನು ತಡೆಗಟ್ಟಲು ಹಾಗೂ ಭ್ರಷ್ಟರು ರಾಜಕೀಯ ಪ್ರವೇಶಿಸದಂತಿರಲು ಸೂಕ್ತ ಕಾನೂನು ರಚಿಸುವುದು ಅಗತ್ಯವಾಗಿದೆ.

ರಾಯನ್ ಫೆರ್ನಾಂಡಿಸ್, ಪಕ್ಷಿಕೆರೆ

## ಅಮೆರಿಕಾ ವಿರುದ್ಧ ಜಾಗತಿಕ ಧ್ವನಿ ಅಗತ್ಯ

ವಿಶ್ವದ ಅತಿ ದೊಡ್ಡ ಭಯೋತ್ಪಾದಕ ರಾಷ್ಟ್ರವೆಂದರೆ ಅದು ಅಮೆರಿಕಾ. ಅಮೆರಿಕಾ ನಡೆಸಿರುವ ರಕ್ತಪಾತಕ್ಕೆ ನಾಗಸಾಕಿ, ಹಿರೋಷಿಮಾ, ವಿಯೆಟ್ನಾಂ, ಇರಾಕ್, ಅಫ್ಘಾನಿಸ್ತಾ ಮೊದಲಾದ ರಾಷ್ಟ್ರಗಳು ಸಾಕ್ಷಿಯಾಗಿ ನಿಂತಿವೆ.

ಜಗತ್ತಿಗೆ ಮಾರಕವಾಗಿರುವ ಅಣ್ವಸ್ತ್ರಗಳನ್ನು ಶೇಖರಿಸಿಟ್ಟಿರುವ ಅಮೆರಿಕಾ ಯಾವುದೇ ದೇಶದ ಮೇಲೂ ದಾಳಿ ನಡೆಸಲು ಶಕ್ತವಾಗಿದೆ. ಆದರೆ ಅಮೆರಿಕಾ ನಡೆಸುತ್ತಿರುವ ಭಯೋತ್ಪಾದನೆಯ ವಿರುದ್ಧ ಯಾವುದೇ ದೇಶವು ಹೇಳಿಕೆ ನೀಡಲು ಮುಂದಾಗುತ್ತಿಲ್ಲ. ಕಾರಣ ಅದು ತನ್ನ ಮೇಲೆ ದಾಳಿ ನಡೆಸಬಹುದು ಎಂಬ ಆತಂಕದಿಂದಾಗಿದೆ.

ಅಮೆರಿಕಾ ಯಾವುದೇ ಅಂತಾರಾಷ್ಟ್ರೀಯ ಕಾನೂನುಗಳನ್ನು ಪಾಲಿಸುತ್ತಿಲ್ಲ. ಅದು ತನಗೆ ಬೇಕಾದ ಹಾಗೇ ಸಬೂಬು ನೀಡುತ್ತಾ ಒಂದೊಂದೇ ರಾಷ್ಟ್ರದ ಮೇಲೆ ದಾಳಿಗಳನ್ನು ನಡೆಸುತ್ತಿದೆ. ಮುಂದೊಂದು ದಿನ ಇಡೀ ವಿಶ್ವವನ್ನೇ ಅದು ತನ್ನ ತೆಕ್ಕೆಗೆ ತೆಗೆದುಕೊಂಡರೂ ಅಚ್ಚರಿಯಿಲ್ಲ. ಏಕೆಂದರೆ ಅಮೆರಿಕಾ ಅಷ್ಟೊಂದು ಬಲಾಢ್ಯವಾಗಿದೆ.

ಈ ನಿಟ್ಟಿನಲ್ಲಿ ಅಮೆರಿಕಾ ನಡೆಸುತ್ತಿರುವ ಜಾಗತಿಕ ಭಯೋತ್ಪಾದನೆಯ ಹಾಗೂ ಅದರ ಕುಟಿಲ ನೀತಿಗಳ ವಿರುದ್ಧ ವಿಶ್ವದ ಜನರಲ್ಲಿ ಅರಿವು ಮೂಡಿಸಬೇಕಾಗಿದೆ. ಎಲ್ಲಾ ದೇಶಗಳು ತಮ್ಮ ಆತಂಕವನ್ನು ದೂರ ಮಾಡಿಕೊಂಡು ಅಮೆರಿಕಾದ ವಿರುದ್ಧ ಧ್ವನಿ ಎತ್ತಬೇಕಾಗಿದೆ.

ಸಿನಾನ್, ಬಂದರ್

## ರಾಜಕೀಯ ಚದುರಂಗ

# ಎಡರಂಗ ಎಡವಿದ್ದೆಲ್ಲಿ?

● ಟಿ.ಅಹ್ಮದ್






ಬೃಹತ್ ಉದ್ಯಮಿಗಳಿಗೆ ಭೂಮಿಯನ್ನು ಅರ್ಪಿಸುವುದಕ್ಕಾಗಿ ಬಡವರು, ರೈತರನ್ನು ಬಡಿಯುವ ಮೂಲಕ ಕಾರ್ಲ್‌ಮಾರ್ಕ್ಸ್‌ನ ಅನುಯಾಯಿಗಳು ಆ್ಯಡಂ ಸ್ಮಿತ್‌ನ ಬಂಡವಾಳಶಾಹಿ ಧೋರಣೆಗೆ ಕಟ್ಟುಬಿದ್ದರು. ಇದು ಅವರಿಗೆ ಅಂತ್ಯದ ಸೂಚನೆಯೂ ಆಗಿತ್ತು. ಪಶ್ಚಿಮ ಬಂಗಾಳದಲ್ಲಿ 34 ವರ್ಷಗಳಷ್ಟು - ಅಂದರೆ ವಿಶ್ವದಲ್ಲೇ ಅತೀ ದೀರ್ಘ ಕಾಲ ಅಧಿಕಾರದಲ್ಲಿ ಬಾಳಿಕೆ ಬಂದ - ಕಮ್ಯುನಿಸ್ಟ್ ನೇತೃತ್ವದ ಲೆಫ್ಟ್ ಡೆಮಾಕ್ರಟಿಕ್ ಫ್ರಂಟ್ ಮಮತಾ ಬ್ಯಾನರ್ಜಿಯೆಂಬ ಮಹಿಳೆಯ ಮುಂದೆ ತಲೆ ಬಾಗಿತು. ಒಂದು ಕಾಲದಲ್ಲಿ ತನ್ನ ಕುಟುಂಬವನ್ನು ಸಲಹುವುದಕ್ಕಾಗಿ ಹಾಲು ಮಾರುತ್ತಿದ್ದ ಮಹಿಳೆಯೊಬ್ಬಳು ರಾಜ್ಯದ ಮೊದಲ ಮಹಿಳಾಮುಖ್ಯಮಂತ್ರಿಯಾದರು. ರಾಜ್ಯದಲ್ಲಿ ಕಮ್ಯುನಿಸ್ಟ್‌ಗೆ ಅಂತ್ಯ ತರುವುದಕ್ಕಾಗಿ ಆಕೆ ಪಣತೊಟ್ಟಿದ್ದರು ಮತ್ತು ನಿರಂತರವಾಗಿ ಶ್ರಮಿಸಿದ್ದರು. ಯಶಸ್ಸಿಗಾಗಿ ಶ್ರಮಿಸುವ

ಎಡರಂಗದ ಈ ರೈತ ವಿರೋಧಿ ನೀತಿಯನ್ನು ವಿರೋಧಿಸಿ ಮಮತಾ ಉಪವಾಸ ಸತ್ಯಾಗ್ರಹ ಆರಂಭಿಸಿದರು ಮತ್ತು ತನ್ನ ಉದ್ದೇಶದಲ್ಲಿ ಯಶಸ್ಸು ಕಂಡರು. 2007ರಲ್ಲಿ ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಬುದ್ಧದೇವ್ ಭಟ್ಟಾಚಾರ್ಯ ನೇತೃತ್ವದ ಸರಕಾರ ರೈತರ ಭೂಮಿಯನ್ನು ಕಿತ್ತುಕೊಳ್ಳಲು ಮುಂದಡಿಯಿಟ್ಟಿತು. ಪ್ರತಿಭಟಿಸಿದ ರೈತರ ವಿರುದ್ಧ ಕಮ್ಯುನಿಸ್ಟ್ ನೇತೃತ್ವದ ಸರಕಾರ ತನ್ನ 'ಕತ್ತಿ-ಸುತ್ತೆ'ಯನ್ನು ಚೆನ್ನಾಗಿ ಬಳಸಿತು. ಅದು 14 ಮಂದಿಯನ್ನು ಗುಂಡಿಕ್ಕಿ ಕೊಂದು ಹಾಕಿತು. 70ಕ್ಕೂ ಅಧಿಕ ಮಂದಿ ಪೊಲೀಸ್ ದೌರ್ಜನ್ಯದಲ್ಲಿ ಗಾಯಗೊಂಡರು.

ಮಹಿಳೆಯರು ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ತಲೆಯೆತ್ತಿರುವ ಹೊಸ ಪಕ್ಷಗಳು ಹಾಗೂ ಅದರ ಕಾರ್ಯಕರ್ತರಿಗೆ ಮಮತಾರ ಯಶಸ್ಸಿನಲ್ಲಿ ಪಾಠವಿದೆ.

1984ರಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ ಪ್ರಮುಖ ನಾಯಕ ಸೋಮನಾಥ್ ಚಟರ್ಜಿಯನ್ನು ಜಾದವ್‌ಪುರ ಲೋಕಸಭಾ ಕ್ಷೇತ್ರದಿಂದ ಸೋಲಿಸುವುದರೊಂದಿಗೆ ಮಮತಾ ದೇಶದ ಅತ್ಯಂತ ಕಿರು ಹರೆಯದ ಎಂಪಿಯಾದರು. ಅವರು ಕೆಲವು ಭಿನ್ನಾಭಿಪ್ರಾಯಗಳಿಂದಾಗಿ 1997ರಲ್ಲಿ ಕಾಂಗ್ರೆಸ್‌ನಿಂದ ಹೊರಬಂದು ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸನ್ನು ಸ್ಥಾಪಿಸಿದರು. ಹದಿನಾಲ್ಕು ವರ್ಷಗಳೊಳಗೆ ಆ ಪಕ್ಷದಲ್ಲಿ ಮುಖ್ಯಮಂತ್ರಿ ಗಾದಿಯನ್ನು ಏರಿದರು. 2006ರ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಬಿಜೆಪಿಯೊಂದಿಗೆ ಮೈತ್ರಿ ಮಾಡಿತ್ತು. ಆಗ ತೃಣಮೂಲಕ್ಕೆ ದೊರಕಿದ್ದು 30 ಸೀಟುಗಳಾದರೆ, ಎಡರಂಗ 233 ಸೀಟುಗಳನ್ನು ದಕ್ಕಿಸಿಕೊಂಡಿತು. ಅಧಿಕಾರಕ್ಕೇರಿದ ಎಡರಂಗ ಅದೇ ವರ್ಷ ಸಿಂಗೂರ್‌ನಲ್ಲಿ ರೈತರಿಂದ ಫಲವತ್ತಾದ ಭೂಮಿಯನ್ನು ಕಸಿದು ಟಾಟಾ ಮೋಟಾರ್ಸ್‌ಗೆ ನೀಡಲು ಮುಂದಾಯಿತು. ಇದನ್ನು ಪ್ರತಿಭಟಿಸಿದ ರೈತರ ಮೇಲೆ ಕಮ್ಯುನಿಸ್ಟ್ ಸರಕಾರ ಕತ್ತಿ, ಸುತ್ತಿಗೆ ಬೀಸಿತು. ತಮ್ಮ ರಕ್ಷಕರೆಂದು ಭಾವಿಸಿದ್ದವರಿಂದಲೇ ರೈತರು ದೌರ್ಜನ್ಯಕ್ಕೊಳಗಾದರು. ಸಿಂಗೂರಿನ ನೆಲದಲ್ಲಿ ಚಿಮ್ಮಿದ ರೈತರ ರಕ್ತವು ಕಮ್ಯುನಿಸ್ಟ್ ಪಕ್ಷದ ಬಣ್ಣದೊಂದಿಗೆ ವಿಲೀನಗೊಂಡಿತು.

ಎಡರಂಗದ ಈ ರೈತ ವಿರೋಧಿ ನೀತಿಯನ್ನು ವಿರೋಧಿಸಿ ಮಮತಾ ಉಪವಾಸ ಸತ್ಯಾಗ್ರಹ ಆರಂಭಿಸಿದರು ಮತ್ತು ತನ್ನ ಉದ್ದೇಶದಲ್ಲಿ ಯಶಸ್ಸು ಕಂಡರು. 2007ರಲ್ಲಿ ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಬುದ್ಧದೇವ್ ಭಟ್ಟಾಚಾರ್ಯ ನೇತೃತ್ವದ ಸರಕಾರ ರೈತರ ಭೂಮಿಯನ್ನು ಕಿತ್ತುಕೊಳ್ಳಲು ಮುಂದಡಿಯಿಟ್ಟಿತು. ಪ್ರತಿಭಟಿಸಿದ ರೈತರ ವಿರುದ್ಧ ಕಮ್ಯುನಿಸ್ಟ್

ಈ ಚುನಾವಣೆಯಲ್ಲಿ ರಾಜ್ಯದ ದೊಡ್ಡ ಅಲ್ಪಸಂಖ್ಯಾತ ಸಮುದಾಯವಾದ ಮುಸ್ಲಿಮರು ಎಡರಂಗವನ್ನು ಅಲ್ಲಗಳೆದಿರುವುದು ವಾಸ್ತವವಾಗಿದೆ. ಎಡರಂಗದ ಹೀನಾಯ ಸೋಲಿಗೆ ಇದೂ ಒಂದು ಕಾರಣವಾಗಿತ್ತು. ಮುಸ್ಲಿಮರ ಈ ನಿರ್ಧಾರಕ್ಕೆ ಕಾರಣವೂ ಇದೆ. ಪಶ್ಚಿಮ ಬಂಗಾಳದಲ್ಲಿ ಎಡರಂಗ 30 ವರ್ಷ ಆಡಳಿತ ನಡೆಸಿದ್ದರೂ ಮುಸ್ಲಿಮರು ಕೇವಲ ಓಟ್‌ಬ್ಯಾಂಕ್‌ಗಳಾಗಿ ಉಳಿದಿದ್ದರು. ಇಲ್ಲಿನ ಮುಸ್ಲಿಮರ ಸಾಮಾಜಿಕ -ಆರ್ಥಿಕ ಸ್ಥಿತಿ ಬಿಜೆಪಿ ಆಡಳಿತ ನಡೆಸುತ್ತಿರುವ ಗುಜರಾತ್‌ಗೂ ಹೀನಾಯವಾಗಿತ್ತು. ಪಶ್ಚಿಮ ಬಂಗಾಳದಲ್ಲಿ 25% ಶೇಕಡ ಮುಸ್ಲಿಮರಿದ್ದರೂ, ಸರಕಾರಿ ಉದ್ಯೋಗಗಳಲ್ಲಿ ಅವರಿಗಿರುವ ಪಾಲು ಕೇವಲ ಶೇ. 2.1 ಮಾತ್ರವಾಗಿತ್ತು.

ನೇತೃತ್ವದ ಸರಕಾರ ತನ್ನ 'ಕತ್ತಿ-ಸುತ್ತೆ'ಯನ್ನು ಚೆನ್ನಾಗಿ ಬಳಸಿತು. ಅದು 14 ಮಂದಿಯನ್ನು ಗುಂಡಿಕ್ಕಿ ಕೊಂದು ಹಾಕಿತು. 70ಕ್ಕೂ ಅಧಿಕ ಮಂದಿ ಪೊಲೀಸ್ ದೌರ್ಜನ್ಯದಲ್ಲಿ ಗಾಯಗೊಂಡರು. ರಾಜ್ಯದಲ್ಲಿ ಎಡರಂಗದ ಕುಸಿತದ ಆರಂಭ ಈ ಎರಡು ಘಟನೆಗಳಾಗಿದ್ದವು.

1977ರಲ್ಲಿ ಅಧಿಕಾರಕ್ಕೇರಿದ ಎಡರಂಗ ರಾಜ್ಯದಲ್ಲಿ ಹಲವು ಭೂಸುಧಾರಣಾ ಕಾಯ್ದೆಗಳನ್ನು ತಂದಿತ್ತು. ಆಗ ಅದರ ಚಿತ್ತ ರೈತರು, ಬಡವರ ಮೇಲಿತ್ತು. ಅವರ ಹೆಸರಿನಲ್ಲೇ ಚುನಾವಣೆಗಳನ್ನು ಗೆಲ್ಲುತ್ತಾ ಬಂದಿತು.ಆದರೆ ಎಡವು ಬಂಡವಾಳಶಾಹಿಗಳ ಪರವಾದಾಗ ಜನ ಪಕ್ಷದ ವಿರುದ್ಧ ತಿರುಗಿ ನಿಂತರು. ಮಮತಾ ಅದರ ಲಾಭವನ್ನು ಪೂರ್ಣವಾಗಿ ಪಡೆದರು.

ಈ ಚುನಾವಣೆಯಲ್ಲಿ ರಾಜ್ಯದ ದೊಡ್ಡ ಅಲ್ಪಸಂಖ್ಯಾತ ಸಮುದಾಯವಾದ ಮುಸ್ಲಿಮರು ಎಡರಂಗವನ್ನು ಅಲ್ಲಗಳೆದಿರುವುದು ವಾಸ್ತವವಾಗಿದೆ. ಎಡರಂಗದ ಹೀನಾಯ ಸೋಲಿಗೆ ಇದೂ ಒಂದು ಕಾರಣವಾಗಿತ್ತು. ಮುಸ್ಲಿಮರ ಈ ನಿರ್ಧಾರಕ್ಕೆ ಕಾರಣವೂ ಇದೆ. ಪಶ್ಚಿಮ ಬಂಗಾಳದಲ್ಲಿ ಎಡರಂಗ 30 ವರ್ಷ ಆಡಳಿತ ನಡೆಸಿದ್ದರೂ ಮುಸ್ಲಿಮರು ಕೇವಲ ಓಟ್‌ಬ್ಯಾಂಕ್‌ಗಳಾಗಿ ಉಳಿದಿದ್ದರು. ಇಲ್ಲಿನ ಮುಸ್ಲಿಮರ ಸಾಮಾಜಿಕ -ಆರ್ಥಿಕ ಸ್ಥಿತಿ ಬಿಜೆಪಿ ಆಡಳಿತ ನಡೆಸುತ್ತಿರುವ ಗುಜರಾತ್‌ಗೂ ಹೀನಾಯವಾಗಿತ್ತು. ಪಶ್ಚಿಮ ಬಂಗಾಳದಲ್ಲಿ 25% ಶೇಕಡ ಮುಸ್ಲಿಮರಿದ್ದರೂ, ಸರಕಾರಿ ಉದ್ಯೋಗಗಳಲ್ಲಿ ಅವರಿಗಿರುವ ಪಾಲು ಕೇವಲ ಶೇ. 2.1 ಮಾತ್ರವಾಗಿತ್ತು.

ರಾಜ್ಯದ 50% ಶೇಕಡ ಮುಸ್ಲಿಮ್ ಮಕ್ಕಳು ಪ್ರಾಥಮಿಕ ಶಿಕ್ಷಣದಿಂದ ವಂಚಿತರು. ಇಲ್ಲಿ ಕೇಂದ್ರ ಸರಕಾರದ 12 ಅಲ್ಪಸಂಖ್ಯಾತ ಕೇಂದ್ರೀಕೃತ ಜಿಲ್ಲೆಗಳಿವೆ. ಈ ಜಿಲ್ಲೆಗಳಿಗೆ ಕೇಂದ್ರ ಸರಕಾರವು ಹಲವು ಯೋಜನೆಗಳಡಿಯಲ್ಲಿ ಅನುದಾನಗಳನ್ನು ನೀಡುತ್ತದೆ. ಆದರೆ 'ಅಲ್ಪಸಂಖ್ಯಾತರ ಪರ' ಕಮ್ಯುನಿಸ್ಟ್ ನೇತೃತ್ವದ ಸರಕಾರ ಇದರಲ್ಲಿ ಕೇವಲ 6 ಶೇಕಡವನ್ನಷ್ಟೇ ಬಳಸಿದೆ. ರಾಜ್ಯದಲ್ಲಿರುವ 3000 ಮುಸ್ಲಿಮ್ ಕೇಂದ್ರೀಕೃತ ಗ್ರಾಮಗಳಲ್ಲಿ ವೈದ್ಯಕೀಯ, ಅಂಚೆ, ಟೆಲಿಗ್ರಾಫ್ ಸೌಕರ್ಯಗಳಿಲ್ಲ.

ಈಗ ಮುಸ್ಲಿಮರು ಈ ಎಲ್ಲಾ ಅಂಶಗಳನ್ನು ಮನವರಿಕೆ ಮಾಡಿಕೊಂಡಿದ್ದಾರೆ. ಈ ಚುನಾವಣೆಯಲ್ಲಿ ಅವರು ಮಮತಾ ಬ್ಯಾನರ್ಜಿಯನ್ನು ಬೆಂಬಲಿಸಿದ್ದಾರೆ. ಗೆಲುವು ಆಕೆಯದ್ದಾಗಲು ಮುಸ್ಲಿಮ್ ಸಮುದಾಯದ ಪಾತ್ರ ಮಹತ್ವದ್ದಾಗಿತ್ತು.



ಮುಸ್ಲಿಮರು ತನ್ನ ಮೇಲಿಟ್ಟ ಭರವಸೆಯನ್ನು ಮಮತಾ ಉಳಿಸಲಿದ್ದಾರೆಯೇ ಎಂಬುದು ಮಾತ್ರ ಈಗಿರುವ ಪ್ರಶ್ನೆಯಾಗಿದೆ. ಆಕೆ ಮುಸ್ಲಿಮರ ಭರವಸೆಯನ್ನು ಉಳಿಸಿಕೊಳ್ಳಬಹುದೆಂಬುದಕ್ಕೆ ಕೆಲವೊಂದು ಅಂಶಗಳು ನಮ್ಮ ಮುಂದಿವೆ. ಮಮತಾ ಕ್ಯಾಬಿನೆಟ್‌ನ 37 ಸದಸ್ಯರೊಂದಿಗೆ ಪ್ರಮಾಣ ವಚನ ಸ್ವೀಕರಿಸದ್ದಾರೆ. ತನ್ನ ಮೆಚ್ಚುಗೆಯ ವರ್ಗಗಳನ್ನು ಆಕೆ ಕ್ಯಾಬಿನೆಟ್‌ನಲ್ಲಿ ಸೇರಿಸಿದ್ದಾರೆ. ಈಗ ಮಮತಾರನ್ನೊಳಗೊಂಡಂತೆ 38 ಕ್ಯಾಬಿನೆಟ್ ಸದಸ್ಯರಲ್ಲಿ ಆರು ಮಂದಿ ಮುಸ್ಲಿಮರಾಗಿದ್ದಾರೆ. ಅವರಲ್ಲಿ 5 ಮಂದಿ ತೃಣಮೂಲ ಪಕ್ಷದವರಾದರೆ, ಒಬ್ಬ ಮಾತ್ರ ಕಾಂಗ್ರೆಸ್ಸಿಗ.

ಅಲ್ಪಸಂಖ್ಯಾತ ವ್ಯವಹಾರ ಮತ್ತು ಮದ್ರಸಾ ಶಿಕ್ಷಣ

***ಹಿಂದೂ ಮತವನ್ನು ಸೆಳೆಯುವುದು 'ಸೆಕ್ಯುಲರ್' ಕಮ್ಯುನಿಸ್ಟ್ ಪಕ್ಷದ ಉದ್ದೇಶವಾಗಿತ್ತು. ಆಗಿನ ಮುಖ್ಯಮಂತ್ರಿ ಅಚ್ಯುತಾನಂದ್ ಕೇರಳದಲ್ಲಿ 'ಲವ್ ಜಿಹಾದ್' ಕಲ್ಪನೆಯನ್ನು ಹರಡುವ ಮೂಲಕ ಸಂಘಪರಿವಾರಕ್ಕೆ ಸಾಥ್ ನೀಡಿದ್ದರು. ಇದು ಮುಸ್ಲಿಮರಿಗೆ ಕಮ್ಯುನಿಸ್ಟ್ ಆಡಳಿತದ ಬಗ್ಗೆ ಭ್ರಮನಿರಸನವುಂಟುಮಾಡಿತ್ತು. ನಂತರದ ಸ್ಥಳೀಯ ಚುನಾವಣೆಯಲ್ಲೇ ಕಮ್ಯುನಿಸ್ಟ್ ಇದರ ಪರಿಣಾಮವನ್ನು ಉಂಡಿತ್ತು. ಸ್ಥಳೀಯ ಸಂಸ್ಥೆಗೆ ನಡೆದ ಚುನಾವಣೆಯಲ್ಲಿ ಪಾಪ್ಯುಲರ್ ಫ್ರಂಟ್ ಬೆಂಬಲಿತ ಎಸ್‌ಡಿಪಿಐಯಲ್ಲಿ ಸ್ಪರ್ಧಿಸಿದ ಕಮ್ಯುನಿಸ್ಟ್ ಹೇಳಿದ ಕೈಕಡಿತದ 'ಆರೋಪಿ' ವಿಜಯವನ್ನು ಸಂಪಾದಿಸಿದ್ದರು. ಇದು ಕಮ್ಯುನಿಸ್ಟ್‌ಗೆ ಮುಖಭಂಗವೂ ಆಗಿತ್ತು.***

ಖಾತೆಯನ್ನು ಮಮತಾ ತನ್ನಲ್ಲೇ ಇಟ್ಟುಕೊಂಡಿರುವುದು ಈಗ ಎಲ್ಲರಿಗೂ ಕುತೂಹಲವನ್ನುಂಟುಮಾಡಿದೆ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ವಿಶೇಷ ಒತ್ತು ಕೊಡುವ ಮೂಲಕ ರಾಜ್ಯದಲ್ಲಿ ತನ್ನ ಪಕ್ಷವನ್ನು ಭದ್ರಗೊಳಿಸುವ ಎಣಿಕೆ ಅವರದ್ದಾಗಿರಬಹುದೆಂಬುದು ಕೆಲವರ ಅಭಿಪ್ರಾಯವಾಗಿದೆ. ಏನೇ ಆದರೂ ರಾಜ್ಯದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೇರಿದ ಮಮತಾ ಎಲ್ಲ ವರ್ಗಗಳಿಗೂ ನ್ಯಾಯಯುತ ಆಡಳಿತವನ್ನು ನೀಡಲಿ ಎಂಬುದು ಎಲ್ಲರ ಹಾರೈಕೆಯಾಗಿದೆ.



ಕಮ್ಯುನಿಸ್ಟ್ ಪಕ್ಷ ಕೇರಳದಲ್ಲೂ ಸೋಲುಂಡಿದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಕಮ್ಯುನಿಸ್ಟ್ ನೇತೃತ್ವದ ಎಲ್‌ಡಿಎಫ್ ವಿರುದ್ಧ ಸಣ್ಣ ಅಂತರದಲ್ಲಿ ಜಯ ಸಾಧಿಸಿದೆ. ಈ ಹಿಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಎಲ್‌ಡಿಎಫ್ ತೀವ್ರ ಹಿನ್ನಡೆ ಅನುಭವಿಸಿತ್ತು. ಇಲ್ಲೂ ಎಲ್‌ಡಿಎಫ್ ಸೋಲಿನಲ್ಲಿ ಮುಸ್ಲಿಮರ ಪಾತ್ರವಿತ್ತು. ಎಡ ಸಿದ್ಧಾಂತವು ಬಲದತ್ತ ವಾಲುತ್ತಿದ್ದುದೇ ಕೇರಳ ಚುನಾವಣೆಯಲ್ಲಿ ಎಲ್‌ಡಿಎಫ್ ಸೋಲಿಗೆ ಕಾರಣವಾಗಿತ್ತು. ಕಳೆದ ವರ್ಷ ಪ್ರವಾದಿ ನಿಂದನೆಯೆದುರಿಸುತ್ತಿದ್ದ ಆರೋಪಿಯೊಬ್ಬನ ಕೈ ಕತ್ತರಿಸಲ್ಪಟ್ಟಾಗ ಎಲ್‌ಡಿಎಫ್ ಸರಕಾರ ರಾಜ್ಯದಲ್ಲಿ ಮುಸ್ಲಿಮರ ಬೇಟೆಯಾಡಿತ್ತು. ಕೇರಳದಲ್ಲಿ ಈ ಹಿಂದೆ ಹಲವು ಮಂದಿಯ ತಲೆ ಕತ್ತರಿಸಿದ ಕಳಂಕವನ್ನು ಹೊಂದಿದ್ದ ಕಮ್ಯುನಿಸ್ಟ್ ಪಕ್ಷ, ಈ ಸ್ಥಳೀಯ ಘಟನೆಯನ್ನು ರಾಷ್ಟ್ರಮಟ್ಟದಲ್ಲಿ ಮಾಧ್ಯಮ ಬೆಂಬಲದೊಂದಿಗೆ ಪ್ರಚಾರಕ್ಕಿಟ್ಟಿತು. ಅಲ್ಲಿನ ಪ್ರಮುಖ ಮುಸ್ಲಿಮ್ ಸಂಘಟನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಎಲ್ಲಾ ಕಚೇರಿಗಳ ಮೇಲೆ ದಾಳಿ ನಡೆಸಿತು. ಹಲವು ಮುಸ್ಲಿಮ್ ಅಮಾಯಕ ಯುವಕರನ್ನು ಬಂಧಿಸಲಾಯಿತು.

ಹಿಂದೂ ಮತವನ್ನು ಸೆಳೆಯುವುದು 'ಸೆಕ್ಯುಲರ್' ಕಮ್ಯುನಿಸ್ಟ್ ಪಕ್ಷದ ಉದ್ದೇಶವಾಗಿತ್ತು. ಆಗಿನ ಮುಖ್ಯಮಂತ್ರಿ ಅಚ್ಯುತಾನಂದ್ ಕೇರಳದಲ್ಲಿ 'ಲವ್ ಜಿಹಾದ್' ಕಲ್ಪನೆಯನ್ನು ಹರಡುವ ಮೂಲಕ ಸಂಘಪರಿವಾರಕ್ಕೆ ಸಾಥ್ ನೀಡಿದ್ದರು. ಇದು ಮುಸ್ಲಿಮರಿಗೆ ಕಮ್ಯುನಿಸ್ಟ್ ಆಡಳಿತದ ಬಗ್ಗೆ ಭ್ರಮನಿರಸನವುಂಟುಮಾಡಿತ್ತು. ನಂತರದ ಸ್ಥಳೀಯ ಚುನಾವಣೆಯಲ್ಲೇ ಕಮ್ಯುನಿಸ್ಟ್ ಇದರ ಪರಿಣಾಮವನ್ನು ಉಂಡಿತ್ತು. ಸ್ಥಳೀಯ ಸಂಸ್ಥೆಗೆ ನಡೆದ ಚುನಾವಣೆಯಲ್ಲಿ ಪಾಪ್ಯುಲರ್ ಫ್ರಂಟ್ ಬೆಂಬಲಿತ ಎಸ್‌ಡಿಪಿಐಯಲ್ಲಿ ಸ್ಪರ್ಧಿಸಿದ ಕಮ್ಯುನಿಸ್ಟ್ ಹೇಳಿದ ಕೈಕಡಿತದ 'ಆರೋಪಿ' ವಿಜಯಾಗಿದ್ದರು. ಇದು ಕಮ್ಯುನಿಸ್ಟ್‌ಗೆ ಮುಖಭಂಗವೂ ಆಗಿತ್ತು.

ಅಸೆಂಬ್ಲಿ ಚುನಾವಣೆಯಲ್ಲೂ ಎಸ್‌ಡಿಪಿಐ ಕಮ್ಯುನಿಸ್ಟ್ ವಿರುದ್ಧ ಕೆಲಸ ಮಾಡಿತ್ತು. ಕೇರಳದಲ್ಲಿ ಎಸ್‌ಡಿಪಿಐ 82 ಕಡೆಗಳಲ್ಲಿ ಸ್ಪರ್ಧಿಸಿತ್ತು. ಕಮ್ಯುನಿಸ್ಟ್ ಅಭ್ಯರ್ಥಿಗಳಿಗೆ ಸೋಲುಣಿಸುವುದರಲ್ಲಿ ಎಸ್‌ಡಿಪಿಐ ನಿರ್ಣಾಯಕ ಪಾತ್ರ ವಹಿಸಿತ್ತು.

ಆಯಿಕೋಡ್ ಮತ್ತು ಮನಲ್ಲೂರು ಅಸೆಂಬ್ಲಿಗಳಲ್ಲಿ ಎಲ್‌ಡಿಎಫ್ ಅಭ್ಯರ್ಥಿಗಳು 493, 481 ಮತಗಳ ಅಂತರದಲ್ಲಿ ಸೋಲುಂಡಿದ್ದರು. ಇಲ್ಲಿ ಎಸ್‌ಡಿಪಿಐ ಅಭ್ಯರ್ಥಿಗಳು ಕ್ರಮವಾಗಿ 2935, 2293 ಮತಗಳನ್ನು ಪಡೆದಿದ್ದರು. ಎಸ್‌ಡಿಪಿಐ ಈ ಚುನಾವಣೆಯಲ್ಲಿ ಎಲ್‌ಡಿಎಫ್‌ಅನ್ನು ಬೆಂಬಲಿಸಿದ್ದರೆ, ಎಲ್‌ಡಿಎಫ್ ಇನ್ನೂ ಕೆಲವು ಸೀಟುಗಳನ್ನು ಪಡೆಯುತ್ತಿತ್ತು ಮತ್ತು ರಾಜ್ಯದಲ್ಲಿ ಅಧಿಕಾರವನ್ನು ಏರುತ್ತಿತ್ತು. ಆದರೆ ಅಧಿಕಾರಕ್ಕೇರಲು ಎಲ್‌ಡಿಎಫ್ 4 ಸೀಟುಗಳ ಕೊರತೆಯನ್ನು ಅನುಭವಿಸಿತು.

ಪಶ್ಚಿಮ ಬಂಗಾಳ ಹಾಗೂ ಕೇರಳದ ಸೋಲಿನಲ್ಲಿ ಕಮ್ಯುನಿಸ್ಟ್‌ಗೆ ಪಾಠವಿದ್ದು, ಇನ್ನಾದರೂ ಬಡವರ ಪರ, ಅಲ್ಪಸಂಖ್ಯಾತರ ಪರವೆಂಬ ತನ್ನ ಪ್ರತಿಪಾದನೆಗಳನ್ನು ಕಮ್ಯುನಿಸ್ಟ್ ನಿಜವಾಗಿ ಮಾಡಿ ತೋರಿಸಬೇಕಾಗಿದೆ. ಇದು ಸಿದ್ಧಾಂತದ ಸೋಲಲ್ಲ, ಪಕ್ಷದ ಸೋಲು ಎಂಬುದನ್ನು ಅರಿತು ಸಿದ್ದಾಂತಕ್ಕೆ ಬದ್ಧವಾಗಿ ಕೆಲಸಮಾಡಬೇಕಾಗಿದೆ.

ಇನ್ನು ತಮಿಳುನಾಡಿನಲ್ಲಿ ಕರುಣಾನಿಧಿಯ ಡಿಎಂಕೆ ಜಯಲಲಿತಾ ನೇತೃತ್ವದ ಎಐಎಡಿಎಂಕೆ ಮೈತ್ರಿಯ ವಿರುದ್ಧ ಹೀನಾಯ ಸೋಲು ಕಂಡಿದೆ. ರಾಷ್ಟ್ರೀಯ ಮಟ್ಟದಲ್ಲಿ 2ಜಿ ಸ್ಪೆಕ್ಟ್ರಂ ಹಗರಣವನ್ನು ಒಳಗೊಂಡಂತೆ ರಾಜ್ಯದಲ್ಲಿ ಕರುಣಾನಿಧಿ ಕುಟುಂಬದ ವ್ಯಾಪಕ ಭ್ರಷ್ಟಾಚಾರದ ವಿರುದ್ಧ ಜನ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಂದು ಈಗ ಜಯಗಳಿಸಿರುವ ಜಯಲಲಿತಾರೇನೂ ಭ್ರಷ್ಟಾಚಾರದ ಕಳಂಕವನ್ನು ಹೊಂದಿರದವರಲ್ಲ. 1991-96ರ ತನಕ ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾದಾಗ ಮಾಡಿದ ಭ್ರಷ್ಟಾಚಾರಗಳ ಪ್ರಕರಣವು ಆಕೆ ಹಾಗೂ ಆಕೆಯ ಕ್ಯಾಬಿನೆಟ್ ಸಹೋದ್ಯೋಗಿಗಳ ಮೇಲೆ ಇನ್ನೂ ಇದೆ ಎಂಬುದನ್ನು ಮರೆಯಲಾಗದು.

ಜಯಲಲಿತಾ ತನ್ನ ಹಿಂದುತ್ವ ಮನೋಸ್ಥಿತಿಗೆ ಚಿರಪರಿಚಿತರಾಗಿದ್ದಾರೆ. ತನ್ನ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಆಹ್ವಾನಿಸುವ ಮೂಲಕ ಹಿಂದುತ್ವಕ್ಕೆ ತನ್ನ ಬೆಂಬಲವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದರು. ಎಲ್ಲದಕ್ಕೂ ಮೊದಲಾಗಿ ಬಾಬ್ರಿ ಮಸ್ಜಿದ್ ಧ್ವಂಸಕ್ಕೆ ಕಾರಣವಾದ ಕರಸೇವೆಯನ್ನು ಅಂದು ಆಕೆ ಬೆಂಬಲಿಸಿದ್ದೂ ಮರೆಯಲಸಾಧ್ಯವಾದದ್ದಾಗಿದೆ. ಜಯಲಲಿತಾರ ಹಿಂದಿನ ಆಡಳಿತವು ಜನಪರವಾಗಿರಲಿಲ್ಲ ಮತ್ತು ಈಗಲೂ ಆಕೆಯಲ್ಲಿ ಅದರ ಸಂಕೇತಗಳು ಉಳಿದಿವೆ.

ಆದರೆ ಜನರೇಕೆ ಎಡಿಎಂಕೆಯನ್ನು ಆರಿಸಿದರು? ತಮಿಳುನಾಡಿನಲ್ಲಿ ಈ ಎರಡು ದ್ರಾವಿಡ ಪಕ್ಷಗಳನ್ನು ಬಿಟ್ಟರೆ ಪರ್ಯಾಯ ಆಯ್ಕೆಯಿರಲಿಲ್ಲ. ಇದು ತಮಿಳುನಾಡಿನ ಜನರನ್ನು ಎಡಿಎಂಕೆಗೆ ಮತ ನೀಡುವ ಇಕ್ಕಟ್ಟಿನಲ್ಲಿ ಸಿಲುಕಿಸಿತ್ತು.

5 ರಾಜ್ಯಗಳಲ್ಲಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಆರೆಸ್ಸೆಸ್‌ನ ರಾಜಕೀಯ ವಿಂಗ್ ಬಿಜೆಪಿ ಹೀನಾಯ ಸೋಲನುಭವಿಸಿರುವುದು ಉತ್ತಮ ಬೆಳವಣಿಗೆ. ಐದು ರಾಜ್ಯಗಳಲ್ಲಿ ಒಟ್ಟು 800ಕ್ಕೂ ಅಧಿಕ ಅಸೆಂಬ್ಲಿ ಸೀಟುಗಳಿಗೆ ಚುನಾವಣೆ ನಡೆದಿದ್ದು, ಬಿಜೆಪಿ ಹಲವು ಸೀಟುಗಳಲ್ಲಿ ಸ್ಪರ್ಧಿಸಿದ್ದರೂ ಅದು ಎರಡಂಕಿ ಮೊತ್ತವನ್ನು ತಲುಪಲು ವಿಫಲವಾಗಿರುವುದು ಗಮನಾರ್ಹ. ಪಶ್ಚಿಮಬಂಗಾಳದಲ್ಲಿ 294 ಸೀಟುಗಳಿಗೆ, ತಮಿಳುನಾಡಿನಲ್ಲಿ 234 ಸೀಟುಗಳಿಗೆ, ಅಸ್ಸಾಮ್‌ನಲ್ಲಿ 126 ಸೀಟುಗಳಿಗೆ, ಕೇರಳದಲ್ಲಿ 140 ಸೀಟುಗಳಿಗೆ ಮತ್ತು ಪಾಂಡಿಚೇರಿಯಲ್ಲಿ 30 ಸೀಟುಗಳಿಗೆ ಚುನಾವಣೆ ನಡೆದಿತ್ತು. ಬಿಜೆಪಿ ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿಗಳಲ್ಲಿ ಸೊನ್ನೆ ಸಂಪಾದಿಸಿದರೆ, ಅಸ್ಸಾಮ್‌ನಲ್ಲಿ 5 ಹಾಗೂ ಪಶ್ಚಿಮಬಂಗಾಳದಲ್ಲಿ ಒಂದು ಸೀಟನ್ನು ಸಂಪಾದಿಸಿದೆ.

*5 ರಾಜ್ಯಗಳಲ್ಲಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಆರೆಸ್ಸೆಸ್‌ನ ರಾಜಕೀಯ ವಿಂಗ್ ಬಿಜೆಪಿ ಹೀನಾಯ ಸೋಲನುಭವಿಸಿರುವುದು ಉತ್ತಮ ಬೆಳವಣಿಗೆ. ಐದು ರಾಜ್ಯಗಳಲ್ಲಿ ಒಟ್ಟು 800ಕ್ಕೂ ಅಧಿಕ ಅಸೆಂಬ್ಲಿ ಸೀಟುಗಳಿಗೆ ಚುನಾವಣೆ ನಡೆದಿದ್ದು, ಬಿಜೆಪಿ ಹಲವು ಸೀಟುಗಳಲ್ಲಿ ಸ್ಪರ್ಧಿಸಿದ್ದರೂ ಅದು ಎರಡಂಕಿ ಮೊತ್ತವನ್ನು ತಲುಪಲು ವಿಫಲವಾಗಿರುವುದು ಗಮನಾರ್ಹ. ಪಶ್ಚಿಮಬಂಗಾಳದಲ್ಲಿ 294 ಸೀಟುಗಳಿಗೆ, ತಮಿಳುನಾಡಿನಲ್ಲಿ 234 ಸೀಟುಗಳಿಗೆ, ಅಸ್ಸಾಮ್‌ನಲ್ಲಿ 126 ಸೀಟುಗಳಿಗೆ, ಕೇರಳದಲ್ಲಿ 140 ಸೀಟುಗಳಿಗೆ ಮತ್ತು ಪಾಂಡಿಚೇರಿಯಲ್ಲಿ 30 ಸೀಟುಗಳಿಗೆ ಚುನಾವಣೆ ನಡೆದಿತ್ತು. ಬಿಜೆಪಿ ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿಗಳಲ್ಲಿ ಸೊನ್ನೆ ಸಂಪಾದಿಸಿದರೆ, ಅಸ್ಸಾಮ್‌ನಲ್ಲಿ 5 ಹಾಗೂ ಪಶ್ಚಿಮಬಂಗಾಳದಲ್ಲಿ ಒಂದು ಸೀಟನ್ನು ಸಂಪಾದಿಸಿದೆ.*

ಆದರೆ ಕರ್ನಾಟಕದಲ್ಲಿ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಎಲ್ಲಾ ಮೂರು ಸೀಟುಗಳನ್ನು ಬಾಚಿಕೊಂಡಿದೆ. ಇಲ್ಲಿ ವಿರೋಧ ಪಕ್ಷವೆಂಬುದು ಇಲ್ಲದಿರುವುದು ಅಥವಾ ನಾಮ ಮಾತ್ರ ವಿರೋಧಪಕ್ಷಗಳಿರುವುದೂ ಇದಕ್ಕೆ ಕಾರಣವಾಗಿರಬಹುದು. ಅಥವಾ ಈ ರಾಜ್ಯದ ಜನರು ತಾವು ಸ್ವತ: ಭ್ರಷ್ಟಾಚಾರವನ್ನು ಜೀವನದಲ್ಲಿ ಅಳವಡಿಸಿಕೊಂಡಿರುವುದರಿಂದ ಮುಖ್ಯಮಂತ್ರಿಯ ಯಾವುದೇ ಭ್ರಷ್ಟಾಚಾರಗಳು ಅವರಿಗೆ ದೊಡ್ಡ ವಿಚಾರವಾಗಿ ಕಾಣದಿರಬಹುದು.

ಅಂತೂ ಕರ್ನಾಟಕದ ಹೊಲಸು ರಾಜಕೀಯದ ಬಗ್ಗೆ ಬರೆಯುವುದೇ ಬಹಳ ನಿರಾಶದಾಯಕವಾಗಿರುವುದರಿಂದ ಅದರ ಬಗ್ಗೆ ಹೆಚ್ಚು ಚರ್ಚಿಸದಿರುವುದೇ ಒಳಿತು. ಒಂದಿಲ್ಲೊಂದು ದಿನ ಕರ್ನಾಟಕದ ಜನ ಪಾಠ ಕಲಿಯಬಹುದೆಂದು ಆಶಿಸೋಣ...

# ರಾಜಕೀಯ ಚದುರಂಗ

● ಫಯಾರುಝ್ ಎನ್.



''ಕರ್ನಾಟಕ ರಾಜ್ಯದಲ್ಲಿ ಸಾಂವಿಧಾನಿಕ ಆಡಳಿತ ಕುಸಿದುಬಿದ್ದಿದೆ ಅಥವಾ ಸರಕಾರ ಹೊಂದಿರುವ ಬಹುಮತ ಅಕ್ರಮ, ಅಸಂವಿಧಾನಿಕವಾದದ್ದು. ಈ ಕಾರಣಕ್ಕಾಗಿ ಕರ್ನಾಟಕ ವಿಧಾನಸಭೆಯನ್ನು ಅಮಾನತಿನಲ್ಲಿಟ್ಟು ರಾಷ್ಟ್ರಪತಿ ಆಡಳಿತ ಜಾರಿಯಾಗಬೇಕು ಎಂದು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದ್ದೇನೆ''- ಮಾನ್ಯ ರಾಜ್ಯಪಾಲ ಹಂಸರಾಜ್ ಭಾರಧ್ವಾಜ್.

''ಇದು ಆಘಾತಕಾರಿ ಬೆಳವಣಿಗೆ. ರಾಜ್ಯಪಾಲರು ಕೇಳಿದ್ದರೆ ನಾಳೆಯೇ ಬಹುಮತ ಸಾಬೀತಿಗೆ ಸಿದ್ಧನಿದ್ದೆ. ಆದರೆ, ಅವಕಾಶ ನೀಡದೆ ವಿಧಾನಸಭೆ ಅಮಾನತುಗೊಳಿಸುವಂತೆ ಶಿಫಾರಸ್ಸು ಮಾಡುವ ಮೂಲಕ ಜನಾಭಿಪ್ರಾಯದ ವಿರುದ್ಧ ನಡೆದುಕೊಂಡಿದ್ದಾರೆ. ರಾಜ್ಯಪಾಲರು ಸಂವಿಧಾನಬದ್ಧವಾಗಿ ಕಾರ್ಯನಿರ್ವಹಿಸುತ್ತಿಲ್ಲ''- ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ

''ರಾಜ್ಯಪಾಲರಿಗೆ ಸಂವಿಧಾನದಲ್ಲಿ ನಂಬಿಕೆ ಇದೆ ಎಂದಾದರೆ ಕೂಡಲೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ, ರಾಜ್ಯ ಬಿಟ್ಟು ಹೋಗಬೇಕು. ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸ್ಸು ಮಾಡಿರುವ ರಾಜ್ಯಪಾಲರ ಕ್ರಮ ಅಸಂವಿಧಾನಿಕವಾದದ್ದು''- ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ.

''ಸಿಎಂ, ಸ್ಪೀಕರ್ ತಪ್ಪೆಸಗಿರುವುದನ್ನು ಸುಪ್ರೀಮ್ ಕೋರ್ಟ್ ಸಾಬೀತುಪಡಿಸಿದೆ. ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ದಿನದಿಂದ ಸಂವಿಧಾನದ ಉಲ್ಲಂಘನೆಯಾಗುತ್ತಿದೆ. ರಾತ್ರೋರಾತ್ರಿ 16 ಮಂದಿ ಶಾಸಕರನ್ನು ಅನರ್ಹಗೊಳಿಸಿದ ಸ್ಪೀಕರ್ ಬೋಪಯ್ಯ, ಸರಕಾರವು ಅಸಂವಿಧಾನಿಕವಾಗಿ ಬಹುಮತ ಸಾಬೀತುಪಡಿಸುವಲ್ಲಿ ಪ್ರಮುಖವಾಗಿ ಕಾರ್ಯನಿರ್ವಹಿಸಿದ್ದಾರೆ'' - ಕೆಪಿಸಿಸಿ ಮಾಜಿ ಅಧ್ಯಕ್ಷ ಜನಾರ್ದನ ಪೂಜಾರಿ.

''ಮುಖ್ಯಮಂತ್ರಿ ಯಡಿಯೂರಪ್ಪನವರ ನಿರ್ದೇಶನದಂತೆ ಸ್ಪೀಕರ್ ಬೋಪಯ್ಯ ನಡೆದುಕೊಂಡಿದ್ದಾರೆ. ವಿಧಾನಸಭೆ ಕಲಾಪ ಸುಗಮವಾಗಿ ನಡೆಸುವುದು ಸ್ಪೀಕರ್ ಕೆಲಸವೇ ಹೊರತು ಸರಕಾರ ಉಳಿಸುವುದಲ್ಲ. 2010ರ ಅಕ್ಟೋಬರ್

*ಕಳೆದ ಮೂರು ವರ್ಷಗಳಿಂದಲೂ ರಾಜ್ಯ ರಾಜಕೀಯದಲ್ಲಿ ಒಂದಲ್ಲ ಒಂದು ವಿವಾದ ನಡೆಯುತ್ತಲೇ ಇದೆ. ಅಪರೇಷನ್ ಕಮಲದಿಂದ ತೊಡಗಿ, ಆಡಳಿತ ದುರುಪಯೋಗ, ಹದಗೆಟ್ಟ ಕಾನೂನು ಸುವ್ಯವಸ್ಥೆ, ಸ್ವಜನಪಕ್ಷಪಾತ, ಬಿಜೆಪಿಯೊಳಗೆ ಬಂಡಾಯ, ರೆಸಾರ್ಟ್ ರಾಜಕೀಯ, ಗಣಿಮಾಫಿಯಾ, ಸದನದಲ್ಲಿ ಜಟಾಪಟಿ, ರಾಜೀನಾಮೆ, ಸಮನ್ವಯ ಸಮಿತಿ ರಚನೆ, ರಾಜ್ಯಪಾಲರೊಂದಿಗೆ ಜಟಾಪಟಿ, ಹಗರಣಗಳು, ಅವ್ಯವಹಾರಗಳು... ಹೀಗೆ ಮೂರು ವರ್ಷಗಳಿಂದಲೂ ಬರೇ ರಾಜಕೀಯ ಗೊಂದಲ, ವಿವಾದದಲ್ಲೇ ಸರಕಾರ ಮುಳುಗಿಹೋಗಿದೆ. ಈ ಎಲ್ಲ ಜಂಜಾಟದ ನಡುವೆ ಗ್ರಾಮ ಪಂಚಾಯತ್‌ಗಳಿಗೆ ಕಳೆದ ಎರಡು ವರ್ಷಗಳಿಂದ ಅನುದಾನವೇ ಬಿಡುಗಡೆಯಾಗಿಲ್ಲ ಎಂಬ ಸಂಗತಿಯೂ ಬಹಿರಂಗಗೊಳ್ಳುತ್ತಿಲ್ಲ. ಇದು ಅಸಂವಿಧಾನಿಕ.*

11ರಂದು ಕೋರಿದ ವಿಶ್ವಾಸಮತ ಅಸಂವಿಧಾನಿಕವಾದದ್ದು ಎಂದು ಅವತ್ತೇ ರಾಜ್ಯಪಾಲರು ಹೇಳಿದ್ದರು. ಅಲ್ಲಿಂದ ಈವರೆಗೆ ಸರಕಾರ ಅಸಂವಿಧಾನಿಕವಾಗಿಯೇ ನಡೆಯುತ್ತಿದೆ''- ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ದೇವೇಗೌಡ.

''ರಾಜ್ಯಪಾಲರ ಕ್ರಮ ಸರಿಯಾಗಿದೆ. ಬಿಜೆಪಿ ಸರಕಾರ ಅಕ್ರಮ ಮತ್ತು ಅಸಂವಿಧಾನಿಕ ರೀತಿಯಲ್ಲಿ ನಡೆಯುತ್ತಿದೆ. ಕೇಂದ್ರ ಸರಕಾರವು ರಾಜ್ಯಪಾಲರ ಶಿಫಾರಸ್ಸನ್ನು ಕೂಡಲೇ ಅಂಗೀಕರಿಸಬೇಕು''- ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್

''ಇದು ಸತ್ಯ ಮತ್ತು ಸಂವಿಧಾನಕ್ಕೆ ಸಂದ ಜಯವಾಗಿದೆ. ಸಂವಿಧಾನಕ್ಕೆ ಮನ್ನಣೆ ನೀಡಿ ರಾಜ್ಯಪಾಲರ ಶಿಫಾರಸ್ಸನ್ನು ತಿರಸ್ಕರಿಸಿದ ಕೇಂದ್ರ ಸರಕಾರಕ್ಕೆ ಅಭಿನಂದನೆಗಳು''- ಮುಖ್ಯಮಂತ್ರಿ ಯಡಿಯೂರಪ್ಪ (ರಾಷ್ಟ್ರಪತಿ ಆಡಳಿತ ಹೇರಿಕೆಗೆ ಕೇಂದ್ರ ಸರಕಾರ ಅಸಮ್ಮತಿ ಪ್ರಕಟಿಸಿದ ಬಳಿಕ)

''ವಿಧಾನಸಭೆಯನ್ನು ಅಮಾನತಿನಲ್ಲಿಟ್ಟು ರಾಷ್ಟ್ರಪತಿ ಆಡಳಿತವನ್ನು ಜಾರಿಗೊಳಿಸುವುದಿಲ್ಲ. ಆದರೆ ಸರಕಾರ ಮುಂದಿನ ದಿನಗಳಲ್ಲಿ ಸಂವಿಧಾನಬದ್ಧವಾಗಿ ಕಾರ್ಯನಿರ್ವಹಿಸಬೇಕು'' ಕೇಂದ್ರ ಸರಕಾರದಿಂದ ರಾಜ್ಯ ಬಿಜೆಪಿ ಸರಕಾರಕ್ಕೆ ತಾಕೀತು.

ಕಳೆದೊಂದು ವಾರದ ಹೇಳಿಕೆಗಳ ಪಟ್ಟಿಯನ್ನು ಗಮನಿಸಿದರೆ ಎಲ್ಲರ ಬಾಯಲ್ಲೂ 'ಸಂವಿಧಾನ'ದ ಬಗ್ಗೆಯೇ ಕಾಳಜಿ ಉಕ್ಕಿಹರಿಯುತ್ತಿದೆ. ಅಷ್ಟಕ್ಕೂ ನಮ್ಮ ಸಂವಿಧಾನದ ವೈಶಿಷ್ಟ್ಯಗಳಲ್ಲೊಂದಾದ 'ನಮ್ಯತೆ' ಎಂಬುದನ್ನು ರಾಜಕೀಯ ಪುಡಾರಿಗಳು ಚೆನ್ನಾಗಿಯೇ ಬಳಸಿಕೊಳ್ಳುತ್ತಿದ್ದಾರೆ ಎಂದಾಯಿತು. ನಮ್ಯತೆ ಎಂದರೆ ಸುಲಭವಾಗಿ ತಿದ್ದುಪಡಿ ಮಾಡಿಕೊಳ್ಳುವ ವ್ಯವಸ್ಥೆ ಎಂದರ್ಥ. ಪ್ರಸಕ್ತ ರಾಜಕೀಯ ವಿದ್ಯಮಾನದ ಬಗ್ಗೆ ಯಾವುದೇ ಪಕ್ಷದವರು ಹೇಳಿಕೆ ನೀಡಿದರೂ ಅವರೆಲ್ಲರೂ ಸಾಮಾನ್ಯವಾಗಿ ಬಳಸುವ ಪದ- 'ಸಾಂವಿಧಾನಿಕ'.

ಆಕಾಶದಲ್ಲಿ ಕಾಣುವ ಚಂದ್ರ ನೋಡುಗರ ಕಣ್ಣಿಗೆ ಒಂದೊಂದು ಬಗೆಯಲ್ಲಿ ಕಾಣುತ್ತಾನೆ ಎಂದು ಕವಿ ವರ್ಣಿಸುತ್ತಾರೆ. ಹಾಗೆಯೇ ಭಾರತದ ಸಂವಿಧಾನವನ್ನು ಒಂದೊಂದು ಪಕ್ಷಗಳು ತಮಗೆ ಬೇಕಾದಂತೆ ಅಂದಾಜಿಸಿಕೊಳ್ಳುತ್ತಿವೆ. ಯಡಿಯೂರಪ್ಪನವರು ತಮ್ಮ ಕೃತ್ಯವನ್ನೆಲ್ಲ 'ಸಾಂವಿಧಾನಿಕ' ಎಂದು ಘೋಷಿಸಿದರೆ ಇತ್ತ ರಾಜ್ಯಪಾಲರು ಕೂಡ 'ಸಂವಿಧಾನ ಬದ್ಧ'ವಾಗಿಯೇ ಕಾರ್ಯನಿರ್ವಹಿಸುತ್ತಿದ್ದೇನೆ'' ಎಂದು ಸ್ಪಷ್ಟಪಡಿಸುತ್ತಿದ್ದಾರೆ. ಮತ್ತೊಂದೆಡೆ ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಬಿಜೆಪಿ ಸರಕಾರವೇ ಅಸಂವಿಧಾನಕವಾದದ್ದು ಎಂದು ಬಣ್ಣಿಸುತ್ತಿದೆ. ಕೊನೆಗೆ ಕೇಂದ್ರ ಸರಕಾರವು 'ಇನ್ನು ಮುಂದಾದರೂ ಸಂವಿಧಾನಬದ್ಧವಾಗಿ ಆಡಳಿತ ನಡೆಸಿ' ಎಂದು ತಾಕೀತು ಮಾಡಿದೆ. ಹಾಗಿದ್ದರೆ ನಿಜವಾಗಿಯೂ ಅಸಂವಿಧಾನಿಕವಾದದ್ದು ಏನು?

ಸರಳವಾಗಿ ಹೇಳುವುದಾದರೆ ಸಂವಿಧಾನಕ್ಕೆ ವಿರುದ್ಧವಾದದ್ದೆಲ್ಲವೂ ಅಸಂವಿಧಾನಿಕವಾದದ್ದು. 16 ಮಂದಿ ಶಾಸಕರ ಅನರ್ಹತೆಯ ಕುರಿತಾಗಿ ಹೈಕೋರ್ಟ್ ತೀರ್ಪು ನೀಡಿದಾಗ ಯಡಿಯೂರಪ್ಪ 'ಸತ್ಯ ಮೇವ ಜಯತೇ' ಎಂದು ಪ್ರತಿಕ್ರಿಯಿಸಿದ್ದರು. ಇದೀಗ ಪರಮೋಚ್ಚ ನ್ಯಾಯಾಲಯವು ಯಡಿಯೂರಪ್ಪ ಸರಕಾರ ಮತ್ತು ಸ್ಪೀಕರ್ ಕ್ರಮವನ್ನು ಕಟುವಾಗಿ ಟೀಕಿಸಿದೆ. ಸ್ಪೀಕರ್ ಅಸಂವಿಧಾನಿಕವಾಗಿ ವರ್ತಿಸಿದ್ದಾರೆ ಎಂದು ಕಿಡಿಕಾರಿದೆ. ಹಾಗಾದರೆ ಯಡಿಯೂರಪ್ಪ ಸುಪ್ರೀಮ್ ಕೋರ್ಟ್‌ನ ತೀರ್ಪನ್ನು 'ಮಿಥ್ಯ ಮೇವ ಜಯತೇ' ಎಂದು ಟೀಕಿಸಲು ಸಿದ್ಧರಿದ್ದಾರೆಯೇ?

ಕಳೆದ ಮೂರು ವರ್ಷಗಳಿಂದಲೂ ರಾಜ್ಯ ರಾಜಕೀಯದಲ್ಲಿ ಒಂದಲ್ಲ ಒಂದು ವಿವಾದ ನಡೆಯುತ್ತಲೇ ಇದೆ. ಅಪರೇಷನ್ ಕಮಲದಿಂದ ತೊಡಗಿ, ಆಡಳಿತ ದುರುಪಯೋಗ, ಹದಗೆಟ್ಟ ಕಾನೂನು ಸುವ್ಯವಸ್ಥೆ, ಸ್ವಜನಪಕ್ಷಪಾತ, ಬಿಜೆಪಿಯೊಳಗೆ ಬಂಡಾಯ, ರೆಸಾರ್ಟ್ ರಾಜಕೀಯ, ಗಣಿಮಾಫಿಯಾ, ಸದನದಲ್ಲಿ ಜಟಾಪಟಿ, ರಾಜೀನಾಮೆ, ಸಮನ್ವಯ ಸಮಿತಿ

ರಚನೆ, ರಾಜ್ಯಪಾಲರೊಂದಿಗೆ ಜಟಾಪಟಿ, ಹಗರಣಗಳು, ಅವ್ಯವಹಾರಗಳು... ಹೀಗೆ ಮೂರು ವರ್ಷಗಳಿಂದಲೂ ಬರೀ ರಾಜಕೀಯ ಗೊಂದಲ, ವಿವಾದದಲ್ಲೇ ಸರಕಾರ ಮುಳುಗಿಹೋಗಿದೆ. ಈ ಎಲ್ಲ ಜಂಜಾಟದ ನಡುವೆ ಗ್ರಾಮ ಪಂಚಾಯತ್‌ಗಳಿಗೆ ಕಳೆದ ಎರಡು ವರ್ಷಗಳಿಂದ ಅನುದಾನವೇ ಬಿಡುಗಡೆಯಾಗಿಲ್ಲ ಎಂಬ ಸಂಗತಿಯೂ ಬಹಿರಂಗಗೊಳ್ಳುತ್ತಿಲ್ಲ. ಇದು ಅಸಂವಿಧಾನಿಕ.

ಅಭಿವೃದ್ಧಿಯೇ ಆಡಳಿತ ಮಂತ್ರ ಎಂದು ಘೋಷಿಸಿ, ಬೀದಿ ಬೀದಿಯಲ್ಲಿ ದೊಡ್ಡ ದೊಡ್ಡ ಕಟೌಟ್‌ಗಳನ್ನು ಹಾಕಿಸಿದ್ದ ಯಡಿಯೂರಪ್ಪ ಕಳೆದ ಮೂರು ವರ್ಷಗಳಲ್ಲಿ ಯಾರ ಅಭಿವೃದ್ಧಿ ಮಾಡಿದರು ಎಂಬುದನ್ನು ರಾಜಕೀಯ ವಿದ್ಯಮಾನಗಳೇ ತಿಳಿಸುತ್ತಿವೆ. ಮೊನ್ನೆ ರಾಷ್ಟ್ರಪತಿ ಮುಂದೆ ಬಿಜೆಪಿ ಶಾಸಕರು ಪರೇಡ್ ನಡೆಸಲು ಕೋಟಿ ರೂಪಾಯಿಗಳನ್ನು ಸರಕಾರದ ಖಜಾನೆಯಿಂದಲೇ ಭರಿಸಲಾಗಿದೆ. ವಾಸ್ತವದಲ್ಲಿ ಈ ಹಣವನ್ನು ಪಕ್ಷದ ನಿಧಿಯಿಂದ ಭರಿಸಬೇಕಾಗಿತ್ತು. ಇದು ಸಂವಿಧಾನಬದ್ಧವಾದ ನಡವಳಿಕೆಯೇ? ಇಲ್ಲಿ ಸರಕಾರದ ಹಣ ಯಾರ ಅಭಿವೃದ್ಧಿಗಾಗಿ ವಿನಿಯೋಗವಾಗುತ್ತಿದೆ ಎಂಬುದಕ್ಕೆ ದೊಡ್ಡ ತನಿಖೆ ನಡೆಸಬೇಕಾದ ಅಗತ್ಯವೇನಿಲ್ಲ. ಕಳೆದ ಮೂರು ವರ್ಷಗಳಲ್ಲಿ ಬಿಜೆಪಿಯ ಒಬ್ಬೊಬ್ಬ ಶಾಸಕ, ಸಚಿವರು ಸಂಪಾದಿಸಿರುವ ಆಸ್ತಿ, ಸಂಪತ್ತನ್ನು ಲೆಕ್ಕ ಹಾಕಿದರೆ ತಿಳಿಯುತ್ತದೆ ಯಡಿಯೂರಪ್ಪ ಸರಕಾರದಲ್ಲಿ ಯಾರ ಅಭಿವೃದ್ಧಿಯಾಗುತ್ತಿದೆ ಎಂದು.

ಅಪರೇಷನ್ ಕಮಲದ ಮೂಲಕ ಒಬ್ಬೊಬ್ಬ ಶಾಸಕರನ್ನು ಬಿಜೆಪಿಗೆ ಎಳೆದು ತರಲು ಎಷ್ಟೆಷ್ಟು ಕೋಟಿ ರೂಪಾಯಿ ಡೀಲಿಂಗ್ ನಡೆದಿದೆ ಎಂಬುದು ರಾಜ್ಯದ ಜನತೆಗೆ ಗೊತ್ತಿದೆ. ಅದೇನೂ ಗುಪ್ತವಾಗಿ ಉಳಿದಿಲ್ಲ. ರಾಜಕೀಯ ಏನೆಂದೇ ಗೊತ್ತಿಲ್ಲದವರಿಗೂ ಅಪರೇಷನ್ ಕಮಲದ ರಹಸ್ಯವೇನು ಎಂದು ತಿಳಿದಿದೆ. ಶಾಸಕರ ಖರೀದಿಯಲ್ಲಿ ನಡೆಯುತ್ತಿರುವ ಡೀಲಿಂಗ್ ಎಷ್ಟು ಕೋಟಿ ರೂಪಾಯಿಗಳದ್ದು ಎಂಬ ಖಡಕ್ ಲೆಕ್ಕಾಚಾರ ಕೂಡ ಮಾಧ್ಯಮಗಳಿಗೆ ಲಭ್ಯವಾಗುತ್ತಿದೆ. ಶಾಸಕರು ತಮ್ಮ ಸ್ಥಾನವು ದುಬಾರಿಯಾದದ್ದು ಎಂದು ತಿಳಿದಿದ್ದೇ ಅಪರೇಷನ್ ಕಮಲದ ಮೂಲಕ. ಒಮ್ಮೆ ಅಪರೇಷನ್ ಕಮಲಕ್ಕೆ ಒಳಗಾದರೆ ಒಂದೇ ಕ್ಷಣದಲ್ಲಿ ಆತ ಜೀವಮಾನಕ್ಕೆ ಬೇಕಾದಷ್ಟು ಹಣ ಸಂಪಾದಿಸಿಕೊಳ್ಳುತ್ತಾನೆ. ಮತ್ತೆ ಆತ ಚುನಾವಣೆಯಲ್ಲಿ ಗೆದ್ದು ಬರದಿದ್ದರೂ ಚಿಂತಿಲ್ಲ. ಅಂತಹ ಹೊಲಸು ರಾಜಕೀಯವನ್ನು ಹುಟ್ಟುಹಾಕಿದ್ದು ರಾಜ್ಯದ ಬಿಜೆಪಿ ಸರಕಾರ. ಇದು ಸಂವಿಧಾನ ಬದ್ಧವೇ?

***ತಮಾಷೆಗಾದರೂ ಇದು ವಾಸ್ತವ. ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಲ್ಲಿ ಕಾರ್ಯಕರ್ತರಿಗಿಂತ ಹೆಚ್ಚಾಗಿ ಲೀಡರ್‌ಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಪಕ್ಷಗಳು ಯಾವುದೇ ಅಳುಕಿಲ್ಲದೆ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಹೊರಡಿಸಿ, ಚುನಾವಣಾ ಪ್ರಚಾರಕ್ಕೆ ಇಳಿದನಂತರವಷ್ಟೇ ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಅಭ್ಯರ್ಥಿಗಳ ಪಟ್ಟಿಯ ಒಂದೊಂದೇ ಕಂತು ಹೊರಬೀಳತೊಡಗುವುದು. ಅಂದರೆ ಈ ಪಕ್ಷಗಳಲ್ಲಿ ಟಿಕೇಟ್‌ಗೆ ಸಾಕಷ್ಟು ಲಾಭಿ ನಡೆಯುವುದು ಈ ಹಿಂದಿನಿಂದಲೂ ನಡೆದುಕೊಂಡಿರುವ ಬಂದಿರುವ ಸಂಪ್ರದಾಯ. ಮಾತ್ರವಲ್ಲ, ಜನರು ತಮಗೆ ಮತಹಾಕುತ್ತಾರೆ, ನಾವು ಬಿಟ್ಟರೆ ಜನತೆಗೆ ಬೇರೆ ಆಯ್ಕೆಯೇ ಇಲ್ಲ ಎಂದು ಜಾತ್ಯತೀತ ಸೋಗಿನ ಈ ಪಕ್ಷಗಳು ಬಲವಾಗಿ ನಂಬಿದ್ದವು.***

ಅಧಿಕಾರಕ್ಕೇರಿದ 10 ದಿನಗಳೊಳಗಾಗಿ ಹಾವೇರಿಯಲ್ಲಿ ಪೊಲೀಸರು ಪ್ರತಿಭಟನಾ ನಿರತ ರೈತರ ಮೇಲೆ ಗೋಲಿಬಾರ್ ನಡೆಸಿ, ಓರ್ವ ರೈತ ಬಲಿಯಾಗಿದ್ದರೂ ಮೃತಪಟ್ಟ ರೈತನನ್ನು ಗೂಂಡಾ ಎಂದು ಘೋಷಿಸಿದ್ದು, ರಾಜ್ಯಾದ್ಯಂತ ಚರ್ಚುಗಳ ಮೇಲೆ ಬಜರಂಗದಳ, ಶ್ರೀರಾಮಸೇನೆ ನಡೆಸಿದ ದಾಳಿಗೆ ಸೋಮಶೇಖರ್ ಆಯೋಗದ ಮೂಲಕ ಕ್ಲೀನ್ ಚಿಟ್ ನೀಡಿದ್ದು ಸಾಂವಿಧಾನಿಕವೇ? ಇದು ಕಾನೂನು ಸುವ್ಯವಸ್ಥೆಯೇ?

ತನ್ನ ಮಕ್ಕಳಿಗೆ ಡಿನೋಟಿಫಿಕೇಶನ್ ಕೊಟ್ಟು ಜಾಗ ಕಬಳಿಸಿದ, ಸ್ವಜನಪಕ್ಷಪಾತವೆಸಗಿದ ಮುಖ್ಯಮಂತ್ರಿ ಯಡಿಯೂರಪ್ಪನವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದ್ದರೂ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡದೆ ಇರುವುದು ಸಾಂವಿಧಾನಿಕ ವ್ಯವಸ್ಥೆಗೆ ಶೋಭೆ ತರುತ್ತದೆಯೇ?

16 ಮಂದಿ ಶಾಸಕರನ್ನು ರಾತ್ರೋರಾತ್ರಿ ಅನರ್ಹಗೊಳಿಸಿರುವುದು, ವಿರೋಧ ಪಕ್ಷಗಳಿಗೂ ಸದನದೊಳಗೆ ಪ್ರವೇಶ ನಿರಾಕರಿಸಿರುವುದು, ಸದನದೊಳಗೆ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಿರುವುದು, ಗದ್ದಲದ ನಡುವೆಯೂ ಧ್ವನಿಮತದ ಮೂಲಕ ಸರಕಾರಕ್ಕೆ ಬಹುಮತ ಇದೆ ಎಂದು ಸ್ಪೀಕರ್ ಬೋಪಯ್ಯ ಸಾರಿರುವುದು, ರಾಜ್ಯಪಾಲರ ನಿರ್ದೇಶನವನ್ನು ಪಾಲಿಸದೇ ತಮ್ಮದೇ ರೂಪರೇಷೆ, ಯೋಜನೆಯಂತೆ ಬಹುಮತ ಸಾಬೀತುಪಡಿಸಿರುವುದು- ಇವೆಲ್ಲವೂ ಸಾಂವಿಧಾನಿಕವೇ?

ಅಂದಹಾಗೆ ಬಿಜೆಪಿ ಸರಕಾರವು ಸಾಂವಿಧಾನಿಕವಾಗಿ






ಕಾರ್ಯನಿರ್ವಹಿಸಿಲ್ಲ ಮತ್ತು ಕಾರ್ಯನಿರ್ವಹಿಸುತ್ತಿಲ್ಲ ಎಂಬುದಕ್ಕೆ ಸಾಕ್ಷ್ಯಗಳು ದಿನಕ್ಕೊಂದರಂತೆ ದೊರೆಯುತ್ತಿದ್ದರೂ ಉಪಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್ ಅಥವಾ ಜೆಡಿಎಸ್‌ಗೆ ಸಾಧ್ಯವಾಗಿಲ್ಲ ಎಂಬುದನ್ನು ಗಮನಿಸಬೇಕು. ಇಂತಹ ಪರಿಸ್ಥಿತಿಯಲ್ಲೂ ಬಿಜೆಪಿ ಗೆಲುವು ಸಾಧಿಸಿದೆ ಎಂದರೆ ಅದರರ್ಥ ಬಿಜೆಪಿಯನ್ನು ಜನಬೆಂಬಲಿಸಿದ್ದಾರೆ ಎಂದೋ ಅಥವಾ ಬಿಜೆಪಿ ಜನಪರ ಆಡಳಿತ ನಡೆಸಿದೆ ಎಂದೋ ಅಲ್ಲ. ಬಿಜೆಪಿಯ ವೈಫಲ್ಯವನ್ನು ಎತ್ತಿತೋರಿಸಿ ಜನರ ಬಳಿಗೆ ತೆರಳಿ ಜಾಗೃತಿ ಮೂಡಿಸುವ ಬಲಿಷ್ಠ ವಿರೋಧ ಪಕ್ಷಗಳು ರಾಜ್ಯದಲ್ಲಿ ಇಲ್ಲ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಇದಕ್ಕೆ ಪೂರಕವಾಗಿ ಮೊನ್ನೆ ಹವ್ಯಾಸಿ ಚುಟುಕು ಕವಿಯೊಬ್ಬ ವಾಚಿಸಿದ ಚುಟುಕು ಸಾಲು ಇಂತಿದೆ;

ಅಧಿಕಾರದಲ್ಲಿ ಉಳಿಯಲು
ಬಿಜೆಪಿ ಲಾಯಕ್ಕು
ಯಾಕೆಂದರೆ,
ವಿರೋಧ ಪಕ್ಷಗಳು ನಾಲಾಯಕ್ಕು

ತಮಾಷೆಗಾದರೂ ಇದು ವಾಸ್ತವ. ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಲ್ಲಿ ಕಾರ್ಯಕರ್ತರಿಗಿಂತ ಹೆಚ್ಚಾಗಿ ಲೀಡರ್‌ಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಪಕ್ಷಗಳು ಯಾವುದೇ ಅಳುಕಿಲ್ಲದೆ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಹೊರಡಿಸಿ, ಚುನಾವಣಾ ಪ್ರಚಾರಕ್ಕೆ ಇಳಿದನಂತರವಷ್ಟೇ ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಅಭ್ಯರ್ಥಿಗಳ ಪಟ್ಟಿಯ ಒಂದೊಂದೇ ಕಂತು ಹೊರಬೀಳತೊಡಗುವುದು. ಅಂದರೆ ಈ ಪಕ್ಷಗಳಲ್ಲಿ ಟಿಕೇಟ್‌ಗೆ ಸಾಕಷ್ಟು ಲಾಭಿ ನಡೆಯುವುದು ಈ ಹಿಂದಿನಿಂದಲೂ ನಡೆದುಕೊಂಡಿರುವ ಬಂದಿರುವ ಸಂಪ್ರದಾಯ. ಮಾತ್ರವಲ್ಲ, ಜನರು ತಮಗೆ ಮತಹಾಕುತ್ತಾರೆ, ನಾವು ಬಿಟ್ಟರೆ ಜನತೆಗೆ ಬೇರೆ ಆಯ್ಕೆಯೇ ಇಲ್ಲ ಎಂದು ಜಾತ್ಯತೀತ ಸೋಗಿನ ಈ ಪಕ್ಷಗಳು ಬಲವಾಗಿ ನಂಬಿದ್ದವು. ನಾಲ್ಕೈದು ವರ್ಷಗಳ ಹಿಂದಿನವರೆಗೂ ಈ ನಂಬಿಕೆಗೆ ಅಷ್ಟೇನೂ ಧಕ್ಕೆ ಉಂಟಾಗಿರಲಿಲ್ಲ. ಆದರೆ ಯಾವಾಗ ಮತದಾರರು ಜಾಗೃತವಾಗತೊಡಗಿದರೋ ಆ ದಿನಗಳಿಂದ ದೇಶವನ್ನು ಆಳಿದ ಹಿರಿಯ ಪಕ್ಷಗಳ ನಂಬಿಕೆ ಹುಸಿಯಾಗತೊಡಗಿದೆ. ಅಲ್ಪಸಂಖ್ಯಾತ ಸಮುದಾಯ, ದಲಿತರು, ಹಿಂದುಳಿದ ವರ್ಗಗಳು ರಾಜಕೀಯ ಸಬಲೀಕರಣದತ್ತ ಹೆಜ್ಜೆಯಿಡಲಾರಂಭಿಸಿದವು.

ಈ ಸಂದರ್ಭದಲ್ಲಿಯೇ ನಾವು ಕಾಂಗ್ರೆಸ್ ಪಕ್ಷವು ಎಚ್ಚರಿಕೆಯ ಹೆಜ್ಜೆಗಳನ್ನು ಇಡಲು ಪ್ರಾರಂಭಿಸಿದ್ದನ್ನು ಗುರುತಿಸಬಹುದು. ಮೊನ್ನೆ ರಾಜಕೀಯ ವಿದ್ಯಮಾನವನ್ನೇ ತೆಗೆದುಕೊಳ್ಳೋಣ... 5-10 ವರ್ಷಗಳ ಹಿಂದೆ ಕೇಂದ್ರದ ಕಾಂಗ್ರೆಸ್ ಸರಕಾರಕ್ಕೆ ಇಂತಹ ಅವಕಾಶ ಸಿಕ್ಕಿದ್ದರೆ ಅದರ ಪರಿಣಾಮವೇ ಬೇರೆ ಇರುತ್ತಿತ್ತು. ಯಾವುದೇ ಮುಲಾಜಿಲ್ಲದೆ ಕೇಂದ್ರವು ಬಿಜೆಪಿ ಸರಕಾರವನ್ನು ವಜಾಗೊಳಿಸಿ, ರಾಷ್ಟ್ರಪತಿ ಆಡಳಿತ ಜಾರಿಗೊಳಿಸುತ್ತಿತ್ತು ಎಂಬುದಕ್ಕೆ ಸಂಶಯವೇ ಇಲ್ಲ.

2nd Floor,
Saibeen Complex,
Lalbagh, **Mangalore-4**
**Ph : 0824-2452998**

casual wear
the menz shoppe

B.J.M.Complex,
**Moodbidri**
**Cell : 9916820707**

email : cwear_1999@hotmail.com

**ಕರ್ನಾಟಕದ ರಾಜಕೀಯ ಚದುರಂಗದಾಟದಲ್ಲಿ ಯಡಿಯೂರಪ್ಪ ಸರಕಾರ ಹಲವು ಬಾರಿ ಮೇಲುಗೈ ಸಾಧಿಸಿರಬಹುದು. ಆದರೆ 35 ವರ್ಷಗಳಿಂದ ಪಶ್ಚಿಮಬಂಗಾಳದಲ್ಲಿ ಆಡಳಿತ ಚುಕ್ಕಾಣಿ ಹಿಡಿದಿದ್ದ ಕಮ್ಯುನಿಷ್ಟ್ ಪಕ್ಷವನ್ನು ಜನವಿರೋಧಿ ನೀತಿ ಅನುಸರಿಸಿದ ಕಾರಣಕ್ಕಾಗಿ ತಿರಸ್ಕರಿಸಿದ ವಿದ್ಯಮಾನವನ್ನು ರಾಜ್ಯದ ಜನತೆಯೂ ಗಮನಿಸಿರುತ್ತಾರೆ. ಆ ಫಲಿತಾಂಶವು ಕರ್ನಾಟಕ ರಾಜ್ಯದಲ್ಲಿಯೂ ಹೊರಬೀಳಲು ಹೆಚ್ಚೇನೂ ಸಮಯ ಬೇಕಾಗಿಲ್ಲ.**

ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಅದರರ್ಥ, ಜನತೆ ಬಿಜೆಪಿ ಪರವಾಗಿದ್ದಾರೆ ಎಂದಲ್ಲ. ಬಿಜೆಪಿಯೇತರ ಮತಗಳು ಕಾಂಗ್ರೆಸ್ ಪಕ್ಷಕ್ಕೆ ಸಂದಾಯವಾಗುತ್ತಿಲ್ಲ ಎಂಬುದೇ ಕೇಂದ್ರದ ಹಿಂಜರಿಕೆಗೆ ಕಾರಣ.

ಈ ರೀತಿಯ ಹಿಂಜರಿಕೆ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಸರಕಾರಕ್ಕೆ ಇದೆ ಎಂದಾದರೆ ಕೋಮುವಾದಿ ಬಿಜೆಪಿ ಸರಕಾರವು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡದೆ ಅಲ್ಪಸಂಖ್ಯಾತರಿಗೆ, ದಲಿತರಿಗೆ ಮಾರಕವಾಗಿ ಪರಿಣಮಿಸಿದರೂ ಯಾವುದೇ ನ್ಯಾಯವನ್ನು, ಪರಿಹಾರವನ್ನು ಯಾವ ದಿಕ್ಕಿನಿಂದಲೂ ನಿರೀಕ್ಷಿಸುವಂತಿಲ್ಲ ಎಂದಾಯಿತು. ಬಿಜೆಪಿ ಸರಕಾರದ ಮೂರು ವರ್ಷದ ಗಣನೀಯ ವೈಫಲ್ಯವನ್ನು ಎನ್‌ಕ್ಯಾಶ್ ಮಾಡಲು ಸಾಧ್ಯವಾಗದೇ ಹೋಗಿರುವುದು ಕಾಂಗ್ರೆಸ್‌ನ ದೌರ್ಬಲ್ಯವೆಂದು ಸುಲಭವಾಗಿ ನಿರ್ಧರಿಸಬಹುದಾದರೂ ಅದರ ಹಿಂದೆ ಒಳರಾಜಕೀಯ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಕಾಂಗ್ರೆಸ್‌ನೊಳಗಿರುವ ಬಿಜೆಪಿಯ ಬಣವು ಇಂದು ಬಿಜೆಪಿಯ ವೈಫಲ್ಯಕ್ಕೆ ಶ್ರೀರಕ್ಷೆಯಾಗಿ ನಿಂತಿದೆ ಎಂಬುದು ಸುಳ್ಳಲ್ಲ. ಈ ಹಿಂದೆಯೇ ರಾಜ್ಯ ಸರಕಾರವನ್ನು ವಜಾಗೊಳಿಸುವಂತೆ ರಾಜ್ಯಪಾಲರು ಆಗ್ರಹಿಸಿದಾಗಲೂ ಕೇಂದ್ರದ ಕೆಲ ಕಾಂಗ್ರೆಸ್ ಮುಖಂಡರೇ ಅಡ್ಡಗಾಲು ಹಾಕಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರ ಕಳೆದುಕೊಂಡು ಐದು ವರ್ಷಗಳು ಕಳೆದಿದ್ದರೂ ಇನ್ನೂ ಪಕ್ಷದ ಒಳಜಗಳ ಶಮನಗೊಂಡಿಲ್ಲ. ಎರಡು ಮೂರು ಬಾರಿ ಉಪಚುನಾವಣೆ ನಡೆದರೂ ಕಾಂಗ್ರೆಸ್ ಪಕ್ಷ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆಯೇ ಹೊರತು ರಾಜ್ಯದಲ್ಲಿ ಅದು ಗಟ್ಟಿಗೊಳ್ಳುವ ಯಾವುದೇ ಲಕ್ಷಣಗಳು ಕಂಡುಬಂದಿಲ್ಲ. ಇಂತಹ ಸಂದರ್ಭದಲ್ಲಿ ಮತದಾರರು ಗೊಂದಲದಲ್ಲಿ ಮಾತ್ರವಲ್ಲ, ಕಳೆದ 60 ವರ್ಷಗಳಿಂದ ಅಲ್ಪಸಂಖ್ಯಾತ, ಹಿಂದುಳಿದ, ದಲಿತ ವರ್ಗಗಳನ್ನು ವೋಟು



ಬ್ಯಾಂಕಾಗಿ ಮಾತ್ರ ಬಳಸಿದ ಸಿಟ್ಟಿನಲ್ಲಿಯೂ ಇದ್ದಾರೆ. ಈ ಎಲ್ಲ ಆಕ್ರೋಶಗಳ ಫಲಿತಾಂಶವೇ ಇಂದು ದಕ್ಷಿಣ ಭಾರತದ ರಾಜ್ಯವೊಂದರಲ್ಲಿ ಮೊತ್ತಮೊದಲ ಬಾರಿಗೆ ಬಿಜೆಪಿ ಅಧಿಕಾರಕ್ಕೇರಿರುವುದು. ಆದರೆ ಆ ಪಕ್ಷಗಳು 60 ವರ್ಷಗಳಲ್ಲಿ ನಡೆಸಿದ ಭ್ರಷ್ಟಾಚಾರವನ್ನು ಕೇವಲ ಮೂರು ವರ್ಷಗಳಲ್ಲಿ ಮೀರಿಸಿದ ಬಿಜೆಪಿಯ ಆಡಳಿತದಿಂದ ಜನತೆ ರೋಸಿಹೋಗಿದ್ದಾರೆ. ಈ ಹೊತ್ತಿನಲ್ಲಿ ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಒಂದಾಗದೇ ಪ್ರತ್ಯೇಕವಾಗಿ ಚುನಾವಣೆ ಎದುರಿಸುತ್ತಿರುವುದೇ ಬಿಜೆಪಿಗೆ ಮತ್ತೆ ಮತ್ತೆ ಗೆಲುವು ತಂದೊಡ್ಡುತ್ತಿರುವುದು.

ಕರ್ನಾಟಕದ ರಾಜಕೀಯ ಚದುರಂಗದಾಟದಲ್ಲಿ ಯಡಿಯೂರಪ್ಪ ಸರಕಾರ ಹಲವು ಬಾರಿ ಮೇಲುಗೈ ಸಾಧಿಸಿರಬಹುದು. ಆದರೆ 35 ವರ್ಷಗಳಿಂದ ಪಶ್ಚಿಮಬಂಗಾಳದಲ್ಲಿ ಆಡಳಿತ ಚುಕ್ಕಾಣಿ ಹಿಡಿದಿದ್ದ ಕಮ್ಯುನಿಷ್ಟ್ ಪಕ್ಷವನ್ನು ಜನವಿರೋಧಿ ನೀತಿ ಅನುಸರಿಸಿದ ಕಾರಣಕ್ಕಾಗಿ ತಿರಸ್ಕರಿಸಿದ ವಿದ್ಯಮಾನವನ್ನು ರಾಜ್ಯದ ಜನತೆಯೂ ಗಮನಿಸಿರುತ್ತಾರೆ. ಆ ಫಲಿತಾಂಶವು ಕರ್ನಾಟಕ ರಾಜ್ಯದಲ್ಲಿಯೂ ಹೊರಬೀಳಲು ಹೆಚ್ಚೇನೂ ಸಮಯ ಬೇಕಾಗಿಲ್ಲ.

# ಅಸಾದ್‌ನ ದಮನಕಾರಿ ಆಡಳಿತ

ಬನಿಯಾಸ್: ಸಿರಿಯಾದಲ್ಲಿ ಆಡಳಿತ ವಿರೋಧಿ ಪ್ರತಿಭಟನಕಾರರ ಸರಕಾರಿ ದಮನವು ಮುಂದುವರಿಯುತ್ತಲೇ ಇದೆ. ಅಲ್ಲಿನ ಪೊಲೀಸರು ಪ್ರತಿಭಟನಕಾರರಿಗೆ ಚಿತ್ರಹಿಂಸೆಯನ್ನು ನೀಡುತ್ತಿದ್ದಾರೆ. ಅಧ್ಯಕ್ಷ ಅಸಾದ್ ತನ್ನ ವಿರೋಧಿಗಳನ್ನೂ ಕ್ರೂರವಾಗಿ ದಮನಿಸುವ ಮೂಲಕ ತನ್ನ ತಂದೆಯನ್ನು ಅನುಸರಿಸಿದ್ದಾರೆ.

ಕಾಲೇಜು ವಿದ್ಯಾರ್ಥಿಯೊಬ್ಬನು ತನ್ನ ಮೇಲಾದ ಚಿತ್ರಹಿಂಸೆಯನ್ನು ಸ್ಥಳೀಯ ಮಾನವ ಹಕ್ಕು ಹೋರಾಟಗಾರನೊಬ್ಬನಿಗೆ ಬಿಚ್ಚಿಟ್ಟಿರುವ ವರದಿಯನ್ನು ಇಲ್ಲಿ ನೀಡಲಾಗಿದೆ.

ಆ ವಿದ್ಯಾರ್ಥಿಯನ್ನು ಬಂಧಿಸಿದ ಪೊಲೀಸರು ಆತನ ಇಡೀ ದೇಹವನ್ನು ಬೂಟ್‌ಗಾಲಿನಿಂದ, ಮುಷ್ಠಿಯಿಂದ ಹೊಡೆದರು. ಸೀಕ್ರೆಟ್ ಪೊಲೀಸರ ಈ ದೌರ್ಜನ್ಯ ವಿದ್ಯಾರ್ಥಿಯು 'ಬಶರ್ ದೇವನು' ಎಂದು ಕೂಗುವ ತನಕ ಮುಂದುವರಿದಿತ್ತು.

ಆತನನ್ನು ಹೊಡೆದೂ ಬಡಿದೂ ಆಯಾಸಗೊಂಡ ನಂತರ ಸೀಕ್ರೆಟ್ ಪೊಲೀಸರು ಬನಿಯಾಸ್‌ನ ವಿದ್ಯುತ್ ಸ್ಥಾವರವೊಂದರಲ್ಲಿರುವ ತಾತ್ಕಾಲಿಕ್ ಸೆಲ್‌ನೊಳಗೆ ಎಸೆದರು. ಮಾರ್ಚ್ ತಿಂಗಳ ಮಧ್ಯಭಾಗದಲ್ಲಿ ಜನಬಂಡಾಯವನ್ನು ಹತ್ತಿಕ್ಕಲು ಪ್ರಾರಂಭವಾದ ಮಿಲಿಟರಿ ದಮನದಲ್ಲಿ ಬಂಧಿಸಲ್ಪಟ್ಟ ಕೈದಿಗಳನ್ನು ಅಲ್ಲಿ ತುಂಬಿಸಿಡಲಾಗಿತ್ತು.

ತನ್ನ ಕೈ ಹಾಗೂ ಕಾಲುಗಳಿಗೆ ಕೋಳಗಳನ್ನು ಹಾಕಿ ಹಾಗೂ ಕಣ್ಣಿಗೆ ಬಟ್ಟೆ ಕಟ್ಟಲಾದ ಸ್ಥಿತಿಯಲ್ಲಿ ಪೊಲೀಸರು ತನ್ನನ್ನು ಕಾರಿಗೆ ತಳ್ಳಿದರು ಮತ್ತು ಇನ್ನೊಂದು ಟಾರ್ಚರ್ ಸೆಲ್‌ಗೆ ಸಾಗಿಸಿದರು ಎಂದು ಆತ ಹೇಳುತ್ತಾನೆ.

ನನ್ನ ಇಡೀ ದೇಹದ ಮೇಲೆ ಥಳಿಸಲಾಯಿತು. ನನ್ನ ದೇಹವಿಡೀ ರಕ್ತ ಸುರಿಯುತ್ತಿತ್ತು ಮತ್ತು ನಾನು ಶಹಾದತ್ ಉಚ್ಚರಿಸುತ್ತಿದ್ದೆನು. ಯಾಕೆಂದರೆ ನಾನು ಈಗಲೇ ಸಾಯಲಿರುವೆನೆಂದು ಭಾವಿಸಿದ್ದೆನು ಎಂದು ಆತ ಹೇಳಿದ್ದಾನೆ.

ಬನಿಯಾಸ್‌ನಿಂದ ತನ್ನ ಮನೆಗೆ ಹಿಂದಿರುಗುತ್ತಿರುವಾಗ ಪೊಲೀಸರಿಂದ ಬಂಧಿಸಲ್ಪಟ್ಟ ಈ ವಿದ್ಯಾರ್ಥಿಗೆ ಅಧ್ಯಕ್ಷ ಬಶರ್ ಅಲ್ ಅಸದ್ ಮತ್ತು ಆತನ ಕುಟುಂಬದ 40 ವರ್ಷಗಳ ಸರ್ವಾಧಿಕಾರಿ ಆಡಳಿತದ ವಿರುದ್ಧ ರಾಜಕೀಯ ವಿರೋಧವನ್ನು ಸಂಘಟಿಸಿದ ಬಗ್ಗೆ ಹೇಳಲು ಏನೂ ತಿಳಿದಿರಲಿಲ್ಲ.



ಪೊಲೀಸರಿಂದ ದೌರ್ಜನ್ಯಕ್ಕೊಳಗಾದ ವಿದ್ಯಾರ್ಥಿ.

ಎರಡನೆ ಬಾರಿ ಆತನನ್ನು ಶಿಕ್ಷಿಸುತ್ತಿದ್ದುದು ಸಿರಿಯಾದ ತದ್ಮೂರ್ ಸೆಲ್‌ನಲ್ಲಿ. ಇಲಿ ವಿಘ್ನಕಾರಿ ಹಾಗೂ ಸಂಘಟಿತ ಶಿಕ್ಷೆಯನ್ನು ನೀಡಲಾಗುತ್ತದೆ. ಅಸದ್ ಕುಟುಂಬದ ವಿರುದ್ಧ ಧ್ವನಿಯೆತ್ತಿದವರಿಂದ ಇಲ್ಲಿ ಈ ಹಿಂದೆಯೂ ಬಲಾತ್ಕಾರದ ತಪ್ಪೊಪ್ಪಿಗೆಯನ್ನು ಪಡೆಯಲಾಗಿತ್ತು. ಅಕ್ರಮ್‌ನಂತಹ ಕಮ್ಯುನಿಸ್ಟ್ ನೇತಾರನು ಇಲ್ಲಿ ಚಿತ್ರಹಿಂಸೆಗೊಳಪಟ್ಟು ಬೆನ್ನುಹುರಿ ಮುರಿಯಲ್ಪಟ್ಟು ಒಂದು ಭಾಗವನ್ನು ಕಳೆದುಕೊಂಡಿದ್ದಾರೆ. ಮುಸ್ಲಿಮ್ ಬ್ರದರ್‌ಹುಡ್‌ನ ಸದಸ್ಯರನ್ನು ಚಾವಟಿಯಲ್ಲಿ ಬಡಿದು ಮತ್ತು ಎಲೆಕ್ಟ್ರಿಕ್ ಶಾಕ್ ನೀಡಿ ಶಿಕ್ಷಿಸಲಾಗಿತ್ತು.

ಅಂತಿಮವಾಗಿ ಈ ವಿದ್ಯಾರ್ಥಿಯನ್ನು ಜೈಲಿನಿಂದ ಬಿಡುಗಡೆಗೊಳಿಸಲಾಯಿತು. ಆದರೆ ಅದು ವಿಶಾಲವಾದ ಬನಿಯಾ ಸಮುದಾಯಕ್ಕೆ ಸ್ಪಷ್ಟವಾದ ಎಚ್ಚರಿಕೆಯಂತಿತ್ತು. ವಿದ್ಯಾರ್ಥಿಯನ್ನು ನಗ್ನವಾದ ರೀತಿಯಲ್ಲಿ ಹಾಗೂ ರಕ್ತಸಿಕ್ತವಾಗಿ, ಕೈ ಮೂಳೆಗಳು ಮುರಿಯಲ್ಪಟ್ಟ ಸ್ಥಿತಿಯಲ್ಲಿ -ಗ್ರಾಮವನ್ನು ತಲುಪಲು ಇನ್ನೂ ಅದೆಷ್ಟೋ ದೂರ ಕುಂಟುತ್ತಾ ಕ್ರಮಿಸಬೇಕಾದ ಅವಸ್ಥೆಯಲ್ಲಿ- ರಸ್ತೆಯ ಮಧ್ಯೆ ಬಿಟ್ಟು ಹೋಗಲಾಗಿತ್ತು.

ಇತರ ಮೂವರು ಯುವಕರನ್ನೂ ಇದೇ ರೀತಿಯಲ್ಲಿ ನಗ್ನ ಸ್ಥಿತಿಯಲ್ಲಿ ರಕ್ತಸಿಕ್ತವಾಗಿ ಬನಿಯಾದ ಹೊರಗಿರುವ ರಸ್ತೆಯೊಂದರಲ್ಲಿ ಬಿಡಲಾಗಿತ್ತು. ಅವರನ್ನು ಥಳಿಸಲಾಗಿತ್ತು, ಮಾಳಿಗೆಯಿಂದ ಕೆಳಕ್ಕೆ ಎಸೆಯಲಾಗಿತ್ತು ಮತ್ತು ಹಸಿವಿನಿಂದ ಕಂಗಾಲಾಗಿ ಶೌಚಾಲಯದಿಂದ ನೀರನ್ನು ಕುಡಿಯುವ ಪರಿಸ್ಥಿತಿಗೆ ತಳ್ಳಲಾಗಿತ್ತು.

ಅಂತಿಮವಾಗಿ ಈ ವಿದ್ಯಾರ್ಥಿಯನ್ನು ಜೈಲಿನಿಂದ ಬಿಡುಗಡೆಗೊಳಿಸಲಾಯಿತು. ಆದರೆ ಅದು ವಿಶಾಲವಾದ ಬನಿಯಾ ಸಮುದಾಯಕ್ಕೆ ಸ್ಪಷ್ಟವಾದ ಎಚ್ಚರಿಕೆಯಂತಿತ್ತು. ವಿದ್ಯಾರ್ಥಿಯನ್ನು ನಗ್ನವಾದ ರೀತಿಯಲ್ಲಿ ಹಾಗೂ ರಕ್ತಸಿಕ್ತವಾಗಿ, ಕೈ ಮೂಳೆಗಳು ಮುರಿಯಲ್ಪಟ್ಟ ಸ್ಥಿತಿಯಲ್ಲಿ -ಗ್ರಾಮವನ್ನು ತಲುಪಲು ಇನ್ನೂ ಅದೆಷ್ಟೋ ದೂರ ಕುಂಟುತ್ತಾ ಕ್ರಮಿಸಬೇಕಾದ ಅವಸ್ಥೆಯಲ್ಲಿ- ರಸ್ತೆಯ ಮಧ್ಯೆ ಬಿಟ್ಟು ಹೋಗಲಾಗಿತ್ತು.

ಸಿರಿಯಾದ ಪ್ರಮುಖ ಮಾನವ ಹಕ್ಕು ಸಂಘಟನೆಯಾದ ಇನ್ಸಾನ್‌ನ ನಿರ್ದೇಶಕ ವಿಸಮ್ ತಾರಿಫ್ ಹೇಳವ ಪ್ರಕಾರ ಆಡಳಿತ ವಿರೋಧಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಜನರ ಮನಸ್ಸಿನಲ್ಲಿ ಭಯವುಂಟುಮಾಡುವುದಕ್ಕಾಗಿ ಸಿರಿಯಾ ಭದ್ರತಾ ಪಡೆಗಳು ಚಿತ್ರಹಿಂಸೆಯ ಮೂಲಕ ಗುಣವಾಗದ ಗಾಯದೊಂದಿಗೆ ಕೈದಿಗಳನ್ನು ಬಿಡುಗಡೆಗೊಳಿಸುತ್ತಿದ್ದಾರೆ.

ಮಾರ್ಚ್ ಮಧ್ಯಭಾಗದಲ್ಲಿ ಆರಂಭವಾದ ಜನಬಂಡಾಯದ ನಂತರ 7000ಕ್ಕೂ ಅಧಿಕ ಸಿರಿಯನ್ನರನ್ನು ನಿರಂಕುಶವಾಗಿ ಬಂಧಿಸಲಾಗಿದೆ ಮತ್ತು ಜೈಲುಗಳಿಗೆ ತಳ್ಳಲಾಗಿದೆ ಎಂದು ಬಂಧಿಸಲ್ಪಟ್ಟವರ ಕುಟುಂಬಸ್ಥರು ಮತ್ತು ಸಂಬಂಧಿಗಳನ್ನು ಸಂದರ್ಶಿಸಿದ ಮಾನವ ಹಕ್ಕು ಕಾರ್ಯಕರ್ತರು ಹೇಳುತ್ತಾರೆ.

ಬಂಧಿತರಲ್ಲಿ ಸಮಾಜದ ದೊಡ್ಡ ವರ್ಗವು ಒಳಗೊಂಡಿದೆ. ವಿಶೇಷವಾಗಿ 20ರಿಂದ 50ರ ನಡುವಿನ ಯುವಕರು ಮತ್ತು ಹಿರಿಯರು ವಿಶೇಷವಾಗಿ ಪ್ರತಿಭಟನೆಗಳಲ್ಲಿ ಭಾಗಿಯಾಗುವ ಮಾನವ ಹಕ್ಕು ಕಾರ್ಯಕರ್ತರು ಬಂಧಿಸಲ್ಪಡುತ್ತಾರೆ. ಸಮುದಾಯದ ನಾಯಕರು, ಇಮಾಮ್‌ಗಳು ಮತ್ತು ವಿದ್ಯಾರ್ಥಿಗಳನ್ನು ಬಂಧಿಸಲಾಗುತ್ತಿದ.

ದೇರಾ ಎಂಬ ಪ್ರದೇಶದಲ್ಲಿ ಕೇವಲ ಒಂದೇ ದಿನದಲ್ಲಿ 500 ಮಂದಿಯನ್ನು ಬಂಧಿಸಲಾಗಿದೆ. ಭದ್ರತಾ ಸಿಬ್ಬಂದಿಗಳು ಮನೆ ಮನೆಗೆ ದಾಳಿ ನಡೆಸಿ 15ರಿಂದ 40ರ ನಡುವಿನ ಪುರುಷರನ್ನು ಬಂಧಿಸಿ ಕರೆದುಕೊಂಡು ಹೋಗುತ್ತಿದ್ದರು. ಅಲ್ಲದೆ ರಾಜಕೀಯ ಭದ್ರತಾ ಕಚೇರಿಯಿಂದ ಉದ್ದೇಶ ಪೂರ್ವಕವಾಗಿ ಸೋರಿಕೆಯಾದ ಇತ್ತೀಚಿಗಿನ ದಾಖಲೆ ಇದನ್ನು ಖಚಿತಪಡಿಸಿದೆ.

**ಕೃಪೆ: ಅಲ್ ಜಝೀರಾ**


## ಪ್ರಿಯದರ್ಶಿನಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಟೆಕ್ನಾಲಜಿ

ಒಂದೇ ವರ್ಷದಲ್ಲಿ ಉದ್ಯೋಗ ಪಡೆಯುವ ಸುವರ್ಣಾವಕಾಶ

10 ನೇ ವರ್ಷದ ಬ್ಯಾಚಿಗೆ ಪ್ರವೇಶ ಆರಂಭವಾಗಿದೆ.

ಅಲ್ ಬರಕ ಕಾಂಪ್ಲೆಕ್ಸ್, ಹೊಸಂಗಡಿ, ಮಂಜೇಶ್ವರ-671 323.
Ph : 04998-320347, Cell: 09947152399, 09895416201

ವಿದ್ಯಾರ್ಹತೆ S.S.L.C ಮೇಲ್ಪಟ್ಟು

• ದೇಶ ವಿದೇಶಗಳಲ್ಲಿ ಉದ್ಯೋಗ ಗಳಿಸಲು ಒಂದು ಸುವರ್ಣಾವಕಾಶ • K.P.M.E.S.ನಿಂದ ಅಂಗೀಕೃತಗೊಂಡ ಜಿಲ್ಲೆಯ ಏಕೈಕ ಸಂಸ್ಥೆ

• ಹುಡುಗರಿಗೆ ಹಾಗೂ ಹುಡುಗಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ • ಕನ್ನಡ ಹಾಗೂ ಮಲಯಾಳಂನಲ್ಲಿ ಅನುಭವಿ ಶಿಕ್ಷಕರಿಂದ ತರಬೇತಿ. • ಆಸ್ಪತ್ರೆಯಲ್ಲಿ ಪ್ರಾಕ್ಟಿಕಲ್ ಸೌಲಭ್ಯ ಸಹಿತ ತರಬೇತಿ • ಉತ್ತಮವಾಗಿ ಕೋರ್ಸ್‌ನ್ನು ಪೂರ್ತಿಗೊಳಿಸಿದವರಿಗೆ ಉದ್ಯೋಗದ ಭರವಸೆ.

ನಮ್ಮಲ್ಲಿರುವ ಕೋರ್ಸ್‌ಗಳು:
• ಮೆಡಿಕಲ್ ಲ್ಯಾಬ್ ಟೆಕ್ನೀಷಿಯನ್ ಕೋರ್ಸ್ • ಮೆಡಿಕಲ್ ಎಕ್ಸ್‌ರೇ ಟೆಕ್ನೀಷಿಯನ್ ಕೋರ್ಸ್ • ಇಸಿಜಿ ಟೆಕ್ನೀಷಿಯನ್ ಕೋರ್ಸ್.

3ನೇ ವರ್ಷದಲ್ಲಿ ಸರ್ಕಾರಿ ಉದ್ಯೋಗ ಗಳಿಸಲು ಒಂದು ಸುವರ್ಣಾವಕಾಶ ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಹಾಗೂ INC, KNC ಮಾನ್ಯತೆ ಇರುವ ಸರ್ಕಾರಿ ಕೋಟಾ ಪ್ರವೇಶಕ್ಕಾಗಿ ವಿಚಾರಿಸಿರಿ.

1. Medical LAB ಟೆಕ್ನೀಷಿಯನ್ (DMLT) 2. Medical X-Ray ಟೆಕ್ನೀಷಿಯನ್ (DMRT) 3. Medical O.T. ಟೆಕ್ನೀಷಿಯನ್ (DMOT)
4. Health Inspector (BHI) 5. General Nursing Course (GNM) 6. BSc Nursing Course(Bsc Nurse)

ಸಂಪರ್ಕಿಸಿರಿ: ಎನ್.ಅಬ್ದುಲ್ ಹಮೀದ್
ಪ್ರಾಂಶುಪಾಲರು
ಪ್ರಿಯದರ್ಶಿನಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಟೆಕ್ನಾಲಜಿ (DMLT,DMRT) Reg No-4583

■ಕೆ.ವೈ ಅಬ್ದುಲ್ ಹಮೀದ್
kukkaje09@gmail.com

# ಪ್ರೆಸಿಡೆಂಟ್ ಪುತ್ತಬಾಕ

ಪುತ್ತಬಾಕ ಚಾವಣಿ ನೋಡುತ್ತಾ ಹಾಸಿಗೆಯಲ್ಲಿ ಮಲಗಿ ತಾಸುಗಳೇ ಕಳೆದಿದ್ದವು. ಎಷ್ಟೆ ಹೊರಳಾಡಿದ್ದರೂ ಅವರ ಕಣ್ಣಿಗೆ ನಿದ್ದೆ ಹತ್ತಲಿಲ್ಲ. ತನ್ನ ಬಳಿ ಮಲಗಿದ ಮನೆ ಕೆಲಸದಲ್ಲಿ ದಣಿದ ಪತ್ನಿ ಕ್ಷಣ ಮಾತ್ರದಲ್ಲಿ ನಿದ್ದೆಗೆ ಶರಣು ಹೋಗಿದ್ದರೂ ಪುತ್ತಬಾಕರಿಗೆ ಮಾತ್ರ ಇಂದು ಜಾಗರಣೆಯೇ ಗತಿಯಾಗಿತ್ತು. ಇಂದು ನಡೆದ ಜೀವನದ ಅಪೂರ್ವ ಹಾಗು ಅನಿರೀಕ್ಷಿತ ಘಟನೆ ಪುತ್ತಬಾಕರ ಸಂಪೂರ್ಣ ನಿದ್ದೆಯನ್ನು ಹಾರಿಸಿಬಿಟ್ಟಿತ್ತು. ಅವರು ಕನಸು ಮನಸಿನಲ್ಲಿ ನೆನಸದ ಘಟನೆ ಇಂದು ನಡೆದೇ ಬಿಟ್ಟಿತ್ತು. ಇದು ಅವರ ಮನದಲ್ಲಿ ಅಳಿಸಲಾಗದ ಚಿತ್ರಣವನ್ನು ಮೂಡಿಸಿತ್ತು. ಕಣ್ಣು ಮುಚ್ಚಿ ಅವರು ಮಲಗಿಕೊಂಡಿದ್ದರೂ ಆ ದೃಶ್ಯ ಅವರ ಮನದಿಂದ ಮರೆಯಾಗುತ್ತಿರಲಿಲ್ಲ. ಅದನ್ನವರು ಒಂದು ರೀತಿಯ ಅಳುಕು ಮಿಶ್ರಿತ ಸಂತೋಷವನ್ನಾಗಿ ಅನುಭವಿಸುತ್ತಿದ್ದರು.

ಪುತ್ತಬಾಕ ಕಂಚಿನಡ್ಕ ಪೇಟೆಯ ಅಡಿಕೆ ವ್ಯಾಪಾರಿ. ಹಲವಾರು ವರ್ಷಗಳಿಂದ ಅವರು ಇದೇ ವ್ಯಾಪಾರವನ್ನು ಮಾಡುತ್ತಿದ್ದರು. ವ್ಯಾಪಾರಕ್ಕೆ ಸಂಬಂಧಪಟ್ಟವರ ಹೊರತು ಅವರು ಇನ್ನಿತರರಲ್ಲಿ ಮಾತುಕತೆ ಅಷ್ಟಕಷ್ಟೆ. ಅವರ ಕೈ ತುಂಬಾ ಹಣವಿದೆ ಎಂದು ಊರ ಜನರ ಬಾಯಲ್ಲಿನ ಗುಸುಗುಸು. ಪುತ್ತಬಾಕ ಎಂದೂ ತನ್ನ ಶ್ರೀಮಂತಿಕೆಯನ್ನು ಪ್ರದರ್ಶಿಸಿದವರಲ್ಲ. ದೊಗಲು ಅಂಗಿ ಮತ್ತು ಚೌಕಳಿ ಲುಂಗಿಯನ್ನುಟ್ಟು ಪೇಟೆಯ ತನ್ನ ಅಂಗಡಿಯಲ್ಲಿ ಅಡಿಕೆಯ ಮೂಟೆಯನ್ನು ಅತ್ತಿತ್ತ ಸರಿಸುತ್ತಾ ಏನಾದರು ಕೆಲಸ ಮಾಡಿಕೊಂಡಿರುತ್ತಿದ್ದರು. ‘ಹೇಗಿದ್ದೀರಿ ಪುತ್ತಬಾಕ, ವ್ಯಾಪಾರ ಹೇಗಿದೆ ?’ ಎಂದು ಯಾರಾದರು ಕೇಳಿದರೆ ‘ಅಲ್ಲಿಂದಲ್ಲಿಗೆ ಇದ್ದೇನೆ ’ ಎಂಬ ಒಗಟಿನ ಉತ್ತರ ಅವರಲ್ಲಿ ಸದಾ ಸಿದ್ಧವಾಗಿರುತ್ತಿತ್ತು. ತನ್ನ ಆರ್ಥಿಕ ಮಟ್ಟ ಹೊರಗೆ ತಿಳಿಯದಿರಲು ಅವರು ಬಹಳ ಎಚ್ಚರ ವಹಿಸುತ್ತಿದ್ದರು. ಹಣದ ಮುಗ್ಗಟ್ಟು ಇರುವವರಂತೆ ತೋರ್ಪಡಿಸಲು ಪಕ್ಕದಂಗಡಿಯವರಿಂದ ಹಾಗು ಪರಿಚಿತರಿಂದ ಹಣವನ್ನು ಸಾಲವಾಗಿ ಪಡೆಯುವುದು, ಮಸೀದಿ ವಂತಿಗೆ ಬಾಕಿ ಇಡುವುದು ಮೊದಲಾದ ವಿವಿಧ ಕಸರತ್ತುಗಳನ್ನು ಅವರು ನಡೆಸಿಕೊಂಡು ಬರುತ್ತಿದ್ದರು. ಪುತ್ತಬಾಕರ ನಾಟಕವನ್ನು ತಿಳಿದ ಕೆಲವರು ಅವರಿಂದ ಇನ್ನಷ್ಟು ಅಭಿನಯವನ್ನು ಮಾಡಿಸಿ ಪುಕ್ಕಟೆ ಮನರಂಜನೆ ಪಡೆಯುತ್ತಿದ್ದರು. ಕೆಲ ಯುವಕರು ಅವರನ್ನು ಸತಾಯಿಸುವ ಉದ್ದೇಶದಿಂದ ಮದ್ರಸ ಕಟ್ಟಡ ನಿರ್ಮಾಣದ ಕಲೆಕ್ಷನ್ ಬಗ್ಗೆ ಅವರ ಬಳಿ ಮಾತು ಎತ್ತುವುದಿದೆ. ಆ ವೇಳೆ ಅವರು ವಿಷಯವನ್ನು ಬೇರೆಡೆಗೆ ತಿರುಗಿಸಲು ಪಾಡು ಪಡುವುದನ್ನು ಕಂಡು ಯುವಕರ ತಂಡ ಆನಂದ



ಪಡೆಯುತ್ತಿದ್ದರು.

ಕಂಚಿನಡ್ಕ ಜುಮಾ ಮಸೀದಿಯಲ್ಲಿ ವಾರ್ಷಿಕ ರಾತೀಬ್ ನೇರ್ಚೆ ನಡೆಯುವ ದಿನದಂದೆ ಆಡಳಿತ ಕಮಿಟಿಯ ಮಹಾಸಭೆಯು ನಡೆಯುವುದು ಅಲ್ಲಿನ ರೂಢಿ. ಮಹಾಸಭೆ ನಡೆದು ಹೊಸ ಕಮಿಟಿ ರಚನೆಯಾದ ಬಳಿಕ ಸೀರಣಿ ವಿತರಣೆ ಎಂಬುದು ಅಲ್ಲಿನ ಅಲಿಖಿತ ಶಾಸನ. ಇದರಿಂದಾಗಿ ಅಲ್ಲಿನ ಜನರಿಗೆ ಮಹಾಸಭೆಯಲ್ಲಿ ಆಸಕ್ತಿ ಇಲ್ಲದಿದ್ದರೂ ಸೀರಣಿ ಕೈತಪ್ಪಿ ಹೋಗದಿರಲು ಅವರೆಲ್ಲರೂ ಅನಿವಾರ್ಯವಾಗಿ ಮಹಾಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಹಾಗೆ ಸೇರಿದ ಗುಂಪಿನಲ್ಲಿ ಪುತ್ತಬಾಕ ಕೂಡ ಒಬ್ಬರು. ಆಶ್ಚರ್ಯಕರ ಸಂಗತಿ ಎಂದರೆ ಕೇವಲ ಪ್ರೇಕ್ಷಕನಾಗಿ ಭಾಗವಹಿಸಿದ್ದ ಪುತ್ತಬಾಕ ನಾಟಕೀಯ ವಿದ್ಯಾಮಾನದ ಬಳಿಕ ಕಮಿಟಿ ಅಧ್ಯಕ್ಷನಾಗಿ ಆಯ್ಕೆಯಾಗಿದ್ದರು. ಈ ಅನಿರೀಕ್ಷಿತ ಘಟನೆಯನ್ನು ಹೇಗೆ ಸ್ವೀಕರಿಸಬೇಕೆಂದು ತಿಳಿಯದೆ ಅವರು ಗೊಂದಲದ ಗೂಡಾಗಿಬಿಟ್ಟಿದ್ದರು.

ಮಸೀದಿಗೆ ಹೊರಡುವಾಗ ಸೀರಣಿಗೆ ಹೊರತಾದ ಮತ್ಯಾವುದೇ ನಿರೀಕ್ಷೆಯನ್ನು ಅವರು ಇಟ್ಟುಕೊಂಡಿರಲಿಲ್ಲ. ಜನರಿಂದ ಉಗಿಸಿಕೊಳ್ಳಲು ಹೊಸದಾಗಿ ಜಮಾಅತ್ ಕಮಿಟಿಗೆ ಆರಿಸಿ ಬರುವವರು ಯಾರಿರಬಹುದು ಎಂಬ ಕುತೂಹಲ ಮಾತ್ರ ಎಲ್ಲರಂತೆ ಅವರಲ್ಲೂ ಇತ್ತು. ಮಸೀದಿಯಿಂದ ಅರ್ಧ ಕಿಲೋಮೀಟರ್ ದೂರಕ್ಕೆ ಮಹಾಸಭೆಯ ಗದ್ದಲ ಕೇಳಿಸಿಕೊಂಡ ಪುತ್ತಾಬಾಕ ತನ್ನ ಕಾಲ್ನಡಿಗೆಯ ವೇಗವನ್ನು ಸ್ವಲ್ಪ ಹೆಚ್ಚಿಸಿದರು. ಅವರು ಮಸೀದಿ ತಲುಪುವ ಹೊತ್ತಿಗೆ ಕಳೆದ ವರ್ಷದ ಲೆಕ್ಕ ಪತ್ರ ಮಂಡನೆ ಪ್ರಕ್ರಿಯೆ ಮುಗಿದಿತ್ತು. ನಡೆದ ಚರ್ಚೆಯನ್ನು ಗಂಭೀರವಾಗಿ ಪರಿಗಣಿಸಿದ ಗುರುತನ್ನು ಅಲ್ಲಿ ಸೇರಿದ್ದ ಜನರ ಮುಖದಲ್ಲಿನ ದಣಿವು ಸ್ಪಷ್ಟವಾಗಿ ತೋರಿಸುತ್ತಿತ್ತು. ಗುಂಪಿನೊಳಗೆ ಸೇರಿಕೊಂಡ ಪುತ್ತಬಾಕ ಒಂದೆಡೆ ಕುಳಿತುಕೊಂಡು ಅಲ್ಲಿ ನಡೆವ ವಿದ್ಯಮಾನವನ್ನು ವೀಕ್ಷಿಸತೊಡಗಿದ ಅವರಿಗೆ ಮಾಂಸದ ಪದಾರ್ಥದ ವಾಸನೆ ಮೂಗಿಗಡರಿ ನಾಲಿಗೆಯಲ್ಲಿ ನೀರೂರತೊಡಗಿತ್ತು. ಎಷ್ಟೇ ಹೊತ್ತಾದರೂ ಸೀರಣಿ ಪಡೆದುಕೊಳ್ಳದೆ ಹಿಂದಿರುಗುವುದಿಲ್ಲ ಎಂದು ಅವರಾಗಲೆ ತೀರ್ಮಾನಿಸಿದ್ದರು.

ಈ ಮಧ್ಯೆ ನಾಟಕೀಯವಾಗಿ ನಡೆದ ಕಮಿಟಿ ರಚನೆಯಲ್ಲಿ ಆಯ್ಕೆಗೊಂಡ ಹದಿನೈದು ಮಂದಿಗಳ ಪೈಕಿ ಪುತ್ತಬಾಕರ ಹೆಸರೂ ಸೇರಿಕೊಂಡಿತ್ತು. ಅವರೆಲ್ಲ ಸೇರಿ ಪುತ್ತಬಾಕರನ್ನು ಅಧ್ಯಕ್ಷರೆಂದು ಘೋಷಿಸಿದಾಗ ಆಕಾಶವೇ ತಲೆ ಮೇಲೆ ಬಿದ್ದವರಂತೆ ಪುತ್ತಬಾಕ ಕಂಗಾಲಾಗಿ ಬಿಟ್ಟಿದ್ದರು. ಆ ಪದವಿಯ ತಲೆಬುಡ ತಿಳಿಯದೆ ಅವರ ಮನಸ್ಸು ಅಳುಕಿನಿಂದ ಮುದುಡಿ ಹೋಗಿತ್ತು. ಈ ಹುದ್ದೆ ಸರಿಯಾಗಿ ನಿರ್ವಹಿಸಲು ಕಷ್ಟವಾಗಬಹುದು ಎಂಬ ಅವರ ಯಾವುದೇ ಮಾತನ್ನೂ ಅಲ್ಲಿ ಕೇಳುವವರೇ ಇರಲಿಲ್ಲ. 'ಎಲ್ಲ ಸರಿಯಾಗುತ್ತದೆ , ಎಲ್ಲದಕ್ಕೂ ನಾವಿದ್ದೇವೆ, ಏನೂ ಹೆದರಬೇಡಿ' ಎಂದು ಸಮಾಧಾನ ಹೇಳಿ ಯುವಕರ ದಂಡು ಅವರನ್ನು ಮನೆಗೆ ಕಳಿಸಿ ಕೊಟ್ಟಿತ್ತು.

ಅಂದು ರಾತ್ರಿ ಅವರಿಗೆ ನಿದ್ದೆಯೇ ಹತ್ತಿರಲಿಲ್ಲ. ದಿಗಿಲುಗೊಂಡಿದ್ದ ಅವರು ಮೆಲ್ಲನೆ ವಾಸ್ತವ ಲೋಕಕ್ಕೆ ಬರತೊಡಗಿದ್ದರು. ಇಂದಿನಿಂದ ನಾನು ಇಲ್ಲಿನ ಮಸೀದಿ ಅಧ್ಯಕ್ಷ. ಮತಪ್ರಸಂಗದ ಕರಪತ್ರದಲ್ಲಿ ಇನ್ನು ಮುಂದೆ ನನ್ನ ಹೆಸರು ರಾರಾಜಿಸಲಿದೆ, ಮೀಲಾದ್ ದಿನ ಮಕ್ಕಳಿಗೆ ವೇದಿಕೆಯಲ್ಲಿ ನಿಂತು ಬಹುಮಾನ ವಿತರಣೆ..... ಹೀಗೆ ಒಂದೊಂದು ವೈಭವದ ದೃಶ್ಯಗಳು ಅವರನ್ನು ಬಿಟ್ಟುಬಿಡದೆ ಕಾಡುತ್ತಿತ್ತು. ಇದು ಒಂದು ವರ್ಷದ ಹಿಂದಿನ ಮಾತು. ಕಳೆದ ಒಂದು ವರ್ಷದಲ್ಲಿ ಅವರು ಅಧ್ಯಕ್ಷ ಸ್ಥಾನದ ರುಚಿಯನ್ನು ಬಹಳವಾಗಿ ಸವಿದಿದ್ದಾರೆ. ಇನ್ನು ಮುಂದೆ ಈ ಸ್ಥಾನವನ್ನು ತನ್ನಲ್ಲೆ ಉಳಿಸಿಕೊಳ್ಳಬೇಕೆಂಬ ಬಯಕೆ ಮೊಳಕೆಯೊಡೆದು ದಿನದಿಂದ ದಿನಕ್ಕೆ ಅದು ಹೆಮ್ಮರವಾಗಿ ಅವರ ಮನದಲ್ಲಿ ಬೆಳೆದಿತ್ತು. ಎರಡು ದಿನಗಳ ಬಳಿಕ ನಡೆವ ಮಹಾಸಭೆಯಲ್ಲಿ ತನ್ನ ಸ್ಥಾನವನ್ನು ಮುಂದಕ್ಕೂ ಉಳಿಸಿಕೊಳ್ಳಬೇಕು ಎಂದು ಅವರು ದೃಢ ನಿಲುವು ತಾಳಿದ್ದರು. ಅದಕ್ಕಾಗಿ ಏನು ಮಾಡಬೇಕೆಂದು ಅವರಿಗೆ ತಿಳಿಯದಿದ್ದರೂ ತಲೆಗೆ ಆವರಿಸಿದ ಚಿಂತೆ ಅವರ ಅಂದಿನ ನಿದ್ದೆ ಯನ್ನು ಕೆಡಿಸಿತ್ತು.

ಅದೇ ವೇಳೆ ಯುವಕರ ತಂಡವೊಂದು ಅಜ್ಞಾತ ಸ್ಥಳದಲ್ಲಿ ಕುಳಿತು ಮುಂದಿನ ವರ್ಷದ ಮಿಕವನ್ನು ಕಂಡು ಹಿಡಿಯಲು ನಡೆಸುತ್ತಿದ್ದ ಗುಪ್ತ ಸಭೆಯ ಬಗ್ಗೆ ಪುತ್ತಬಾಕಗೆ ಯಾವುದೇ ಸುಳಿವಿರಲಿಲ್ಲ. ಕಳೆದ ಬಾರಿ ಆ ಯುವಕರ ತಂಡ ಗುಟ್ಟಾಗಿ ತಂತ್ರವನ್ನು ರೂಪಿಸಿ ಪುತ್ತಬಾಕರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುವ ಮೂಲಕ ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸಿತ್ತು. ಆ ಮೂಲಕ ಅವರಿಂದ ಜಮಾಅತ್‌ಗೆ ಬಾಕಿ ಇದ್ದ ಹಣವನ್ನು ವಸೂಲು ಮಾಡುವುದರೊಂದಿಗೆ ನಿರ್ಮಾಣಗೊಳ್ಳುತ್ತಿದ್ದ ಮದ್ರಸ ಕಟ್ಟಡಕ್ಕೆ ದೊಡ್ಡ ಮೊತ್ತದ ದೇಣಿಗೆಯನ್ನು ಪೀಕಿಸುವಲ್ಲಿಯೂ ಅವರು ಯಶಸ್ವಿಯಾಗಿದ್ದರು. ಇದಾವುದರ ಸುಳಿವರಿಯದ ಪುತ್ತಬಾಕ ಆ ಮಧ್ಯ ರಾತ್ರಿಯಲ್ಲಿ ಚಾವಣಿಯತ್ತ ದೃಷ್ಟಿ ಹಾಯಿಸಿ ಫಲಿತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಯಂತೆ ಹಾಸಿಗೆಯಲ್ಲಿ ಚಡಪಡಿಸುತ್ತಿದ್ದರು.

★★★★

# ಕೋಟ್ಯಾಧಿಪತಿಗಳಾಗಲು ಜನಸೇವೆಯ ಮುಖವಾಡ!

● ಶೌಕತ್ ಅಲಿ, ಎಸ್.



ರಾಜಕೀಯವೆಂಬುದು ಈಗ ಜನಸೇವೆಯಾಗಿ ಉಳಿದಿಲ್ಲ. ಬದಲಾಗಿ ಅದು ಒಂದು ವ್ಯವಹಾರವಾಗಿ ಮಾರ್ಪಾಡಾಗಿದೆ. ಯಾವನೇ ಒಬ್ಬ ವ್ಯಕ್ತಿಗೆ ಕೋಟ್ಯಾಧಿಪತಿಯಾಗುವ ಇಚ್ಛೆಯಿದ್ದರೆ ಆತ ಸಂಸದ ಅಥವಾ ಶಾಸಕನಾದರೆ ಸಾಕು. ಆತನ ಕೋಟ್ಯಾಧಿಪತಿಯಾಗುವ ಆಸೆ ಈಡೇರಿದಂತೆ. ಚುನಾವಣೆಯಲ್ಲಿ ದೃಷ್ಟಿ ಹಾಯಿಸುವ ಸ್ವಯಂಪ್ರೇರಿತ ಸಂಘಟನೆಯೊಂದು ಇಂತಹ ನಂಬಲರ್ಹ ರಹಸ್ಯವನ್ನು ಬಹಿರಂಗಪಡಿಸಿದೆ.

ಐದು ರಾಜ್ಯಗಳಲ್ಲಿ ನಡೆದ ವಿಧಾನಸಭೆ ಚುನಾವಣೆಯ ಫಲಿತಾಂಶದ ಬಳಿಕ ನಡೆಸಿದ ಸಂಶೋಧನೆಯ ಪ್ರಕಾರ, ಚುನಾವಣೆಯಲ್ಲಿ ಮರು ಸ್ಪರ್ಧಿಸುತ್ತಿರುವ ಶಾಸಕರ ಸಂಪತ್ತು ಐದು ವರ್ಷಗಳಲ್ಲಿ ಮೂರು ಪಟ್ಟುಗಿಂತಲೂ ಹೆಚ್ಚಾಗಿದೆ.

*ಈ ಅಧ್ಯಯನದಿಂದ ನಿಜವಾಗಿಯೂ ಆತಂಕ ಪಡುವ ವಿಷಯಗಳು ಕೂಡ ತಿಳಿದು ಬಂದಿದೆ. ಪಂಚರಾಜ್ಯಗಳ ಚುನಾವಣಾ ಫಲಿತಾಂಶವು ತಿಳಿಸುವುದೇನೆಂದರೆ, ಅಪರಾಧ ಹಿನ್ನೆಲೆಯುಳ್ಳ ನೇತಾರರ ಸಂಖ್ಯೆಯೂ ಬಹಳ ವೇಗವಾಗಿ ಹೆಚ್ಚಿದೆ. ಚುನಾವಣೆಯಲ್ಲಿ ಗೆದ್ದು ಬಂದಿರುವ ಪ್ರತಿ ಮೂರರಲ್ಲಿ ಒಬ್ಬನ ವಿರುದ್ಧ ಅಪರಾಧಕ್ಕೆ ಸಂಬಂಧಿಸಿದ ಪ್ರಕರಣಗಳಿವೆ ಎಂಬುದು ಈ ತನಿಖೆಯಿಂದ ತಿಳಿದು ಬಂದಿದೆ.*

*ಒಟ್ಟು 824 ಶಾಸಕರಲ್ಲಿ 257 ಶಾಸಕರು ಅಪರಾಧ ಕೃತ್ಯಗಳಲ್ಲಿ ಗುರುತಿಸಿಕೊಂಡವರಾಗಿದ್ದಾರೆ. ಇವರಲ್ಲಿ 133 ಮಂದಿಯ ವಿರುದ್ಧ ಹತ್ಯೆಯಂತಹ ಪ್ರಕರಣಗಳು ಕೂಡ ದಾಖಲಾಗಿವೆ. ಐದು ವರ್ಷಗಳ ಹಿಂದೆ ಇಂತಹ ಅಪರಾಧ ಹಿನ್ನೆಲೆಯುಳ್ಳ ಶಾಸಕರ ಸಂಖ್ಯೆ 204 ಆಗಿತ್ತು. ಸಂಪತ್ತಿನ ವಿಚಾರದಲ್ಲಿ ಪಶ್ಚಿಮ ಬಂಗಾಳದ ರಾಜಕಾರಣಿಗಳು ಬಹಳ ಹಿಂದುಳಿದಿದ್ದರು. ಆದರೆ ಅಪರಾಧ ಕೃತ್ಯಗಳಲ್ಲಿ ಅವರು ಪಂಥ ಕಟ್ಟಿದವರಂತೆ ಕಂಡುಬರುತ್ತಾರೆ. ಇದರಲ್ಲಿ ಐದು ರಾಜ್ಯಗಳ ಪೈಕಿ ಅವರು ಮೊದಲನೆ ಸ್ಥಾನದಲ್ಲಿದ್ದಾರೆ.*

ಚುನಾವಣೆಯ ಸಂದರ್ಭ ದಾಖಲಿಸಲಾಗುವ ಆಸ್ತಿ ವಿವರಗಳ ಬಗ್ಗೆ ಅಧ್ಯಯನ ನಡೆಸಿರುವ ಈ ಸಂಸ್ಥೆ, 2009ರಲ್ಲಿ ಮರು ಸ್ಪರ್ಧಿಸುವ ಸಂಸದರ ಆಸ್ತಿಯು 3 ಪಟ್ಟುಗಿಂತಲೂ ಹೆಚ್ಚಾಗಿದೆ ಎಂದು ತಿಳಿಸಿದೆ.

ಕೋಟ್ಯಾಧಿಪತಿ ಎಂದು ಕರೆಸಿಕೊಳ್ಳುವ ಶಾಸಕರ ಸಂಖ್ಯೆಯಲ್ಲಿಯೂ ಗಣನೀಯ ಏರಿಕೆಯಾಗಿದೆ ಎಂಬ ಬೆರಗುಗೊಳಿಸುವ ಈ ತನಿಖಾ ವರದಿಯನ್ನು ಈ ಸಂಸ್ಥೆಯು ಬಹಿರಂಗಪಡಿಸಿದೆ. ಪಂಚ ರಾಜ್ಯಗಳಲ್ಲಿ ಐದು ವರ್ಷಗಳ ಹಿಂದೆ ಕೇವಲ ಶೇ.12 ಮಂದಿ ಮಾತ್ರ ಕೋಟ್ಯಾಧಿಪತಿಗಳ ಸಾಲಿನಲ್ಲಿ ಗುರುತಿಸಿಕೊಂಡಿದ್ದರು. ಈ ಬಾರಿ ಮೂರರಲ್ಲಿ ಒಬ್ಬ ಕೋಟ್ಯಾಧಿಪತಿಗಳ ಸಾಲಿನಲ್ಲಿ ಗುರುತಿಸಿಕೊಳ್ಳುತ್ತಿದ್ದಾನೆ.

ಅಂದರೆ ಈ ಸಂಖ್ಯೆ ಒಂದೇ ಏಟಿಗೆ ಶೇ.33ಕ್ಕೆ ಏರಿಕೆಯಾಗಿದೆ. ಹೀಗೆ ರಾಜಕಾರಣ ಮಾಡುವವರ ಸಂಖ್ಯೆ ಏಕೆ ಹೆಚ್ಚಾಗುತ್ತಿದೆ ಮತ್ತು ಚುನಾವಣೆಯ ವೇಳೆ ಟಿಕೆಟ್‌ಗಾಗಿ ಯಾಕಿಷ್ಟು ಪೈಪೋಟಿ, ರಾದ್ಧಾಂತ ನಡೆಯುತ್ತದೆ ಎಂಬುದನ್ನು ನಾವು ಸುಲಭವಾಗಿ ತಿಳಿದುಕೊಳ್ಳಬಹುದು. ಈ ತನಿಖೆಯ ಬಹುಮುಖ್ಯ ದಾಖಲೆ ಏನು ತಿಳಿಸುತ್ತದೆ ಎಂದರೆ, ತಮಿಳುನಾಡಿನ ಶಾಸಕರು ತುಂಬಾ ಶ್ರೀಮಂತರಾಗಿದ್ದಾರೆ. ಅವರ ಸರಾಸರಿ ಸಂಪತ್ತು 4 ಕೋಟಿ ಎಂದು ಅಂದಾಜಿಸಲಾಗಿದೆ.

ಹಾಗೆಯೇ ಅಸ್ಸಾಂ, ಕೇರಳ, ಪುದುಚೇರಿಯ ನೇತಾರರಲ್ಲೂ ಸಂಪತ್ತು ಗಳಿಸುವ ಕೌಶಲ್ಯ ಕಮ್ಮಿಯೇನೂ ಇಲ್ಲ. ಇದರಲ್ಲಿ ಪಶ್ಚಿಮ ಬಂಗಾಳದ ಸ್ಥಿತಿಯು ತುಂಬಾ ದಯನೀಯವಾಗಿದೆ. ಇಲ್ಲಿನ ಶಾಸಕರ ಸರಾಸರಿ ಸಂಪತ್ತು 68 ಲಕ್ಷ ಎಂದು ಅಂದಾಜಿಸಲಾಗಿದೆ. ಕುತೂಹಲಕಾರಿ ಅಂಶವೆಂದರೆ ಸಂಪತ್ತುದಾರ ಶಾಸಕರ ಪೈಕಿ ಮೊದಲ ಮೂರು ಹೆಸರುಗಳು ತಮಿಳುನಾಡಿನ ಪಾಲಾಗಿವೆ. ಇಲ್ಲಿ ಚುನಾವಣೆಯಲ್ಲಿ ಮರು ಸ್ಪರ್ಧಿಸುತ್ತಿರುವ 97 ಶಾಸಕರ ಆಸ್ತಿ ಗಳಿಕೆ ಐದು ವರ್ಷಗಳಲ್ಲಿ ಮೂರು ಪಟ್ಟು ಹೆಚ್ಚಾಗಿದೆ. ಆಶ್ಚರ್ಯಕರ ಸಂಗತಿ ಎಂದರೆ ದೇಶದ ಅತಿದೊಡ್ಡ ಹಗರಣವಾಗಿರುವ 2ಜಿ ಸ್ಪೆಕ್ಟ್ರಂ ಹಗರಣದ ಪ್ರಧಾನ ಆರೋಪಿ ಎಂದು ಹೆಸರಿಸಲಾಗಿರುವ ಎ.ರಾಜಾ ಕೂಡ ತಮಿಳುನಾಡಿನವರೇ ಆಗಿದ್ದಾರೆ.

ಈ ಅಧ್ಯಯನದಿಂದ ನಿಜವಾಗಿಯೂ ಆತಂಕ ಪಡುವ ವಿಷಯಗಳು ಕೂಡ ತಿಳಿದು ಬಂದಿದೆ. ಪಂಚರಾಜ್ಯಗಳ ಚುನಾವಣಾ ಫಲಿತಾಂಶವು ತಿಳಿಸುವುದೇನೆಂದರೆ, ಅಪರಾಧ ಹಿನ್ನೆಲೆಯುಳ್ಳ ನೇತಾರರ ಸಂಖ್ಯೆಯೂ ಬಹಳ ವೇಗವಾಗಿ ಹೆಚ್ಚಿದೆ. ಚುನಾವಣೆಯಲ್ಲಿ ಗೆದ್ದು ಬಂದಿರುವ ಪ್ರತಿ ಮೂರರಲ್ಲಿ ಒಬ್ಬನ ವಿರುದ್ಧ ಅಪರಾಧಕ್ಕೆ ಸಂಬಂಧಿಸಿದ ಪ್ರಕರಣಗಳಿವೆ ಎಂಬುದು ಈ ತನಿಖೆಯಿಂದ ತಿಳಿದು ಬಂದಿದೆ.

ಒಟ್ಟು 824 ಶಾಸಕರಲ್ಲಿ 257 ಶಾಸಕರು ಅಪರಾಧ ಕೃತ್ಯಗಳಲ್ಲಿ ಗುರುತಿಸಿಕೊಂಡವರಾಗಿದ್ದಾರೆ. ಇವರಲ್ಲಿ 133 ಮಂದಿಯ ವಿರುದ್ಧ ಹತ್ಯೆಯಂತಹ ಪ್ರಕರಣಗಳು ಕೂಡ ದಾಖಲಾಗಿವೆ. ಐದು ವರ್ಷಗಳ ಹಿಂದೆ ಇಂತಹ ಅಪರಾಧ ಹಿನ್ನೆಲೆಯುಳ್ಳ ಶಾಸಕರ ಸಂಖ್ಯೆ 204 ಆಗಿತ್ತು.

ಸಂಪತ್ತಿನ ವಿಚಾರದಲ್ಲಿ ಪಶ್ಚಿಮ ಬಂಗಾಳದ ರಾಜಕಾರಣಿಗಳು ಬಹಳ ಹಿಂದುಳಿದಿದ್ದರು. ಆದರೆ ಅಪರಾಧ ಕೃತ್ಯಗಳಲ್ಲಿ ಅವರು ಪಂಥ ಕಟ್ಟಿದವರಂತೆ ಕಂಡುಬರುತ್ತಾರೆ. ಇದರಲ್ಲಿ ಐದು ರಾಜ್ಯಗಳ ಪೈಕಿ ಅವರು ಮೊದಲನೆ ಸ್ಥಾನದಲ್ಲಿದ್ದಾರೆ.

ಹಾಗಾದರೆ ರಾಜಕೀಯ ಎಂಬುದು ಜನಸೇವೆಯಾಗಿ ಉಳಿದಿದೆ ಎಂದು ನಿಮಗನಿಸುತ್ತಿದೆಯೇ? ಹಾಗೆಂದು ನಿಮಗೆ ಇನ್ನೂ ಅನಿಸುತ್ತಿದೆ ಎಂದಾದರೆ ನೀವು ರಾಜಕೀಯ ಪುಡಾರಿಗಳ ಮಾತಿನ ಅರಮನೆಯಲ್ಲಿ ವಿಹರಿಸುತ್ತಿದ್ದೀರಿ ಎಂದರ್ಥ. ರಾಜಕೀಯಕ್ಕೆ ಹೊಸ ಮುನ್ನುಡಿ ಬರೆಯಲು ನಾವೆಲ್ಲರೂ ಜಾಗೃತರಾಗಬೇಕಾಗಿದೆ.

# ನಮ್ಮ ವ್ಯಕ್ತಿತ್ವವನ್ನು ಪುನರ್ ನಿರ್ಮಿಸೋಣ

- ಮುರ್ಶಿದ್

ಸುಡು ಬಿಸಿಲಿನ ಬೇಗೆಯಲ್ಲಿ ದೊಡ್ಡ ದೊಡ್ಡ ಮರಗಳು ತಮ್ಮ ಎಲೆಗಳನ್ನೆಲ್ಲಾ ಉದುರಿಸಿ ನಿಲ್ಲುವುದನ್ನು ನಾವು ಕಂಡಿದ್ದೇವೆ. ಅದೇ ರೀತಿ ಸಣ್ಣ ಗಿಡಗಳು ಸಂಪೂರ್ಣವಾಗಿ ಒಣಗಿ ಕರಟಿ ಹೋಗುವುದನ್ನೂ ಕಂಡಿದ್ದೇವೆ. ಬೇಸಿಗೆ ದಿನದಲ್ಲಿ ಭೂಮಿ ಸಂಪೂರ್ಣ ಒಣಗಿ ಮರುಭೂಮಿಯಂತೆ ಗೋಚರಿಸತೊಡಗುತ್ತದೆ. ಆದರೆ ಒಂದು ಮಳೆ ಬಿದ್ದರೆ ಸಾಕು, ಮರಗಿಡಗಳೆಲ್ಲಾ ಮತ್ತೆ ಚಿಗುರಿ ನಿಲ್ಲುತ್ತದೆ. ಭೂಮಿ ಹಸಿರು ರತ್ನಗಂಬಳಿ ಹಾಸಿದಂತೆ ಕಂಗೊಳಿಸುತ್ತದೆ. ಅದನ್ನು ಕಾಣುವಾಗ ಕಣ್ಮನ ತುಂಬುತ್ತದೆ.

ನಾವು ಪ್ರತಿಯೊಬ್ಬರು ಜನಿಸಿ ಎಷ್ಟೋ ವರ್ಷಗಳಾಗಿರಬಹುದು. ನಮ್ಮ ವಯಸ್ಸು ಅದಕ್ಕಿರುವ ಉತ್ತರವಾಗಿದೆ. ಈ ಆಯುಷ್ಯದ ಅವಧಿಯಲ್ಲಿ ಎಷ್ಟೋ ಬಟ್ಟೆಬರೆಗಳನ್ನು ನಾವು ಬದಲಿಸಿದೆವು. ಹಳತಾಗಿ ಮಸುಕಾದ ಚಪ್ಪಲಿಗಳನ್ನು ಬದಲಿಸಿ ಹೊಸದನ್ನು ಧರಿಸಿದೆವು. ಈ ನವೀಕರಣವೆಂಬ ಪುನರ್‌ನಿರ್ಮಾಣ ಕಾರ್ಯ ನಿರಂತರವಾಗಿ ನಡೆದುಕೊಂಡಿರುತ್ತದೆ. ಅದೆಷ್ಟು ಬಾರಿ ನವೀಕರಿಸಿದೆವು ಎಂಬುದನ್ನೂ ಸಹ ನಾವೀಗ ಮರೆತುಬಿಟ್ಟಿದ್ದೇವೆ.

ಎಲೆಯನ್ನು ಉದುರಿಸಿಕೊಂಡ ಮರಗಿಡಗಳು ಮತ್ತೆ ಚಿಗುರದಿದ್ದಲ್ಲಿ, ಅದೇ ರೀತಿ ದೇಹದ ಬೆಳವಣಿಗೆಯಂತೆ ಉಡುಪುಗಳನ್ನು ಬದಲಿಸದಿದ್ದಲ್ಲಿ ನಮ್ಮ ಜೀವನ ಹೇಗಿರಬಹುದಿತ್ತು ? ಯೋಚಿಸಿ ನೋಡಿರಿ; ಎಷ್ಟು ದಯನೀಯವಾಗಿರುತ್ತಿತ್ತು ? ಜೀವನದ ಪುನರ್ ನಿರ್ಮಾಣ ಕಾರ್ಯ ನಡೆದಾಗ ಅದು ಆಸ್ವಾಧನೆಗೆ ಯೋಗ್ಯವಾಗುತ್ತದೆ ಎಂಬುದು ಸ್ಪಷ್ಟ. ಇದರಿಂದ ನಾವು ನಮ್ಮ ವ್ಯಕ್ತಿತ್ವವನ್ನು ಪುನರ್‌ನಿರ್ಮಾಣಗೊಳಿಸಬೇಕಾದ ಅಗತ್ಯ ಇದೆ ಎಂಬ ವಿಚಾರವನ್ನು ತಿಳಿದುಕೊಳ್ಳುತ್ತೇವೆ.

ನಾವು ನಮ್ಮನ್ನು ಪುನರ್ ನಿರ್ಮಿಸಿ ಹೊಸ ಜೀವನವನ್ನು ಪ್ರಾರಂಭಿಸಬೇಕೆಂದು ಅಲ್ಲಾಹನು ತಿಳಿಸುತ್ತಾನೆ :

***ಓ ಸತ್ಯವಿಶ್ವಾಸಿಗಳೇ, ನಿಮಗೆ ಚೇತನ ನೀಡುವಂತ ವಿಷಯದ ಕಡೆಗೆ ಅಲ್ಲಾಹು ಮತ್ತು ರಸೂಲರು ನಿಮ್ಮನ್ನು ಕರೆದಾಗ 'ಓ'ಗೊಡಿರಿ. (ಅಲ್‌ಅಂಫಾಲ್:24)***

ನಮ್ಮ ವೈಯಕ್ತಿಕ ಜೀವನವೆಂಬ ಮರದಲ್ಲಿರುವ ಹಲವು ಎಲೆಗಳನ್ನು ನಾವು ಉದುರಿಸಿಕೊಳ್ಳಬೇಕಾಗುತ್ತದೆ. ಅದೇ ರೀತಿ ಕೆಲವು ಹೊಸ ಚಿಗುರುಗಳನ್ನು ಮತ್ತು ಹೂಗಳನ್ನು ಅರಳಿಸಬೇಕಾಗುತ್ತದೆ. ಆಗ ಮಾತ್ರ ನಮ್ಮ ಪುನರ್‌ನಿರ್ಮಾಣ ಕಾರ್ಯ ಪೂರ್ಣವಾಗಲು ಸಾಧ್ಯ.

ವಿಶ್ವಾಸ ವೈಯಕ್ತಿಕ ಜೀವನದ ನವೀಕರಣದಲ್ಲಿ ಮೊದಲು ನಮಗೆ ಬೇಕಾದುದು ಅಲ್ಲಾಹನಲ್ಲಿ ಮತ್ತು ಪರಲೋಕದಲ್ಲಿನ ದೃಢ ವಿಶ್ವಾಸವಾಗಿದೆ.

ಓರ್ವವ್ಯಕ್ತಿ ತನ್ನ ಮನೆಯ ಮಹಡಿಯಲ್ಲಿ ಕುಳಿತುಕೊಂಡು ಹೊರಗಿನ ದೃಶ್ಯವನ್ನು ನೋಡುತ್ತಿದ್ದ. ಮನೆಯ ಸುತ್ತಮುತ್ತಲಿರುವ ರಸ್ತೆ, ಕಟ್ಟಡ, ಮನೆಗಳೆಲ್ಲಾ ಆತನಿಗೆ ಕುಳಿತಲ್ಲೆ ಕಾಣಿಸುತ್ತಿದೆ. ಸ್ವಲ್ಪ ಹೊತ್ತಿನ ಬಳಿಕ ಆ ದಾರಿಯಲ್ಲಿ ಯುವಕನೊಬ್ಬ ನಡೆದುಕೊಂಡು ಒಂದು ಮನೆಯ ಮುಂದೆ ನಿಂತು ಆ ಮನೆಯ ಯಜಮಾನನಾದ ವೃದ್ಧನ ಜತೆಯಲ್ಲಿ ಸ್ವಲ್ಪ ಹೊತ್ತು ಮಾತುಕತೆ ನಡೆಸುತ್ತಾನೆ. ಮಾತುಕತೆಯ ಮಧ್ಯೆ ವೃದ್ಧ ಕೋಪಗೊಂಡು ಆ ಯುವಕನಿಗೆ ಗದರಿಸಿ ಹೀನಾಮಾನವಾಗಿ ಬೈಗುಳವನ್ನು ನೀಡುತ್ತಾನೆ. ದೈಹಿಕವಾಗಿ ದೃಢಕಾಯನಾದ ಯುವಕ ಆ ವೃದ್ಧನಿಗೆ ಯಾವುದೇ ಪ್ರತಿಕ್ರಿಯೆ ನೀಡದೆ

ಮೌನವಾಗಿ ಹಿಂದಕ್ಕೆ ಮರಳುತ್ತಾನೆ. ಮಹಡಿ ಮೇಲಿದ್ದ ವ್ಯಕ್ತಿ ಈ ದೃಶ್ಯವನ್ನು ಸಂಪೂರ್ಣವಾಗಿ ನೋಡಿದ್ದ. ಆತ ಕೆಳಗಿಳಿದು ಆ ಯುವಕನಲ್ಲಿ ನಡೆದ ಘಟನೆಯ ಕುರಿತಾಗಿ ವಿಚಾರಿಸುತ್ತಾನೆ. ಆಗ ಆ ಯುವಕ ಹೀಗೆ ಹೇಳುತ್ತಾನೆ : ''ನಾನು ಆ ವೃದ್ಧನಿಂದ ಸ್ವಲ್ಪ ಹಣ ಸಾಲವಾಗಿ ಪಡೆದುಕೊಂಡಿದ್ದೆ. ನಿಶ್ಚಿತ ಗಡುವಿಗೆ ಹಣ ಸಂದಾಯ ಮಾಡಲು ನನಗೆ ಸಾಧ್ಯವಾಗಲಿಲ್ಲ. ಅದಕ್ಕಾಗಿ ಆ ವೃದ್ಧ ನನಗೆ ಇಷ್ಟೊಂದು ಬೈಗುಳ ಅರ್ಪಿಸಲು ಕಾರಣ.''

ವ್ಯಕ್ತಿ : 'ನೀನು ದೃಢ ಕಾಯನಾದ ಯುವಕ. ಆ ಮುದುಕನಿಗೆ ಎರಡೇಟು ಬಿಗಿಯಬಹುದಿತ್ತಲ್ಲ'

ಯುವಕ: ''ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೆಂದು ನನ್ನ ಪ್ರವಾದಿ(ಸ)ರು ಹೇಳಿರುತ್ತಾರೆ. ಆ ಮಾತನ್ನು ಪಾಲಿಸಲು ಸಾಧ್ಯವಾಗದಿದ್ದುದು ನನ್ನ ಮೊದಲ ತಪ್ಪು. ಇನ್ನು ಆ ಮುದುಕನ ಮೇಲೆ ನಾನು ಕೈ ಮಾಡಿದರೆ ದೇವನ ಬಳಿಯಲ್ಲಿ ನಾನು ಹೇಗೆ ಉತ್ತರಿಸಲಿ? '

ಈ ಘಟನೆ ಆ ವ್ಯಕ್ತಿಯ ಜೀವನದಲ್ಲಿ ಮಹತ್ವವಾದ ಬದಲಾವಣೆಯನ್ನು ಉಂಟುಮಾಡಿತು. ಈ ಕಾಲದಲ್ಲೂ ಯುವಕರಲ್ಲಿ ಇಂತಹ ಪ್ರಾಮಾಣಿಕವಾದ ಜೀವನವನ್ನು ರೂಪಿಸಲು ಸಾಧ್ಯವೇ?! ಅದಕ್ಕೆ ಪ್ರೇರಣೆಯಾಗಿದ್ದ ಪ್ರವಾದಿ(ಸ)ರ ಕುರಿತಂತೆ ತಿಳಿದುಕೊಳ್ಳಲು ಆ ವ್ಯಕ್ತಿ ತನ್ನ ಜೀವನವನ್ನು ಮುಡಿಪಾಗಿರಿಸಿದರು. ಕೊನೆಗೆ ಇಸ್ಲಾಮಿನಲ್ಲಿ ಆಕರ್ಷಿತನಾದ ಆ ವ್ಯಕ್ತಿ ಮುಸ್ಲಿಮನಾಗಿ ಧರ್ಮ ಸ್ವೀಕರಿಸಿದರು. ಜಗತ್ತಿನಲ್ಲಿ ಮೊತ್ತ ಮೊದಲ ಬಾರಿಗೆ ಕುರ್‌ಆನನ್ನು ಇಂಗ್ಲಿಷ್‌ಗೆ ಭಾಷಾಂತರ ಗೊಳಿಸಿದ ಆ ವಿದ್ವಾಂಸರ ಹೆಸರು ಮುಹಮ್ಮದ್ ಮಾರ್ಮಡ್ಯೂಕ್ ಪಿಕ್ತಾಲ್.

ಅಲ್ಲಾಹು ಮತ್ತು ಪರಲೋಕದಲ್ಲಿರುವ ವಿಶ್ವಾಸ ಮನದಲ್ಲಿ ದೃಢವಾಗಿ ಬಿಟ್ಟರೆ ನಾವು ಯಾವ ರೀತಿಯಲ್ಲಿ ಪುನರ್‌ನಿರ್ಮಾಣಗೊಳ್ಳುತ್ತೇವೆ ಎಂಬುದಕ್ಕೆ ಇದೊಂದು ಸ್ಪಷ್ಟ ಉದಾಹರಣೆಯಾಗಿದೆ.

ನಮ್ಮ ಕಾರ್ಯಚಟುವಟಿಕೆ ಮತ್ತು ಚಿಂತನೆಗಳನ್ನು ನಿಯಂತ್ರಿಸುವ ಹಾಗು ಸರಿಯಾಗಿಸುವ ಈ ರೀತಿಯ ದೃಢವಾದ ವಿಶ್ವಾಸ ನಮ್ಮಲ್ಲಿದೆಯೇ ? ಒಂದು ವೇಳೆ ಈ ರೀತಿಯ ವಿಶ್ವಾಸ ಇಲ್ಲದಿದ್ದರೆ ಅಂತಹ ದೃಢವಿಶ್ವಾಸವನ್ನು ಪುನರ್‌ನಿರ್ಮಾಣ ಮಾಡಬೇಕಾದುದು ನಮ್ಮ ಕರ್ತವ್ಯ ತಾನೆ. ಮಾತುಕತೆ ನಡೆಸುವಾಗ ಮತ್ತು ಯಾವುದೇ ಕೆಲಸ ಕಾರ್ಯದಲ್ಲಿ ತೊಡಗಿರುವಾಗ ಅಲ್ಲಾಹನು ನನ್ನನ್ನು ನಿರಂತರ ವೀಕ್ಷಿಸುತ್ತಿದ್ದಾನೆ ಎಂಬ ಪ್ರಜ್ಞೆ ನಮ್ಮಲ್ಲಿ ಮೂಡಿದರೆ ಮಾತ್ರ ನಮ್ಮ ಪುನರ್ ನಿರ್ಮಾಣ ಕಾರ್ಯ ಪೂರ್ಣವಾಗಲು ಸಾಧ್ಯ.

*ಓ ಪ್ರವಾದಿಯೇ, ನೀವು ಯಾವುದೇ ಸ್ಥಿತಿಯಲ್ಲಿದ್ದರೂ ಕುರ್‌ಆನ್ ಪಾರಾಯಣ ಮಾಡುತ್ತಿದ್ದರೂ ಮತ್ತು ನೀವು ಏನನ್ನೂ ಮಾಡುತ್ತಲಿದ್ದರೂ ಆ ವೇಳೆ ನಾವು ನಿಮ್ಮನ್ನು ನೋಡುತ್ತಲಿರುತ್ತೇವೆ. (10:61)*

ವೈಯಕ್ತಿಕ ಜೀವನ ಪುನರ್ ನಿರ್ಮಾಣಗೊಳಿಸಲು ಮೂಲಭೂತವಾಗಿ ಇರಬೇಕಾದ ಉತ್ತೇಜನವನ್ನು ಈ ಸೂಕ್ತ ನೀಡುತ್ತಿದೆ. ಒಮ್ಮೆ ಉಮರ್(ರ) ಮದೀನಾದಿಂದ ಮಕ್ಕಾದೆಡೆಗೆ ಪ್ರಯಾಣಿಸುತ್ತಿದ್ದರು. ದಾರಿ ಮಧ್ಯೆ ಅವರು ವಿಶ್ರಾಂತಿ ಪಡೆಯಲು ಒಂದೆಡೆ ತಂಗಿದರು. ಆ ವೇಳೆ ಆ ದಾರಿಯಾಗಿ ಪುಟ್ಟ ಹುಡುಗನೊಬ್ಬ ಆಡನ್ನು ಅಟ್ಟಿಸಿಕೊಂಡು ಬಂದ. ಪರೀಕ್ಷಿಸಲೋ ಎಂಬಂತೆ ಉಮರ್(ರ) ಆ ಹುಡುಗನೊಡನೆ ''ಒಂದು ಆಡನ್ನು ಕೊಡುವೆಯಾ ?'' ಎಂದು ಕೇಳುತ್ತಾರೆ. ಅದಕ್ಕೆ ಆ ಹುಡುಗ: 'ಒಂದು ಆಡನ್ನು ತಮಗೆ ನೀಡಿದರೆ ನನ್ನ ಯಜಮಾನನೊಡನೆ ನಾನೇನು ಹೇಳಲಿ ?' ಎಂದು ಹೇಳುತ್ತಾನೆ.

ಉಮರ್(ರ) ''ಇಷ್ಟೊಂದು ಆಡುಗಳಲ್ಲಿ ಒಂದು ಕಡಿಮೆಯಾದರೆ ಯಜಮಾನನಿಗೆ ಗೊತ್ತಾಗುವುದಾದರೂ ಹೇಗೆ ? ಒಂದು ವೇಳೆ ಯಜಮಾನ ಕೇಳಿದರೂ ತೋಳ ತಿಂದಿತು ಎಂದು ಹೇಳಿದರೆ ಸಾಲದೆ ?''

ಹುಡುಗ : 'ಹಾಗಾದರೆ ಅಲ್ಲಾಹನೊಡನೆ ನಾನೇನು ಹೇಳಲಿ ?' ಎಂಬ ಹುಡುಗನ ಮಾತಿಗೆ ಉಮರ್(ರ) ಆಶ್ಚರ್ಯಚಕಿತರಾಗುತ್ತಾರೆ. ಅಲ್ಲಾಹನ ಮೇಲಿನ ದೃಢ ವಿಶ್ವಾಸ ಕುರುಬನಾದ ಹುಡುಗನನ್ನು ಹೇಗೆ ಪುನರ್‌ನಿರ್ಮಾಣಗೊಳಿಸಿತು ಎಂಬುದನ್ನು ಒಮ್ಮೆ ಯೋಚಿಸಿ ನೋಡಿರಿ.

**ಕರ್ಮ**

ಇಸ್ಲಾಮಿನ ದೃಷ್ಟಿಕೋನದಲ್ಲಿ ವಿಶ್ವಾಸ ಎಂಬುದು ಮನದಲ್ಲಿ ಮಾತ್ರವಿದ್ದರೆ ಸಾಲದು. ವಿಶ್ವಾಸವು ಮನದಲ್ಲಿ ಬೇರೂರಿ ಅದಕ್ಕನುಸಾರವಾದ ಕರ್ಮಗಳು ಆತನ ಅಂಗಾಂಗಗಳಲ್ಲಿ ತೋರಬೇಕು. ಆದುದರಿಂದಲೆ ಪವಿತ್ರ ಕುರ್‌ಆನಿನ ಹಲವೆಡೆ ವಿಶ್ವಾಸದ ಸಂಬಂಧವಾಗಿ ಹೇಳಿದ ಸ್ಥಳಗಳಲ್ಲೆಲ್ಲಾ ಕರ್ಮಗಳನ್ನೂ ಸೇರಿಸಿ ಹೇಳಲಾಗಿದೆ.

*ವಿಶ್ವಾಸವಿರಿಸಿ ಸತ್ಕರ್ಮಗಳನ್ನು ಮಾಡಿದವರಿಗೆ ಸುವಾರ್ತೆಯನ್ನು ಕೊಡಿರಿ (2:25)(3:57)*

ವಿಶ್ವಾಸವಿದೆ ಎಂದು ಹಕ್ಕು ಸ್ಥಾಪಿಸುತ್ತಾರೆ. ಆದರೆ ಆ ವಿಶ್ವಾಸ ಕರ್ಮಗಳಲ್ಲಿ ಕಾಣುವುದಿಲ್ಲ. ಅಂತಹ ಜನರು ನೈಜ ವಿಶ್ವಾಸಿಗಳಲ್ಲ ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ.

*ನಮ್ಮ ಮತ್ತು ಅವರನ್ನು ಬೇರ್ಪಡಿಸಿ ಅರಿಯಲಿರುವ ಗುರುತು ನಮಾಝ್ ಆಗಿದೆ. ಅದನ್ನು ಉಪೇಕ್ಷಿಸಿದವನು ಕಾಫಿರಾದನು. (ಇಬ್ನುಮಾಜ)*

ಈ ವಿಚಾರಗಳನ್ನು ಮನದಲ್ಲಿಟ್ಟು ಯೋಚಿಸಿ ನೋಡಿದಾಗ ನಮ್ಮ ಕರ್ಮಗಳು ಎಷ್ಟೊಂದು ಜೀವಂತಿಕೆಯನ್ನೊಳಗೊಂಡಿವೆ ಎಂದು ತಿಳಿಯಬಹುದು. ಐದು ಹೊತ್ತಿನ ನಮಾಝನ್ನು ನಾವು ಸರಿಯಾಗಿ ನಿರ್ವಹಿಸದಿದ್ದಲ್ಲಿ ನಾವು ನೈಜ ಮುಸ್ಲಿಮರಾಗಲು ಸಾಧ್ಯವಿಲ್ಲ. ಸುನ್ನತ್ ನಮಾಝ್, ಕುರ್‌ಆನ್ ಪಾರಾಯಣ ಹಾಗು ದಾನಧರ್ಮಗಳು ನಮ್ಮಲ್ಲಿ ಎಷ್ಟರಮಟ್ಟಿಗಿವೆ ಎಂಬುದನ್ನು ನಾವು ಸ್ವತಃ ಪರೀಕ್ಷಿಸಿಕೊಳ್ಳಬೇಕಾಗಿದೆ. ಹೆಚ್ಚೆಚ್ಚು ಆರಾಧನೆಗಳು ಹಾಗು ಇತರ ಜೀವನದ ಶಿಷ್ಟಾಚಾರಗಳನ್ನು ಸರಿಯಾಗಿ ಪಾಲಿಸುತ್ತಾ ಅದನ್ನು ಪುನರ್ ನಿರ್ಮಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

**ಅರಿವು**

ವೈಯಕ್ತಿಕವಾಗಿ ನಮ್ಮನ್ನು ನಾವು ಪುನರ್ ನಿರ್ಮಿಸಲು ನಮಗೆ ಬೇಕಾದುದು ಅರಿವು. ಎಂತಹ ಅರಿವೆಂದರೆ ಜೀವನದ ಗುರಿಯನ್ನು ತಲುಪಲು ಸಹಾಯಕವಾದ ಅರಿವು.

ಕಿಕ್ಕಿರಿದು ತುಂಬಿದ ಬಸ್ಸೊಂದು ಹೊರಟಿದೆ. ಸುಮಾರು ಅರ್ಧ ದಾರಿ ಸವೆಸಿದ ಬಳಿಕ ಬಸ್ ತನ್ನಷ್ಟಕ್ಕೆ ನಿಂತುಬಿಟ್ಟಿತು. ಬಸ್ ಚಾಲನೆಯಾಗುತ್ತಿಲ್ಲ ಎಂದು ಡ್ರೈವರ್ ಹೇಳುತ್ತಾನೆ. ಇದನ್ನು ಕೇಳಿದ ಕೆಲ ಪ್ರಯಾಣಿಕರು ಡ್ರೈವರ್‌ನ ಬಳಿ ಬಂದು ಅದನ್ನು ಮತ್ತೆ ಯಥಾಸ್ಥಿತಿಗೆ ತರುವ ಕುರಿತು ಮಾತುಕತೆ ನಡೆಸತೊಡಗುತ್ತಾರೆ. ಇನ್ನು ಕೆಲವರು ಬಸ್‌ನ ಎಂಜಿನ್ ತೆರೆದು ನೋಡಿ ಏನಾದರು ತೊಂದರೆಗಳು ಕಾಣುತ್ತಿದೆಯೇ ಎಂದು ಪರೀಕ್ಷಿಸುತ್ತಾರೆ. ಆದರೆ ಏನೂ ಪ್ರಯೋಜನವಾಗಲಿಲ್ಲ.

ಇಷ್ಟೆಲ್ಲಾ ಕೋಲಾಹಲಗಳು ಬಸ್ಸಿನ ಸುತ್ತ ನಡೆಯುತ್ತಿರುವಾಗ ಕೆಲವರು ನಿರ್ಲಿಪ್ತರಾಗಿ ಪ್ರೇಕ್ಷಕರಂತೆ ಕುಳಿತುಕೊಂಡಿರುತ್ತಾರೆ. ಉದ್ದೇಶಿತ ಗುರಿಯೆಡೆಗೆ ಬಸ್ ತಲುಪಬೇಕೆಂದು ಅವರಿಗೂ ಆಶೆ ಇದೆ. ಆದರೆ ಬಸ್ ದುರಸ್ತಿಗೊಳಿಸುವ ಕೆಲಸದಲ್ಲಿ ಅವರಾರೂ ಪಾಲ್ಗೊಳ್ಳುತ್ತಿಲ್ಲ.

ನಮ್ಮ ಜೀವನ ಎಂಬ ಬಸ್‌ನ ಸ್ಥಿತಿಯು ಇದೇ ರೀತಿ ಆಗಿದೆ. ಕೆಲವರು ಬಸ್ ರಿಪೇರಿ ಮಾಡಲು ಪ್ರಯತ್ನಿಸುತ್ತಾರೆ. ಆದರೆ ಬಸ್‌ಗೆ ಉಂಟಾದ ದೋಷವೇನೆಂದು ಕಂಡು ಹಿಡಿಯುವ ಮತ್ತು ಅದನ್ನು ದುರಸ್ತಿಗೊಳಿಸುವ ಅರಿವು ಅವರಿಗಿರಲಿಲ್ಲ. ಇನ್ನು ಕೆಲವರು ಅದರ ಗೋಜಿಗೆ ಹೋಗಲಿಲ್ಲ.

ವೈಯಕ್ತಿಕವಾಗಿ ನಮ್ಮ ಕೊರತೆಗಳೇನು ಮತ್ತು ಅದನ್ನು ಸರಿಪಡಿಸುವ ವಿಧಾನಗಳೇನು ಎಂಬುದನ್ನು ನಾವು ತಿಳಿದುಕೊಳ್ಳಲೇ ಬೇಕಾಗುತ್ತದೆ. ಆರಾಧನೆಗಳು, ವ್ಯಕ್ತಿ - ಕುಟುಂಬ - ಸಮಾಜದ ಜೀವನದ ಬಗ್ಗೆ ಸರಿಯಾದ ಅರಿವನ್ನು ಬೆಳೆಸಿಕೊಂಡರೆ ಮಾತ್ರ ಜೀವನವನ್ನು ಸರಿಯಾಗಿಸಲು ಸಾಧ್ಯ. ಆದುದರಿಂದ ನಾವು ಕಲಿಯಬೇಕು ಮತ್ತು ನಮ್ಮ ಅರಿವನ್ನು ಬೆಳೆಸಿಕೊಳ್ಳಬೇಕು. ಪುಸ್ತಕಗಳನ್ನು ಓದುವುದು, ಕ್ಲಾಸುಗಳಲ್ಲಿ ಭಾಗವಹಿಸುವುದು, ಅರಿವುಳ್ಳವರೊಡನೆ ಚರ್ಚೆ ನಡೆಸುವುದೆಲ್ಲಾ ಅದನ್ನು ಗಳಿಸಿಕೊಳ್ಳಲಿರುವ ಮಾರ್ಗವಾಗಿದೆ. ಮುಂದಿನ ದಿನಗಳಲ್ಲಿ ಅದಕ್ಕಿರುವ ಪ್ರಯತ್ನ ನಡೆಯಲಿ.

ನಮ್ಮ ವ್ಯಕ್ತಿತ್ವದ ಪುನರ್‌ನಿರ್ಮಾಣದಲ್ಲಿ ಪ್ರಧಾನ ಪಾತ್ರವಹಿಸುವ ಮತ್ತೊಂದು ವಿಷಯ ಸಹಯೋಗವಾಗಿದೆ. ಅಂದರೆ ಇತರರೊಡನೆ ಸೇರಿಕೊಂಡು ಒಟ್ಟಾಗಿ ಕೆಲಸಕಾರ್ಯ ಮಾಡುವುದು. ಕುಟುಂಬ ಮತ್ತು ಇತರ ಜನರೊಡನೆ ನಮ್ಮ ಸಹಯೋಗ ಹೇಗಿದೆ ಎಂದು ತಿಳಿಯಲು ಎರಡು ಮಾನದಂಡಗಳಿವೆ.

1. ಇತರರಿಗೆ ಒಳಿತನ್ನು ಮಾಡುವುದು.

*ನ್ಯಾಯ ಪಾಲಿಸಲು ಮತ್ತು ಪರೋಪಕಾರ ಮಾಡಲು ಅಲ್ಲಾಹನು ಆಜ್ಞಾಪಿಸುತ್ತಾನೆ.(16:90)*

ಇತರರಿಗೆ ನಮ್ಮ ಸಾಮರ್ಥ್ಯಕ್ಕೂ ಮೀರಿ ಉಪಕಾರವನ್ನು ಮಾಡಲು ನಮಗೆ ಸಾಧ್ಯವಾಗುವುದಾದರೆ ಮತ್ತು ಅಂತಹ ಕಾರ್ಯ ನಮಗೆ ಸಂತೃಪ್ತಿ ನೀಡುತ್ತಿದ್ದರೆ ಅದು ನಮ್ಮ ಸಹಯೋಗವನ್ನು ಉತ್ತಮಗೊಳಿಸುವ ಇಂಧನವಾಗಿದೆ.

2. ಇತರರಿಗೆ ದ್ರೋಹ ಬಗೆಯದಿರುವುದು.

*ನೀನು ಜನರಿಗೆ ಕಿರುಕುಳ ಕೊಡದಿರು (ಮುಸ್ಲಿಮ್)*

ಇದು ನಮ್ಮನ್ನು ಸದಾ ಚಿಂತನೆಗೊಳಪಡಿಸಬೇಕಾದ ವಿಚಾರ. ನಮ್ಮ ಮಾತು ಕೃತಿಯಿಂದ ಯಾರಿಗೂ ಯಾವುದೇ ರೀತಿಯ ಕಿರುಕುಳ ಉಂಟಾಗಲೇಬಾರದು. ಈ ಎರಡು ಮಾನದಂಡಗಳಿಂದ ನಮ್ಮ ಜೀವನವನ್ನು ಅಳೆದು ನೋಡಿದಾಗ ನಮ್ಮ ವ್ಯಕ್ತಿತ್ವದ ಚಿತ್ರಣ ಸಿಗುತ್ತದೆ. ಅದನ್ನು ಪುನರ್‌ನಿರ್ಮಿಸಬೇಕಾದ ಅಗತ್ಯವಿದೆಯೇ ಎಂಬುದನ್ನು ಆಗ ತಿಳಿದುಕೊಳ್ಳಬಹುದಾಗಿದೆ.

ನಮ್ಮ ವ್ಯಕ್ತಿತ್ವದ ಮೌಲ್ಯಮಾಪನ ನಡೆಸುವ ಹಕ್ಕು ಇರುವುದು ನಮ್ಮ ಕುಟುಂಬ, ನೆರೆಯವರು ಮತ್ತು ಸಮಾಜಕ್ಕೆ ಎಂಬುದನ್ನು ಪ್ರವಾದಿ(ಸ) ಸೂಚಿಸಿರುತ್ತಾರೆ.

*ನಿಮ್ಮ ಕುಟುಂಬದವರಿಗೆ ಉತ್ತಮನಾದವನು ನಿಮ್ಮಲ್ಲಿ ಉತ್ತಮನು. (ತ್ವಬ್‌ರಾನಿ). ಅವರ ಪತ್ನಿಯರಿಗೆ*

***ಉತ್ತಮನಾದವನು ನಿಮ್ಮಲ್ಲಿ ಉತ್ತಮರು. (ಇಬ್ನುಮಾಜ). ಯಾರ ಉಪಟಳದಿಂದ ನೆರೆಯವನು ಸುರಕ್ಷಿತನಲ್ಲವೋ ಅವನು ಸ್ವರ್ಗ ಪ್ರವೇಶಿಸಲಾರ. (ಮುಸ್ಲಿಮ್)***

ನಮ್ಮ ಸಹಯೋಗದ ಬಗ್ಗೆ ನಮ್ಮ ಪತಿ/ಪತ್ನಿ, ನೆರೆಮನೆ, ಸಮಾಜದಲ್ಲಿ ಕೇಳಿದರೆ ಅವರ ಪ್ರತಿಕ್ರಿಯೆ ಹೇಗಿರಬಹುದು ? ನಮ್ಮ ವ್ಯಕ್ತಿತ್ವವನ್ನು ಪುನರ್‌ನಿರ್ಮಿಸಲು ಸಮಯವಾಗಿದೆ ಎಂದು ಖಂಡಿತವಾಗಿಯೂ ಆಗ ತಿಳಿದುಕೊಳ್ಳಬಹುದು.

**ಜೀವನದ ಪರಿಶುದ್ಧತೆ**

ಇದರಿಂದ ನಾವು ಬಯಸುವುದು ನಮ್ಮ ಆಂತರಿಕ ಮತ್ತು ಬಾಹ್ಯ ಪರಿಶುದ್ಧತೆಯನ್ನಾಗಿದೆ. ಇಂದಿನ ಜಗತ್ತು ಕಪಟ ಜನರ ಜಗತ್ತು ಎಂದು ಹೇಳುವುದನ್ನು ನಾವು ಕೇಳಿದ್ದೇವೆ. ಒಂದರ್ಥದಲ್ಲಿ ಅದು ಸರಿ. ಜಗತ್ತಿನ ಮುಂದೆ ಗೌರವ, ಸದಾಚಾರ, ಧರ್ಮನಿಷ್ಠೆಯನ್ನು ತೋರುವ ಹಲವರು ವೈಯಕ್ತಿಕ ಜೀವನದಲ್ಲಿ ರಹಸ್ಯವಾಗಿ ಮಾಡುವ ದುಷ್ಕೃತ್ಯವನ್ನು ನಾವು ದಿನನಿತ್ಯಕಾಣುತ್ತಿದ್ದೇವೆ. ಭ್ರಷ್ಟಾಚಾರ, ಲಂಚ, ಗುಪ್ತ ಕಮಿಷನ್, ವಂಚನೆ, ಮಹಿಳೆಗೆ ಕಿರುಕುಳ, ವ್ಯಭಿಚಾರ, ಮದ್ಯ ಸೇವನೆ, ಅಮಲು ಪದಾರ್ಥ, ಮಾಫಿಯಾ ಸಂಬಂಧ ಈ ರೀತಿಯ ಅಧಾರ್ಮಿಕ ವಲಯಗಳಲ್ಲಿ ನಾವು ತಿಳಿದಂತಹ ಹಲವರು ಸ್ವಚ್ಛಂಧ ವಿಹಾರ ನಡೆಸುತ್ತಿದ್ದಾರೆ.

ಅಲ್ಲಾಹನು ಹೇಳುತ್ತಿರುವುದುನ್ನು ಗಮನಿಸಿರಿ:

***ಓ ಪೈಗಂಬರರೇ, ಇವರೊಡನೆ, ಹೇಳಿರಿ, '' ಲಜ್ಜಾಹೀನ ಕಾರ್ಯಗಳು - ಅವು ಪ್ರತ್ಯಕ್ಷವಾದವುಗಳಿರಲಿ ಅಥವಾ ರಹಸ್ಯವಾದವುಗಳಿರಲಿ - ಪಾಪ ಕಾರ್ಯಗಳು, ಸತ್ಯಕ್ಕೆ ವಿರುದ್ಧವಾದ ಅತಿರೇಕಗಳನ್ನು ನನ್ನ ಪ್ರಭು ನಿಷಿದ್ಧಗೊಳಿಸಿರುವನು''(7:33)***

ಒಟ್ಟು ಹೇಳುವುದಾದರೆ ವಿಶ್ವಾಸದಲ್ಲಿ, ಕರ್ಮದಲ್ಲಿ, ಅರಿವಿನಲ್ಲಿ, ಸಹಯೋಗದಲ್ಲಿ, ಜೀವನದ ಪರಿಶುದ್ಧತೆಯಲ್ಲಿ ವ್ಯಕ್ತಿತ್ವದ ಪುನರ್ ನಿರ್ಮಾಣ ಅಗತ್ಯವಿದೆ.

★★★


# SUHANA TRAVELS

SHIFTED TO NEW LOCATION
FIND YOUR ALL TRAVEL REQUIREMENTS UNDER ONE ROOF

**OUR SERVICES:**

- DOMESTIC AND INTERNATIONAL AIR-TICKETING
- VISA STAMPING
- PASSPORT
- EMIGRATION
- RECRUITMENT
- CERTIFICATE ATTESTATOIN

CONTACT ANY ISTHIQDHAM OFFICE IN ALL OVER SAUDI ARABIA

**OUR FREE SERVICES:**

SAUDI AIR-TICKET RE-CONFIRMATION
RE-ENTRY VISA DATE CHECKING

**CONTACT**

**HEAD OFFICE:**
Shop no.25 printing house
2nd floor, behind handloom house
28 D, Police Court Lane,
Fort, Mumbai - 400 001
E-mail: suhanatravel@mail.com
Tel : 0091 22 22692680
Telefax: 0091 22 22692690
Mobile : 091 9820945999

**MANGALORE OFFICE**
No: 5, Ground Floor
Shivali Arcade, Falnir Tower
opp: B.P Petrole Pump, Falnir
Mangalore - 575002
**Tel: 0091 824 2442020. (4lines)**
Telefax: 00918244277690
Mobile: 0091 9448253825
Email:suhanamglr@yahoo.co.in

**FOR OUR WAKALA**



# ಯಡ್ಡಿ-ಬೋಪಯ್ಯ

# ಕಿಲಾಡಿ ಜೋಡಿಯ ಕೊನೆ ಆಟ





ಯಡ್ಡಿ ಬೋಪಯ್ಯ ಕಿಲಾಡಿ ಜೋಡಿಯ ಕೊನೆ ಆಟ

ಇದು ಖಂಡಿತಾ ರಾಜ್ಯಪಾಲ ಭಾರಧ್ವಾಜ್ ಹಾಗೂ ಸಿಎಂ ಯಡ್ಡಿಯ ಮಧ್ಯದ ವೈಯಕ್ತಿಕ ಜಗಳ ಅಲ್ಲ. ಇದು ಕಾಂಗ್ರೆಸ್-ಬಿಜೆಪಿ ನಡುವಿನ ಅಧಿಕಾರಕ್ಕಾಗಿನ ಸೆಣಸಾಟ ಮಾತ್ರ ಅಲ್ಲ.

ಬಿಜೆಪಿಯಂ ಬಾಯಿಬಡುಕರು ಬೀದಿಗಳಲ್ಲಿ ಕಿರುಚಿಕೊಳ್ಳುತ್ತಿರುವಂತೆ ಮೆಜಾರಿಟಿ ಇರುವ ಸರಕಾರವನ್ನೇ ಕೆಡಹುವ ಒಂದೇ ಉದ್ದೇಶ ಇವತ್ತಿನ ರಾಜಕೀಯ ಬೆಳವಣಿಗೆಗಳಲ್ಲಿ ಧ್ವನಿಸುತ್ತಿಲ್ಲ.

ಪ್ರಜಾಪ್ರಭುತ್ವದ ಮೌಲ್ಯ, ಸಂವಿಧಾನದ ಆಶಯಗಳು, ನ್ಯಾಯ-ನೀತಿಗಳ ಪ್ರಶ್ನೆಗಳೆಲ್ಲವೂ ಇವತ್ತು ಮೇಲೆದ್ದು ನಿಂತಿವೆ. ಶಾಸನಸಭೆಯ ಮಹತ್ವವನ್ನು ನಲ್ಲಿ ಜಗಳದ ಲೆವೆಲ್ಲಿಗೆ ಇಳಿಸಿ, ಭಾರತ ಸಂವಿಧಾನದ ಆಶಯಗಳನ್ನೇ ಚಿಂದಿ ಮಾಡಿದ್ದ ಮುಖ್ಯಮಂತ್ರಿ ಯಡ್ಡಿ ಮತ್ತು ಸ್ಪೀಕರ್ ಬೋಪಯ್ಯ ಸ್ವತಃ ಬಿಜೆಪಿ ಪಾರ್ಟಿಗೆ ನಾಚಿಕೆಯಾಗುವಂತೆ ಸುಪ್ರೀಂಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡಿದ್ದಾರೆ.

ವಸ್ತುಸ್ಥಿತಿ ಹೀಗಿದ್ದಾಗಲೂ ಬಿಜೆಪಿಗಳು ಜನಾಂದೋಲನ ನಡೆಸುತ್ತಿದ್ದಾರೆ, ಬೀದಿ ಮೆರವಣಿಗೆ ಮಾಡುತ್ತಿದ್ದಾರೆ. ಹೇಗಾದರೂ ಈ ಬಾರಿ ಯಡ್ಡಿ-ಬೋಪಯ್ಯನವರ ತಲೆ ಉಳಿಸಲೇಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಇದು ಯಡ್ಡಿ ತಾನಾಗೇ ಆಹ್ವಾನಿಸಿಕೊಂಡ ಆಪತ್ತು ಅಷ್ಟೇ.

**ಬೋಪಯ್ಯ ತಪ್ಪುಗಳು**

ಕಳೆದ ಅಕ್ಟೋಬರ್‌ನಲ್ಲಿ ನಡೆದ ವಿಶ್ವಾಸ ಮತ ಯಾಚನೆಯ ಅಧಿವೇಶ ಆರಂಭವಾಗುವ ಕೆಲವೇ ಗಂಟೆಗಳ ಮುನ್ನ ಸ್ಪೀಕರ್ ಬೋಪಯ್ಯ ಬಿಜೆಪಿಯ ಹನ್ನೊಂದು ಹಾಗೂ ಐವರು ಪಕ್ಷೇತರ ಶಾಸಕರನ್ನು ಸದಸ್ಯತ್ವದಿಂದ ಅನರ್ಹಗೊಳಿಸಿದ್ದನ್ನು ಸುಪ್ರೀಂಕೋರ್ಟ್ ಗಂಭೀರವಾದ ಲೋಪ ಎಂದಿದೆ. ಇದಿಷ್ಟೇ ಅಲ್ಲದೆ ಅವತ್ತಿನ



## ಲಿಂಗಾಯತ ಮಠಾಧೀಶರು ಈಗೇನು ಹೇಳುತ್ತಾರೊ?

ನೀವು ನಿಶ್ಚಿಂತೆಯಿಂದ ಅಧಿಕಾರ ನಡೆಸಿ, ಅದೇನು ಬಂದರೂ ನಾವು ನಿಮ್ಮ ಜೊತೆ ಇರುತ್ತೇವೆ ಎಂದಿದ್ದ ರಾಜ್ಯದ ಕೆಲವು ಲಿಂಗಾಯತ ಮಠಾಧೀಶರು ಈಗೇನು ಹೇಳುತ್ತಾರೆ?

ಸುಪ್ರೀಂಕೋರ್ಟ್ ತನ್ನ ತೀರ್ಪಿನಲ್ಲಿ ಮುಖ್ಯಮಂತ್ರಿ ಯಡ್ಡಿ ಹಾಗೂ ಸ್ಪೀಕರ್ ಬೋಪಯ್ಯ ಸಂವಿಧಾನದ ಆಶಯಗಳನ್ನು ತಿರುಚಿದ್ದನ್ನು ಕಟುಮಾತುಗಳಲ್ಲಿ ಖಂಡಿಸಿದೆ. ಆದರೂ ಭಂಡ ಯಡ್ಡಿ ಕೋರ್ಟ್‌ನ ಅಭಿಪ್ರಾಯಕ್ಕೆ ಬೆಲೆ ಕೊಡದಂತೆ ವರ್ತಿಸುತ್ತಿದ್ದಾರೆ. ಈಗಲೂ ಮಠಾಧೀಶರು ಮಡ್ಡಿ ಪರ ನಿಲ್ಲಬಾರದೇಕೆ?

ಏಕೆಂದರೆ ನಮ್ಮ ಮಠಾಧೀಶರಿಗೆ ಈ ನಾಡಿನ ಜನರ ನೆಮ್ಮದಿಗಿಂತ ತನ್ನ ಮಠಗಳಿಗಾಗುತ್ತಿದ್ದ ಲಾಭವೇ ಮುಖ್ಯವಲ್ಲವೇ?

ಅಧಿವೇಶನದಲ್ಲಿ ಎಂಎಲ್‌ಸಿಗಳಾದ ಸೋಮಣ್ಣ, ಭಾರತಿ ಶೆಟ್ಟಿ, ವಿಜಯಶಂಕರ್- ಹೀಗೆ ಸಂಬಂಧಪಡದವರೆಲ್ಲಾ ಒಳನುಗ್ಗಿದ್ದರು. ಅವತ್ತಿನ ಸಿಟಿ ಪೊಲೀಸ್ ಕಮಿಷನರ್ ಶಂಕರ್ ಬಿದರಿಯೂ ವಿರೋಧ ಪಕ್ಷದ ಶಾಸಕರನ್ನು ದೈಹಿಕವಾಗಿ ತಡೆದು ನಿಲ್ಲಿಸಲು ಒಳ ಬಂದಿದ್ದರು. ವಿಶ್ವಾಸಮತ ಯಾಚನೆಯು ಸಾಮಾನ್ಯವಾಗಿ ತಲೆ ಎಣಿಕೆ ಅಥವಾ ಬಜರ್ ಒತ್ತುವಿಕೆ ಅಥವಾ ಸಿಕ್ರೇಟ್ ಬ್ಯಾಲೆಟ್ ಮೂಲಕ ನಡೆಯುತ್ತದೆ. ಆದರೆ ಅವತ್ತು ಸ್ಪೀಕರ್ ಅನುಸರಿಸಿದ ಕ್ರಮ ಪ್ರಶ್ನಾರ್ಹವಾಗಿತ್ತು. ಒಟ್ಟಾರೆ ಹೇಳಬೇಕೆಂದರೆ ಯಡ್ಡಿ ಸರಕಾರಕ್ಕೆ ಅಗತ್ಯವಿದ್ದ ಬಹುಮತವನ್ನು ಕೊಡಿಸಲು ಖುದ್ದು ಸ್ಪೀಕರ್‌ರವರೇ ವೈಯಕ್ತಿಕ ಕಾಳಜಿ ವಹಿಸಿದಂತಿತ್ತು.

ಸುಪ್ರೀಂಕೋರ್ಟ್ ಇದನ್ನೆಲ್ಲಾ ಗಮನಿಸಿದೆ.

ಸ್ಪೀಕರ್‌ರ ಬಿಜೆಪಿ ಪರ ಪಕ್ಷಪಾತ ಅಲ್ಲಿಗೂ ನಿಲ್ಲಲಿಲ್ಲ. ಅವತ್ತಿನ ಅಧಿವೇಶನದಲ್ಲಿ ಗಲಾಟೆ ಮಾಡಿದರೆಂದು ಆರೋಪಿಸಿ ಬಿಜೆಪಿಯ ಅಪ್ಪಚ್ಚು ರಂಜನ್ ಸಮಿತಿಯ ಮೂಲಕ 15 ಮಂದಿ ಬಂಡಾಯ ಶಾಸಕರನ್ನು ಅನರ್ಹಗೊಳಿಸುವ ಹೊಸ ಅಸ್ತ್ರವೊಂದನ್ನು ರೆಡಿ ಮಾಡಿಟ್ಟುಕೊಂಡರು.

ಹೀಗೆ ಆಡಳಿತ ಪಕ್ಷದ ರಕ್ಷಕನಂತೆ ಸ್ಪೀಕರ್ ಒಬ್ಬರು ವರ್ತಿಸಿರುವ ಉದಾಹರಣೆಯು ಭಾರತೀಯ ಪ್ರಜಾಪ್ರಭುತ್ವದ ಇತಿಹಾಸಲ್ಲೇ ಸಿಗುವುದಿಲ್ಲ. ಇಂತಹ ಬೋಪಯ್ಯನವರಲ್ಲಿ ನೈತಿಕತೆ ಎಂಬುದು ಲವಲೇಶವೇನಾದರೂ ಇದ್ದಿದ್ದರೆ ಖಂಡಿತವಾಗಿಯೂ ಅವರು ಸುಪ್ರೀಮ್ ಕೋರ್ಟಿನ ತೀರ್ಪು ಹೊರಬೀಳುತ್ತಿದ್ದಂತೆಯೇ ರಾಜೀನಾಮೆ ನೀಡುತ್ತಿದ್ದರು. ಸದ್ಯಕ್ಕೆ ಅವರು ಹಾಗೆ ಮಾಡುವುದಿಲ್ಲ ಬಿಡಿ.

**ಯಡ್ಡಿಯ ಧಮಕಿ**

ರಾಜ್ಯಪಾಲರ ಶಿಫಾರಸು ಆಧರಿಸಿ ರಾಷ್ಟ್ರಪತಿ ಒಂದು ವೇಳೆ ವಿಧಾನಸಭೆಯನ್ನು ತಾತ್ಕಾಲಿಕವಾಗಿ ಸಸ್ಪೆಂಡ್ ಮಾಡಿದರೆ ತಾನು ತೆರೆದ ಜೀಪಿನಲ್ಲಿ ಓಡಾಡಿ ಜನಾಂದೋಲನ ಮಾಡುವುದಾಗಿ ಯಡ್ಡಿ ಧಮಕಿ ಕೊಟ್ಟಿರುವುದು ಹಾಸ್ಯಾಸ್ಪದ.

ಕಂಠಪೂರ್ತಿ ಭ್ರಷ್ಟಾಚಾರದ ಹಗರಣಗಳು, ಜಾತಿ ರಾಜಕೀಯಗಳು, ಅದಕ್ಷತೆಯೇ ಮೈವೆತ್ತರಿತಿರುವ ಈ ಯಡ್ಡಿ ಲೋಕನಾಯಕರೇನಲ್ಲ. ಯಡ್ಡಿ ಜನಾಂದೋಲನ ಎಂದು ಊರಿಡೀ ಸುತ್ತಿದರೂ ಅವರು ಮಾಡಿರುವ ಸ್ವಜನಪಕ್ಷಪಾತ, ಅಕ್ರಮ ಅವ್ಯವಹಾರ, ಭೂಕಬಳಿಸುವಿಕೆಯ ಪಾಪಗಳು ಮನ್ನಿಸಲ್ಪಡುವುದಿಲ್ಲ. ಈ ಸಂದರ್ಭದಲ್ಲಿ ಕಾಂಗ್ರೆಸ್- ದಳಗಳೇನೂ ಸುಮ್ಮನೆ ಕೂರಲಿಲ್ಲ. ಪರ- ವಿರೋಧವಾಗಿ ಯಾರೇ ಜನಾಂದೋಲನ ನಡೆಸಿದರೂ ಅದರಿಂದ ಜನಸಾಮಾನ್ಯರಿಗೆ ನಯಾ ಪೈಸೆಯ ಉಪಕಾರವಿಲ್ಲ. ಪರ- ವಿರೋಧದ ಯಾತ್ರೆ, ಮೆರವಣಿಗೆಯಿಂದಾಗಿ ದಿನವಿಡೀ ಸಂಕಷ್ಟಕ್ಕೊಳಗಾಗುವುದು ದುಡಿಯುವ ಜನ.

ಯಡ್ಡಿ ಎಂತಹ ಮಳ್ಳನೆಂದರೆ ಈಗ ಅರ್ಹತೆ ಪಡೆದಿರುವ ಶಾಸಕರು ತನ್ನ ಬೆಂಬಲಕ್ಕಿರುವ ಪತ್ರ ತೋರಿಸುತ್ತಿದ್ದಾರೆಯೇ ವಿನಃ ಸುಪ್ರೀಕೋರ್ಟ್ ತನ್ನ ಮುಖಕ್ಕೆ ಮಂಗಳಾರತಿ ಎತ್ತಿದ ಬಗ್ಗೆ ಮಾತೇ ಆಡುತ್ತಿಲ್ಲ. ತನ್ನ ತಲೆದಂಡದ ಸನ್ನಿವೇಶದಲ್ಲೂ ರಾಘವೇಂದ್ರ ಸ್ವಾಮಿ ಮಠ, ವೈಷ್ಣೋದೇವಿ ಮಂದಿರ ಎಂದು ಮಠ ಮಂದಿರಗಳ ಹಿಂದೆ ಓಡಾಡುತ್ತಿರುವುದು ಹಾಸ್ಯಸ್ಪದವಾಗಿ ಕಾಣುತ್ತಿಲ್ಲವೇ?

**ಕುಮಾರಣ್ಣ ಕೊರಗು**

ರಾಜ್ಯದಲ್ಲಿ ಮುಂದೆ ಏನಾದರೂ ಕ್ಷಿಪ್ರ ರಾಜಕೀಯ ಬೆಳವಣಿಗೆ ನಡೆದು ಯಡ್ಡಿಯ ತಲೆ ಉರುಳಿ ಬಿದ್ದರೆ ಅದರ ಕ್ರಿಡಿಟ್ ಕುಮಾರಸ್ವಾಮಿಗೇ ಸೇರಬೇಕು. ಕಳೆದ ಸೆಪ್ಟೆಂಬರ್ -ಅಕ್ಟೋಬರ್‌ನಲ್ಲಿ ಕುಮಾರ ಸ್ವಾಮಿ ಕುದುರಿಸಿದ ಡೀಲ್‌ಗಳೇ ಒಟ್ಟಾರೆಯಾಗಿ ಇವತ್ತಿನ ಬೆಳವಣಿಗೆಗಳಿಗೆ ತಳಹದಿ. ಆಪರೇಷನ್ ಕಮಲ ಹೇಗೋ, ಅದೇ ರೀತಿ ಕುಮಾರಸ್ವಾಮಿ ಆಪರೇಷನ್ನು ಹಣದ ಕೈ ಬದಲಾವಣೆಗಳ ಪರಿಣಾಮವೇ ಆಗಿತ್ತು. ಈಗ ಕುಮಾರಸ್ವಾಮಿ

39ನೇ ಪುಟಕ್ಕೆ

# ಶಿಕ್ಷಣ ಕ್ಷೇತ್ರದಲ್ಲಿ ಬ್ಯಾರಿ ಮಹಿಳೆ

**ಬ್ಯಾರಿ ಸಾಹಿತ್ಯ ಅಕಾಡೆಮಿಯು ಮೇ 15ರಂದು ಬಿ.ಸಿ.ರೋಡಿನಲ್ಲಿ ಹಮ್ಮಿಕೊಂಡಿದ್ದ ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿದ್ದ ನ್ಯಾಶನಲ್ ವುಮನ್ಸ್ ಫ್ರಂಟ್‌ನ ರಾಜ್ಯ ಉಪಾಧ್ಯಕ್ಷೆ ಫಾತಿಮಾ ನಸೀಮಾ 'ಶಿಕ್ಷಣ ಕ್ಷೇತ್ರದಲ್ಲಿ ಬ್ಯಾರಿ ಮಹಿಳೆ' ವಿಷಯದ ಕುರಿತು ಪ್ರಬಂಧ ಮಂಡಿಸಿದರು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ಬ್ಯಾರಿ ಮಹಿಳೆಯರು ಸಾಕಷ್ಟು ಪ್ರಗತಿ ಸಾಧಿಸಿದ್ದು, ಈ ಬಾರಿಯ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಬ್ಯಾರಿ ವಿದ್ಯಾರ್ಥಿನಿಯರು ಅಭೂತಪೂರ್ವ ಸಾಧನೆ ಮೆರೆದಿದ್ದಾರೆ.**

ಶಿಕ್ಷಣ ಕ್ಷೇತ್ರದಲ್ಲಿ ಮುಸ್ಲಿಮ್ ಮಹಿಳೆ ಎಂಬ ವಿಚಾರ ಸದಾ ಸಮುದಾಯದೊಳಗೆ ಚರ್ಚೆಯಾಗುತ್ತಾ ಇರುತ್ತದೆ. ಮುಸ್ಲಿಮ್ ಮಹಿಳೆಯ ಶಿಕ್ಷಣದ ಕುರಿತು ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ಮಾಡುವಾಗ ಅಲ್ಲಿ ನಮಗೆ ಕಾಣಸಿಗುವುದು ತುಂಬಾ ಬೇಸರ ತರಿಸುವ ಅಂಕಿಅಂಶಗಳು. ಜಸ್ಟಿಸ್ ಸಾಚಾರ್ ಸಲ್ಲಿಸಿರುವ ವರದಿಯಲ್ಲಿ ಪ್ರಮುಖವಾಗಿ ಬೊಟ್ಟು ಮಾಡಿರುವುದು ಮುಸ್ಲಿಮ್ ಮಹಿಳೆಯರು ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ ಎಂದಾಗಿತ್ತು. ಈ ಕಾರಣಕ್ಕಾಗಿಯೇ ಇಡೀ ಮುಸ್ಲಿಮ್ ಸಮುದಾಯವೇ ಶಿಕ್ಷಣ ಕ್ಷೇತ್ರದಲ್ಲಿ ತೀರಾ ಹಿಂದುಳಿಯಬೇಕಾಯಿತು. ಶಿಕ್ಷಣದಲ್ಲಿ ಹಿಂದುಳಿದ ಕಾರಣದಿಂದಾಗಿ ಸಮುದಾಯವು ಆರ್ಥಿಕ, ಔದ್ಯೋಗಿಕ ಕ್ಷೇತ್ರದಲ್ಲಿ ತಳಮಟ್ಟಕ್ಕಿಳಿಯುವಂತಾಗಿದೆ. ಇಲ್ಲಿ ಸ್ಪಷ್ಟವಾಗುತ್ತಿದೆ ಏನೆಂದರೆ, ಮಹಿಳೆಯು ಶಿಕ್ಷಣದಲ್ಲಿ ಹಿಂದುಳಿದರೆ ಈ ಮಹಿಳೆ ಪ್ರತಿನಿಧಿಸುವ ಸಮುದಾಯದ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎಂಬುದು.

ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಸಮುದಾಯದ ಬಗ್ಗೆ ಚರ್ಚಿಸುವಾಗ ಈ ಎಲ್ಲ ವಿಚಾರ ಸರಿ ಎಂದು ಕಂಡುಬರುತ್ತದೆ. ಅದೇ ನಮ್ಮ ಊರು, ಪರಿಸರವನ್ನು ನೋಡಿ, ಇಲ್ಲಿ ಮುಸ್ಲಿಮ್ ಮಹಿಳೆ ಎನ್ನುವ ಬದಲು ಬ್ಯಾರಿ ಮಹಿಳೆ ಎಂದು ಗುರುತಿಸುತ್ತೇವೆ. ಅಲ್‌ಹಮ್ದುಲಿಲ್ಲಾಹ್... ನಮ್ಮ ಊರಿನ ಬ್ಯಾರಿ ಮಹಿಳೆ ಇಂದು ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಆರಂಭಿಸಿರುವ ಕಾಲಘಟ್ಟ. ನಾವು ಒಮ್ಮೆಲೆ ಎಮೋಷನ್‌ಗೊಳಗಾಗಿ ಬ್ಯಾರಿ ಮಹಿಳೆಯರು ಸಂಪೂರ್ಣವಾಗಿ ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ್ದಾಳೆ, ಇಲ್ಲಿ ಅಂಥದ್ದೇನೂ ಸಮಸ್ಯೆ ಇಲ್ಲ ಎಂದು ಹೇಳುವಂತಿಲ್ಲ. ಬ್ಯಾರಿ ಮಹಿಳೆಯರು ಪ್ರಾಥಮಿಕ, ಪ್ರೌಢಶಾಲೆ, ಕಾಲೇಜು, ಉನ್ನತ ವ್ಯಾಸಂಗ... ಹೀಗೆ ಒಂದೊಂದೇ ಹಂತಗಳನ್ನು ದಾಟಿಕೊಂಡು ಪ್ರಗತಿಯತ್ತ ಮುನ್ನಡೆಯುತ್ತಿರುವುದನ್ನು ಕಾಣಬಹುದು. ಇವತ್ತು ನಮ್ಮ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ ಎಂಬುದನ್ನು ಪರೀಕ್ಷಿಸಬೇಕೆಂದಿದ್ದರೆ, ಸಂಜೆ ಅಥವಾ ಬೆಳಗ್ಗೆ ಬಸ್‌ಸ್ಟ್ಯಾಂಡ್‌ನ್ನು ನೋಡಿದರೆ ಸಾಕು. ಅಲ್ಲಿ ನಮಗೆ ಹೆಚ್ಚು ಕಾಣಸಿಗುವುದು ಬುರ್ಖಾ ಧರಿಸಿದ ಬ್ಯಾರಿ ಮಹಿಳೆಯರು.

ಒಂದು ವಿಚಾರವನ್ನು ನಾವಿಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕು. ನಾನು ಮೊದಲೇ ತಿಳಿಸಿದಂತೆ ಇದು ಶೈಕ್ಷಣಿಕ ಪ್ರಗತಿಯ ಆರಂಭ ಕಾಲ. ಬ್ಯಾರಿ ಮಹಿಳೆಯರು ಶಾಲೆ-ಕಾಲೇಜುಗಳ

36ನೇ ಪುಟಕ್ಕೆ

## ಏಷಿಯಾದ ಮೊದಲ ಮಹಿಳಾ ಡೀಸೆಲ್ ಎಂಜಿನ್ ಚಾಲಕಿ

# ಮುಮ್ತಾಝ್ ಕಾಝಿಯ ಮಹತ್ಸಾಧನೆ

ಓರ್ವ ಯಶಸ್ವಿ ಪುರುಷನ ಹಿಂದೆ ಓರ್ವಳು ಸ್ತ್ರೀ ಇರುತ್ತಾಳೆ ಎಂಬ ಮಾತು ಪ್ರಚಲಿತದಲ್ಲಿದೆ. ಆದರೆ ಯಶಸ್ವಿ ಮಹಿಳೆಯ ಹಿಂದೆ ಯಾರಿರುತ್ತಾರೆ? ಈಗಿನ ಕಾಲದಲ್ಲಿ ಮಹಿಳೆಯರು ತಮ್ಮ ಕುಟುಂಬ ನಿರ್ವಹಣೆಗೆ ವೃತ್ತಿಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಆದರೆ ಪುರುಷರಂತೆ ಕಠಿಣವಾದ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಮಹಿಳೆಯರು ಅತೀ ವಿರಳ. ಆದರೆ ಇಲ್ಲೋರ್ವ ಮಹಿಳೆ ಕಠಿಣ ವೃತ್ತಿಯನ್ನು ಮಾಡಿಕೊಂಡು ಸಾಧನೆಯ ಉತ್ತುಂಗವನ್ನೇರಿದ್ದಾಳೆ. ಅವಳೇ ಮುಮ್ತಾಝ್ ಕಾಝಿ.



ಡಿಸೇಲ್ ಎಂಜಿನ್ ವಾಹನ ಚಾಲನೆಯಲ್ಲಿ ಮುಮ್ತಾಝ್ ಕಾಝಿ

ಇದೀಗ ಮುಮ್ತಾಝ್ ಕಾಝಿ ಏಷಿಯಾದ ಮೊದಲ ಮಹಿಳಾ ಡೀಸೆಲ್ ಇಂಜಿನ್ ಚಾಲಕಿ ಎಂಬ ಖ್ಯಾತಿಯನ್ನು ತನ್ನ ಮುಡಿಗೇರಿಸಿಕೊಂಡಿದ್ದಾಳೆ. ಇದರೊಂದಿಗೆ ಮುಮ್ತಾಝ್ ಕಾಝಿಯ ಈ ಮಹತ್ಸಾಧನೆಯನ್ನು ಗುರುತಿಸಿಕೊಂಡಿರುವ ಲಿಮ್ಕಾ ದಾಖಲೆ ಪುಸ್ತಕವು ಈಕೆಯ ಹೆಸರು 1995ರಲ್ಲಿ ತನ್ನಲ್ಲಿ ದಾಖಲಿಸಿಕೊಂಡಿದೆ. ಜೊತೆಗೆ ಮೊದಲ ಮಹಿಳಾ ಎಲೆಕ್ಟ್ರಾನಿಕ್ ಮತ್ತು ಡಿಸೇಲ್ ಎಂಜಿನ್ ಚಾಲಕಿ ಎಂಬ ಗರಿಯೂ ಈಕೆಗೆ ಸಂದಿದೆ.

1989ರಲ್ಲಿ ಭಾರತೀಯ ರೈಲ್ವೇ ನೇಮಕಾತಿ ಮಂಡಳಿಯ ಕಾರ್ಯನೀತಿಯಿಂದಾಗಿ ಪರೀಕ್ಷೆ ಬರೆಯಲು ಸೀಟುಗಿಟ್ಟಿಸಿಕೊಂಡ ಮುಮ್ತಾಝ್ ಖಾಝಿ, ಅರ್ಹತಾ ಪರೀಕ್ಷೆಯೊಂದಿಗೆ ಎಲ್ಲಾ ಲಿಖಿತ ಪರೀಕ್ಷೆಯಿಂದ ವೈಯಕ್ತಿಕ ಸಂದರ್ಶನದವರೆಗೂ ಉತ್ತಮ ನಿರ್ವಹಣೆಯನ್ನು ತೋರಿದಳು. ಇದೀಗ ಆಕೆ 20ವರ್ಷಗಳ ಅನುಭವದೊಂದಿಗೆ ವಿಶ್ವದಲ್ಲಿ ಅತಿಹೆಚ್ಚು ಜನಸಾಂದ್ರತೆಯಿರುವ ಮುಂಬೈ ಲೋಕಲ್ ರೈಲ್ವೇಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮುಂಬೈಯಲ್ಲೇ ಜನಿಸಿದ್ದ ಈಕೆ ಅಲ್ಲಿಯೇ ಬೆಳೆದರು. ಮುಮ್ತಾಝ್ ತನ್ನ ಜೀವನದಲ್ಲಿ ಹಲವು ಏಳುಬೀಳುಗಳನ್ನು ಕಂಡಿದ್ದಾಳೆ. ಆದರೆ ತನ್ನ ಕುಟುಂಬಸ್ಥರ ಸಹಕಾರವು ತನ್ನ ಸಾಧನೆಗೆ ಯಾವುದೇ ಅಡ್ಡಿ ಆತಂಕ ಉಂಟುಮಾಡಲಿಲ್ಲ ಎನ್ನುತ್ತಾರೆ ಈಕೆ. ಸೇಟ್ ಆನಂದಿಲಾಲ್ ಪೊಡ್ಡರ್ ಹೈಸ್ಕೂಲ್‌ನಲ್ಲಿ ಎಸ್‌ಎಸ್‌ಸಿಯಾದ ಮುಮ್ತಾಝ್ ಬಳಿಕ ಮೋಟರ್‌ಮ್ಯಾನ್ ವೃತ್ತಿಗೆ ಅರ್ಜಿ ಸಲ್ಲಿಸಿದ್ದಳು. 1991ರಲ್ಲಿ ತನ್ನ ಪ್ಲಸ್‌ಟು ಪರೀಕ್ಷೆ ಪೂರ್ಣಗೊಂಡ ಬಳಿಕ ಈಕೆ ಕೆಲಸಕ್ಕೆ ನೇಮಕವಾದಳು.

ಆದರೆ ಚರ್ಚ್‌ಗೇಟ್ ರೈಲ್ವೇ ಸ್ಟೇಶನ್‌ನಲ್ಲಿ ಟ್ರಂಕ್ ಸುಪರಿಂಟೆಂಡೆಂಟ್ ಆಗಿದ್ದ ಆಕೆಯ ತಂದೆ ಅಲ್ಲಾರಖು ಇಸ್ಮಾಯೀಲ್ ಖತವಾಲಾ, ಮೊದಲು ಡಿಟಿಎಂಎಲ್ (ಡಿಪ್ಲೋಮ ಇನ್ ಮೆಡಿಕಲ್ ಲ್ಯಾಬೊರೇಟರಿ ಟೆಕ್ನಾಲಜಿ) ಕೋರ್ಸ್‌ನ್ನು ಪೂರ್ಣಗೊಳಿಸಲು ಸೂಚಿಸಿದರು.

ರೈಲ್ವೇಯಲ್ಲಿ ಎ.ಐ.ಅಖರ್‌ವಾಲಾಗೆ ಹೆಚ್ಚು ಪರಿಚಯವಿದ್ದವರು, ಸಂಬಂಧಿಕರು ಮತ್ತು ಸ್ನೇಹಿತರು ಮುಮ್ತಾಝ್‌ಳನ್ನು ಕೆಲಸಕ್ಕೆ ಸೇರ್ಪಡೆಗೊಳಿಸುವಂತೆ ಮನದಟ್ಟು ಮಾಡಿದರು. ಕೊನೆಗೆ ಆಕೆಯ ತಂದೆ ಇದಕ್ಕೆ ಸಮ್ಮತಿ ಸೂಚಿಸಿದರು.

ಮುಮ್ತಾಝ್ ಆಕೆಯ ವೃತ್ತಿಯಲ್ಲಿ ಮಾತ್ರ ಯಶಸ್ವಿಯಾಗಿದ್ದಲ್ಲದೇ, ವಿಶಿಷ್ಟ ಭಾರತೀಯ ಮಹಿಳೆ ಎನಿಸಿಕೊಂಡಳು. ಆಕೆ ತನ್ನ ಕುಟುಂಬಕ್ಕೆ ಸಹಾಯಕಿಯಾಗಿ, ಆಧಾರವಾಗಿ ಮತ್ತು ತ್ಯಾಗಮಯಿಯಾದಳು.

> ಸಮಾಜದಲ್ಲಿ ಚಾಲ್ತಿಯಲ್ಲಿರುವ ಹೆಣ್ಣು ಭ್ರೂಣ ಹತ್ಯೆ ಮತ್ತು ಲಿಂಗ ತಾರತಮ್ಯವನ್ನು ಮುಮ್ತಾಝ್ ಕಟುವಾಗಿ ವಿರೋಧಿಸುತ್ತಾರೆ. ಹೆಣ್ಣು ಭ್ರೂಣ ಹತ್ಯೆ ಅಪರಾಧವಾಗಿದೆ. ಹೆಣ್ಣು ಮಗುವಿಗೂ ಜನಿಸಲು ಅವಕಾಶವಿದೆ ಮತ್ತು ಹುಡುಗರಂತೆ ಅವರು ಏನನ್ನು ಇಷ್ಟಪಡುತ್ತಾರೋ, ಅವನ್ನು ಯಾವುದೇ ತಾರತಮ್ಯವಿಲ್ಲದೇ ಕಲಿಯಲು ಬಿಡಬೇಕು. ಜನರು ಇದನ್ನು ಮುಖ್ಯವಾಗಿ ಅರಿತುಕೊಳ್ಳಬೇಕು ಎಂದು ಆಕೆ ಹೇಳುತ್ತಾರೆ.

ಪತ್ರಕರ್ತನೊಬ್ಬ ಮುಮ್ತಾಝ್ ಕಾಝಿ ತನ್ನ ಕುಟುಂಬಕ್ಕೆ ನೀಡಿದ ಕೊಡುಗೆಯ ಬಗ್ಗೆ ಎ.ಐ.ಅಖರ್‌ವಾಲಾನೊಂದಿಗೆ ಸಂದರ್ಶನ ನಡೆಸುತ್ತಿರುತ್ತಾನೆ. ಈ ಸಂದರ್ಭ ''ನಾನು ನನ್ನ ಮಗಳ ಬಗ್ಗೆ ಹೆಮ್ಮೆ ಪಡುತ್ತೇನೆ. ಆಕೆ ಕೇವಲ ತನ್ನ ವೃತ್ತಿಯಲ್ಲಿ ಮಾತ್ರ ಯಶಸ್ವಿಯಾಗಿಲ್ಲ. ಜೊತೆಗೆ ನಮ್ಮ ಕುಟುಂಬದ ಜೀವನವನ್ನೇ ಬದಲಾಯಿಸಿದ್ದಾಳೆ'' ಎಂದರು.

ಎ.ಐ.ಅಖರ್‌ವಾಲಾ ಸಾಧನೆಗೈದ ತನ್ನ ಮಗಳನ್ನು ಪ್ರಶಂಸಿಸುತ್ತಲೇ ಮುಂದುವರಿದರು. ಇದೀಗ ಆಕೆ ಮುಂಬೈಯಲ್ಲೊಂದು ಮನೆಯನ್ನು ಖರೀದಿಸಲು ಸಮರ್ಥಳಾಗಿದ್ದಾಳೆ. ಜೊತೆಗೆ ತನ್ನ ಇಬ್ಬರು ಸಹೋದರರಾದ ಇಮ್ತಿಯಾಝ್ ಮತ್ತು ಫಿರೋಝ್‌ನನ್ನು ವಿದ್ಯಾವಂತರನ್ನಾಗಿ ಮಾಡುವಲ್ಲಿ ಸಫಲಳಾಗಿದ್ದಾಳೆ. ಈಗ ಅವರಿಬ್ಬರು ಎಂಜಿನಿಯರ್‌ಗಳಾಗಿ ಕೆನಡಾದಲ್ಲಿ ನೆಲೆಸಿದ್ದಾರೆ.

ತಂದೆಯಂತೆಯೇ ಅನುಭವ ಹಂಚಿಕೊಂಡ ಮುಮ್ತಾಝ್‌ಳ ಸಹೋದರನಾದ ಫಿರೋಝ್, ''ನನ್ನ ಸಹೋದರಿ ಶ್ರೇಷ್ಠ ಸಾಧನೆ ಮಾಡಿದ್ದಾಳೆ. ನಾವು ಇಂದು ಏನು ಆಗಿದ್ದೇವೆಯೋ ಅದನ್ನು ಆಕೆ ಮಾಡಿದ್ದಾಳೆ'' ಎಂದು ಪ್ರತಿಕ್ರಿಯಿಸುತ್ತಾರೆ.

ಮಹಾರಾಷ್ಟ್ರದ ನಂದೂರ್‌ಬಾರ್ ಜಿಲ್ಲೆಯ ಎಲೆಕ್ಟ್ರಿಕಲ್ ಎಂಜಿನಿಯರ್ ಆಗಿರುವ ಮಸೂದ್ ಕಾಝಿಯನ್ನು ವಿವಾಹವಾಗಿರುವ ಮುಮ್ತಾಜ್, ತೌಸೀಫ್ ಅಹ್ಮದ್(8), ಫತೀನ್ (4) ಎಂಬಿಬ್ಬರು ಮಕ್ಕಳನ್ನು ಪಡೆದಿದ್ದಾರೆ.

ಮುಮ್ತಾಝ್ ಬಗ್ಗೆ ಪ್ರತಿಕ್ರಿಸುವ ಆಕೆ ಹೆಮ್ಮೆಯ ಪತಿ ಮಸೂದ್ ''ಮುಮ್ತಾಝ್ ಪ್ರೀತಿಯ ಗೃಹಿಣಿಯಾಗಿದ್ದಾಳೆ ಮತ್ತು ಜವಾಬ್ದಾರಿಯುತ ತಾಯಿಯಾಗಿದ್ದಾಳೆ. ನಮ್ಮ ಮಕ್ಕಳ ಶುಶ್ರೂಷೆಗಾಗಿ ಆಕೆಗೆ ಬಂದಿದ್ದ ಭಡ್ತಿಯನ್ನು ತ್ಯಾಗ ಮಾಡ ಮಾಡಬೇಕಾಯಿತು. ಆದರೆ ಆಕೆಗೆ ಅಲ್ಲಾಹನು ಒಳ್ಳೆಯ ಪ್ರತಿಫಲ ನೀಡಿದ್ದಾನೆ'' ಎಂದು ಹೇಳುತ್ತಾರೆ.



ಮುಮ್ತಾಝ್ ಕಾಝಿ, ಪತಿ ಮಸೂದ್ ಕಾಝಿ ಮತ್ತು ಮಕ್ಕಳೊಂದಿಗೆ.

ಬಿಬಿಸಿ ಮುಮ್ತಾಝ್‌ಳ ಸಾಧನೆಯ ಬಗ್ಗೆ ಈಗಾಗಲೇ ವಿಶೇಷ ವರದಿಯನ್ನು ಪ್ರಸಾರ ಮಾಡಿದೆ. ಅಲ್ಲದೇ ಹಲವು ಚಾನೆಲ್‌ಗಳು ಮತ್ತು ದಿನಪತ್ರಿಕೆಗಳು ಮಹಿಳಾ ದಿನಾಚರಣೆಯಂದು ಈಕೆಯ ಬಗ್ಗೆ ವಿಶೇಷ ವರದಿಯನ್ನು ಪ್ರಕಟಿಸಿದೆ. ಆದರೂ ''ಮುಮ್ತಾಝ್ ವಿನಯ ಸಂಪನ್ನಳೂ, ಆತ್ಮೀಯ ಗೆಳತಿಯಾಗಿದ್ದಾಳೆ. ಮಾತ್ರವಲ್ಲ ಆಕೆ ಒಳ್ಳೆಯ ಗೆಳತಿಯೊಂದಿಗೆ ಸಹೋದ್ಯೋಗಿಯೂ ಆಗಿದ್ದಾಳೆ'' '' ಎಂದು ಮುಮ್ತಾಝ್‌ಳನ್ನು ಶ್ಲಾಘಿಸುವ ಸೆಂಟ್ರಲ್ ರೈಲ್ವೇಯ ಪ್ರಥಮ ಮಹಿಳಾ ಮಾಸ್ಟರ್ ಆಗಿರುವ ಮಮತಾ ಕುಲಕರ್ಣಿ ಹೇಳುತ್ತಾರೆ. ಮುಮ್ತಾಝ್‌ಳಿಗೆ 'ರೈಲ್ವೇಸ್ ಜನರಲ್ ಮ್ಯಾನೇಜರ್ ಅವಾರ್ಡ್', 'ಡಿವಿಜನ್ ರೈಲ್ವೇ ಮ್ಯಾನೇಜರ್ ಅವಾರ್ಡ್', ಹೀಗೆ ಅನೇಕ ಅವಾರ್ಡ್‌ಗಳು ಈಕೆಗೆ ದೊರೆತಿದ್ದರೂ ಈಕೆ ಭೂಮಿಗೆ ಮಾತ್ರ ಹತ್ತಿರವಾಗಿಯೇ ಇದ್ದಾಳೆ ಎಂದು ಮಮತಾ ಹೇಳುತ್ತಾರೆ.

ಸಮಾಜದಲ್ಲಿ ಚಾಲ್ತಿಯಲ್ಲಿರುವ ಹೆಣ್ಣು ಭ್ರೂಣ ಹತ್ಯೆ ಮತ್ತು ಲಿಂಗ ತಾರತಮ್ಯವನ್ನು ಮುಮ್ತಾಝ್ ಕಟುವಾಗಿ ವಿರೋಧಿಸುತ್ತಾರೆ. ಹೆಣ್ಣು ಭ್ರೂಣ ಹತ್ಯೆ ಅಪರಾಧವಾಗಿದೆ. ಹೆಣ್ಣು ಮಗುವಿಗೂ ಜನಿಸಲು ಅವಕಾಶವಿದೆ ಮತ್ತು ಹುಡುಗರಂತೆ ಅವರು ಏನನ್ನು ಇಷ್ಟಪಡುತ್ತಾರೋ, ಅವನ್ನು ಯಾವುದೇ ತಾರತಮ್ಯವಿಲ್ಲದೇ ಕಲಿಯಲು ಬಿಡಬೇಕು. ಜನರು ಇದನ್ನು ಮುಖ್ಯವಾಗಿ ಅರಿತುಕೊಳ್ಳಬೇಕು ಎಂದು ಆಕೆ ಹೇಳುತ್ತಾರೆ.

''ತನ್ನ ಮಕ್ಕಳ ಬಗ್ಗೆ ಮುಮ್ತಾಝ್ ಏನು ಚಿಂತಿಸಿದ್ದಾರೆ?'' ಅವರಿಗೆ ವಿದ್ಯೆಯನ್ನು ನೀಡುತ್ತಿದ್ದೇನೆ. ಅವರು ಇಹಲೋಕ ಮತ್ತು ಪರ ಲೋಕದಲ್ಲಿ ವಿಜಯಿಗಳಾಗಬೇಕು ಎಂದು ಮುಮ್ತಾಝ್ ವಿವರಿಸುತ್ತಾರೆ.

# ವಿದ್ಯೆಯ ಆಯಸ್ಸು



ಒಬ್ಬಾತ ಇತಿಹಾಸಕಾರನೋರ್ವನೋರ್ವನ ಬಳಿಗೆ ಬಂದು 'ತಮ್ಮ ಪ್ರಾಯ ಎಷ್ಟು ಎಂದು ಕೇಳಿದ? ಅದಕ್ಕೆ ಆ ಇತಿಹಾಸಕಾರ ''ಸುಮಾರು 7-8 ಸಾವಿರ ಆಗಿರಬಹುದು'' ಎಂದು ಪ್ರತಿಕ್ರಿಯಿಸಿದ.

ನಿಮ್ಮ ಮುಖವನ್ನು ನೋಡಿದಾಗ ನಿಮ್ಮ ಪ್ರಾಯ 40 ಆಗಿರಬಹುದೆಂದು ಕಾಣಿಸುತ್ತಿದೆ ಎಂದು ಆತ ಹೇಳಿದ. ನೀವು ಭಾವಿಸಿರುವುದು ಸರಿಯಾಗಿಯೇ ಇದೆ. ಈ ಭೂಮಿಗೆ ಬಂದು ನನಗೆ ಪ್ರಾಯ 40 ಅಷ್ಟೇ ಆಗಿರುತ್ತದೆ. ಆದರೆ ನನ್ನ ವಿದ್ಯೆ ನನ್ನನ್ನು 7-8 ಸಾವಿರ ವರ್ಷಗಳ ಹಿಂದಕ್ಕೆ ಕೊಂಡೊಯ್ದಿದೆ. ಇದರಿಂದಾಗಿ ಆ ಘಟನೆಗಳು ನನಗೆ ಇವತ್ತು ನನ್ನ ಕಣ್ಣ ಮುಂದೆಯೇ ಆಗುತ್ತಿರುವಂತೆ ಭಾಸವಾಗುತ್ತಿದೆ.

ಆಗಿನ ಕಾಲದಲ್ಲಿ ಸಾಮಾನ್ಯ ಜನರು ನೋಡಲು ಸಾಧ್ಯವಾಗದಿದ್ದ ದೊಡ್ಡ ದೊಡ್ಡ ಅರಮನೆಗಳು, ಯುದ್ಧಕ್ಕೆ ತೆರಳಿ ವೀರ ಮರಣವನ್ನಪ್ಪುತ್ತಿದ್ದ ಧೀರ ಯೋಧರು. ಜನಸಾಮಾನ್ಯರ ಜೀವನ ಶೈಲಿ, ಸುಂದರವಾದ ಉದ್ಯಾನವನಗಳು ಕಣ್ಮನ ತಣಿಸುತ್ತಿವೆ. ಹೀಗೆ ಇತಿಹಾಸ ಪುಸ್ತಕದ ಪುಟಗಳನ್ನು ತೆರೆದು ಓದಲು ಪ್ರಾರಂಭಿಸಿದಾಗ ಅದು ತನ್ನ ಕಣ್ಣ ಮುಂದೆಯೇ ಇರುವಂತೆ ಭಾಸವಾಗುತ್ತಿದೆ.

ನಾನು ಎಲ್ಲ ಕಾಲದ ಪ್ರಸಿದ್ಧ ವ್ಯಕ್ತಿಗಳ ಹಾಗೂ ಅವರ ವಿಖ್ಯಾತ ಕೆಲಸಗಳಿಗೆ ಆತ್ಮೀಯನಾಗಿದ್ದಾನೆ. ನಾನು ಎಲ್ಲ ಜಾತಿಗಳ ವಿದ್ವಾಂಸರನ್ನು ಹಾಗೂ ರಾಜರುಗಳ ಬಗ್ಗೆ ಅರಿತುಕೊಂಡಿದ್ದೇನೆ. ಇಂದು ನೀನು ಕಾಣುತ್ತಿರುವ ರೈಲು, ಮೋಟಾರು ವಾಹನಗಳು ಓಡಾಡುತ್ತಿರುವ ನಗರಗಳು, ಅರಣ್ಯಗಳು ಕೂಡ ಜನ ಸಂಚಾರ ವಿಲ್ಲದ ಶ್ಮಶಾನ ಮೌನವಾಗಿದ್ದ ಸ್ಥಳವೇ ಆಗಿದ್ದವು ಎಂಬುದನ್ನು ಕೂಡ ತಾನು ಅರಿತುಕೊಂಡಿದ್ದೇನೆ.

ಹೀಗೆ ಇತಿಹಾಸ ಮತ್ತು ಪ್ರಚಲಿತ ವಿಷಯಗಳ ಬಗ್ಗೆ ಸತತ ಅಧ್ಯಯನ ನಡೆಸುವುದರಿಂದ ಎಲ್ಲವನ್ನೂ ಅರಿತುಕೊಳ್ಳಬಹುದು. ಮಾತ್ರವಲ್ಲ ನಿನ್ನ ಪ್ರಾಯವನ್ನು ಕೂಡ ಹೆಚ್ಚಿಸಿಕೊಳ್ಳಬಹುದು ಎಂದು ಹೇಳಿ ಆ ಇತಿಹಾಸಕಾರ ಅಲ್ಲಿಂದ ಹೊರಟು ಹೋದ.

## ಕ್ವಿಝ್ ಟೈಮ್-8: ಇತಿಹಾಸ, ಸಾಹಿತ್ಯ, ಕಲೆ, ವಿಜ್ಞಾನ, ಕ್ರೀಡಾಲೋಕ

1.1526ರಲ್ಲಿ ಮೊದಲನೆ ಪಾಣಿಪತ್ ಕದನದಲ್ಲಿ ಬಾಬರ್‌ನಿಂದ ಸೋತವರು ಯಾರು?
2.ಚಾಳುಕ್ಯ ವಂಶದ ಸ್ಥಾಪಕ ಯಾರು?
3.ಹೋಮರ್‌ನ ಪ್ರಸಿದ್ಧ ಕೃತಿ ಯಾವುದು?
4.'ಮೈನ್ ಕಾಂಫ್' ಇದು ಯಾವ ರಾಜಕಾರಣಿಯ ಆತ್ಮಕಥನ?
5.ಹೂವುಗಳನ್ನು ಜೋಡಿಸು ವ ಜಪಾನಿ ಕಲೆಗೆ ಯಾವ ಹೆಸರಿದೆ?
6.ಶಿಲ್ಪಿ ಮತ್ತು ವರ್ಣ ಚಿತ್ರಕಾರ ಪಾಬ್ಲೊ ಪಿಕಾಸೊ ಯಾವ ದೇಶಕ್ಕೆ ಸೇರಿದವನು?
7.ರಕ್ತವನ್ನು ಶುದ್ಧೀಕರಿಸುವ ಮಾನವನ ಅಂಗ ಯಾವುದು?
8.ವಿಜ್ಞಾನವನ್ನು ಜನಪ್ರಿಯಗೊಳಿಸಲು 'ಯುನೆಸ್ಕೋ ನೀಡುವ ಬಹುಮಾನ ಯಾವುದು?
9.ಗ್ರಾಂಡ್ ಸ್ಲಾಮ್ ಟೆನಿಸ್ ಟೈಟಲ್ ಗೆದ್ದ ಪ್ರಥಮ ಭಾರತೀಯ ಯಾರು?
10.ಭಾರತದ ಯಾವ ಸ್ಟೇಡಿಯಂಗೆ ಚಿನ್ನಸ್ವಾಮಿಯವರ ಹೆಸರಿಡಲಾಗಿದೆ?

ಉತ್ತರಗಳು: ಪುಟ ಸಂಖ್ಯೆ - 53ರಲ್ಲಿ

### ಅಪ್ಪಣೆ ಪಡೆಯಲು ಬಂದೆ

ಒಬ್ಬಾತ ನೇರವಾಗಿ ಆಫೀಸಿಗೆ ನುಗ್ಗಿದ

ಮ್ಯಾನೇಜರ್: ಅಪ್ಪಣೆಯಿಲ್ಲದೆ ಒಳಗೆ ಪ್ರವೇಶಿಸಬಾರದು ಎಂದು ನಿನಗೆ ತಿಳಿದಿಲ್ಲವೇ?

ಬಂದವ: ನಾನು ನಿಮ್ಮೊಂದಿಗೆ ಅಪ್ಪಣೆ ಪಡೆಯಲೆಂದೇ ಒಳಗೆ ಬಂದೆ ಸಾರ್!

# ಜೇನುನೊಣ ಮತ್ತು ಪಾರಿವಾಳ

ಒಂದು ಕಾಡಿನಲ್ಲಿ ಜೇನುನೊಣವಿತ್ತು. ಒಂದು ದಿನ ಅದು ಕೆರೆಯ ಮೇಲಿನಿಂದ ಹಾರುತ್ತಾ ಸಾಗುತ್ತಿತ್ತು. ಹೀಗೆ ಹೋಗುತ್ತಿರುವಾಗ ಅದು ಆಕಸ್ಮಿಕವಾಗಿ ಕೆರೆಗೆ ಬಿದ್ದು ಬಿಟ್ಟಿತು. ಇದೀಗ ಹಾರಲಾಗದ ಸ್ಥಿತಿಗೆ ಅದು ತಲುಪಿತು. ಅದರ ಸಾವು ನಿಶ್ಚಿತ ಎಂಬಂತಾಗಿತ್ತು.



ಕೆರೆಯ ಸಮೀಪದಲ್ಲಿದ್ದ ಒಂದು ಮರದಲ್ಲಿ ಪಾರಿವಾಳ ಒಂದು ಕುಳಿತುಕೊಂಡಿತ್ತು. ಜೇನುನೊಣವು ನೀರಿನಲ್ಲಿ ಮುಳುಗುತ್ತಿರುವುದನ್ನು ಪಾರಿವಾಳ ನೋಡಿತು. ಹೀಗೆ ಪಾರಿವಾಳ ಮರದಿಂದ ಒಂದು ಎಲೆಯನ್ನು ಕಿತ್ತುಕೊಂಡು ಹೋಗಿ ಜೇನುನೊಣ ಮುಳುಗುತ್ತಿದ್ದ ಸ್ಥಳದಲ್ಲಿ ಹಾಕಿತು.

ಆ ಬಳಿಕ ಜೇಣುನೊಣವು ಮೆಲ್ಲ ಮೆಲ್ಲನೆ ಆ ಎಲೆಹತ್ತಿ ಕುಳಿತುಕೊಂಡಿತು. ಸ್ವಲ್ಪ ಸಮಯದ ಬಳಿಕ ಆ ಜೇನುನೊಣದ ರೆಕ್ಕೆಗಳು ಒಣಗಿದವು. ಜೇಣುನೊಣವು ಪರಿವಾಳವನ್ನು ವಂದಿಸುತ್ತಾ ಅಲ್ಲಿಂದ ಹಾರಿ ಹೋಯಿತು.

ಕೆಲವು ದಿನಗಳ ಬಳಿಕ ಪಾರಿವಾಳಕ್ಕೆ ಸಂಕಟವೊಂದು ಎದುರಾಯಿತು. ಅದು ಮರದ ಕೊಂಬೆಯು ಮೇಲೆ ಮಂಕಾಗಿ ಕುಳಿತುಕೊಂಡಿತ್ತು. ಇದೇ ವೇಳೆ ಅಲ್ಲಿಗೆ ಬಂದ ಬಾಲಕನೊಬ್ಬ ಪಾರಿವಾಳಕ್ಕೆ ಗುರಿಯಿಟ್ಟು ಕಲ್ಲು ಹೊಡೆಯಲು ಸಿದ್ಧನಾಗಿದ್ದ. ಬಾಲಕ ಪಾರಿವಾಳಕ್ಕೆ ಗುರಿಯಿಟ್ಟದ್ದನ್ನು ಜೇನುನೊಣವು ಗಮನಿಸಿತು. ತಕ್ಷಣ ಅದು ಹಾರಿ ಹೋಗಿ ಬಾಲಕನನ್ನು ಕಚ್ಚಿತು. ಆ ಬಾಲಕ ನೋವಿನಿಂದ ಜೋರಾಗಿ ಚೀರಿದ.

ಇದರಿಂದಾಗಿ ಪಾರಿವಾಳವು ಎಚ್ಚೆತ್ತುಕೊಂಡಿತು. ಪಾರಿವಾಳವು ತನ್ನ ಪ್ರಾಣ ಉಳಿಸಿದ ಜೇನುನೊಣಕ್ಕೆ ವಂದಿಸುತ್ತಾ ಅಲ್ಲಿಂದ ಹಾರಿ ಹೋಯಿತು.

ಒಳ್ಳೆಯ ಜನರು ಇನ್ನೊಬ್ಬರ ಹಿತ ಕಾಯುವರು.

## ಸೌರಗಾಳಿ ಸೂರ್ಯನಿಂದ ಬೀಸುವ ಗಾಳಿಯೇ?

ಸೌರಗಾಳಿ ನಿಜವಾಗಿಯೂ ಸೂರ್ಯನಿಂದ ಭೂಮಿಗೆ ಬರುವ ಗಾಳಿಯಲ್ಲ. ಸೂರ್ಯನಿಂದ ಗಾಳಿ ಬೀಸುವುದಿಲ್ಲ. ಪ್ರಕಾಶ ಕಿರಣಗಳಿಲ್ಲದೆ ಸೂರ್ಯನಿಂದ ಇನ್ನೂ ಕೆಲವು ಕಿರಣ, ವಿಕಿರಣ ಗಳು ಭೂಮಿಗೆ ತಲುಪುತ್ತಿದ್ದು, ಈ ವಿದ್ಯುದಯಸ್ಕಾಂತೀಯ ವಿಕಿರಣಕ್ಕೆ ಸೌರಗಾಳಿ ಎನ್ನುತ್ತಾರೆ.



ಸೂರ್ಯನಿಂದ ನಿರಂತರವಾಗಿ ನಮ್ಮೆಡೆಗೆ ವಿದ್ಯುತ್‌ಭರಿತ ಕಣಗಳು ಎರಗುತ್ತಿದ್ದು, ಭೂ ವಾತಾವರಣದ ಉನ್ನತ ಸ್ಥರಗಳಲ್ಲಿ ಅನಿಲಗಳ ಅಣುಗಳನ್ನು ಪ್ರಚೋದಿಸಿ ಸುಂದರವಾದ ಪ್ರಕಾಶಮಾನವಾದ ಚಿತ್ರಣಗಳನ್ನು ಉಂಟು ಮಾಡುತ್ತದೆ. ಇದು ಉತ್ತರ, ದಕ್ಷಿಣಧ್ರುವ ವಲಯಗಳಲ್ಲಿ ಹೆಚ್ಚಾಗಿ ಕಂಡು ಬರುವುದು. ಇವುಗಳನ್ನು ''ಅರೋರ'' ಎನ್ನುತ್ತಾರೆ.

(ಸಂಗ್ರಹ) ಹುದಾ ಫಾತಿಮಾ ಎಚ್.

## ''ಸತ್ಯಾಸತ್ಯ''

ಸತ್ಯಸಾಯಿಗೆ
ಸಾವಾದರೂ-
'ಸತ್ಯ'ಸಾಯಲಾರದು

ದಿನೇ-ದಿನೇ
ಮೇಲೇಳುತ್ತಿದೆ
ಸಾಯಿಯೊಂದಿಗೆ

ಸಾಯಿಯೆಂದರೂ
ಸಾಯದ
'ಅಸತ್ಯದ'
ಸತ್ಯಗಳು

**ಹಸನ್ ಅಡೆಕ್ಕಲ್**

31ನೇ ಪುಟದಿಂದ



ಬ್ಯಾರಿ ಹೆಣ್ಮಕ್ಕಳು ಶಿಕ್ಷಣದಲ್ಲಿ ಪ್ರಗತಿ ಸಾಧಿಸಬೇಕು ಎಂದು ನಾವು ಭಾಷಣ ಬಿಗಿಯುವಾಗ, ಹೇಳಿಕೆ ನೀಡುವಾಗ ನಮಗೂ ಅದರಲ್ಲಿ ಜವಾಬ್ದಾರಿ ಇದೆ ಎಂಬುದನ್ನು ಮರೆಯಬಾರದು. ಬ್ಯಾರಿ ಹೆಣ್ಮಕ್ಕಳು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುವಲ್ಲಿ ಕೇವಲ ಕಲಿಯುವವರ ಪಾತ್ರ ಮಾತ್ರ ಅಲ್ಲ, ಕಲಿಸುವವರ, ಪ್ರೋತ್ಸಾಹ ನೀಡುವವರ ಪಾತ್ರವೂ ಮುಖ್ಯವಾಗಿರುತ್ತದೆ. ಧನ ಸಹಾಯ ಮಾಡುವ ಮೂಲಕವೋ, ಸಂಸ್ಥೆ ನಿರ್ಮಿಸುವ ಮೂಲಕವೋ, ಸ್ಕಾಲರ್‌ಶಿಪ್ ನೀಡುವ ಮೂಲಕವೋ ಬ್ಯಾರಿ ಹೆಣ್ಮಕ್ಕಳ ಶೈಕ್ಷಣಿಕ ಪ್ರಗತಿಗೆ ನೆರವಾದ ಮಾತ್ರಕ್ಕೆ ನಮ್ಮ ಜವಾಬ್ದಾರಿ ಮುಗಿಯುವುದಿಲ್ಲ. ಇದು ನೆರವು ಮಾತ್ರ. ಆದರೆ ಬ್ಯಾರಿ ಹೆಣ್ಮಕ್ಕಳ ಶಿಕ್ಷಣದ ವಿಚಾರದಲ್ಲಿ ನಾವು ಕೇವಲ ನೆರವುಗಳಾಗಿ ಮಾತ್ರ ಇರದೆ ನೆರಳಾಗಿ ಇರಬೇಕು. ಇಂದು ಕ್ಯಾಂಪಸ್‌ಗಳಲ್ಲಿ ಬ್ಯಾರಿ ಹೆಣ್ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆಯೂ ನಮಗೆ ಅರಿವು ಇರಬೇಕು. ಅದು ಸ್ಕಾರ್ಫ್ ಸಮಸ್ಯೆಯೇ ಇರಲಿ, ಕೋಮುವಾದವೇ ಇರಲಿ; ಈ ಎಲ್ಲ ಸಂದರ್ಭದಲ್ಲಿ ಬಲಿಪಶುಗಳಾಗುತ್ತಿರುವುದು ಬ್ಯಾರಿ ಹೆಣ್ಮಕ್ಕಳು ಎಂಬುದನ್ನು ನಾವು ಅರಿತುಕೊಳ್ಳಬೇಕು.

ನಮ್ಮ ಬ್ಯಾರಿ ಹೆಣ್ಣಕ್ಕಳಿಗೆ ಶಿಕ್ಷಣದ ಗುರಿಯನ್ನು ತಿಳಿಸಿಕೊಡಬೇಕಾಗಿದೆ. ವರನ ಕಡೆಯವರ ಡಿಮ್ಯಾಂಡ್ ಇದೆ ಎಂಬ ಕಾರಣಕ್ಕಾಗಿ ಶಿಕ್ಷಣ ಪಡೆಯುತ್ತಾ ಹೋದರೆ ಅದು ಸಮುದಾಯದ ಸಬಲೀಕರಣಕ್ಕೆ ದಾರಿ ಮಾಡಿಕೊಡುವುದಿಲ್ಲ. ಶಿಕ್ಷಣದ ಉದ್ದೇಶ ಈಡೇರಬೇಕು. ಅದು ಈಡೇರಬೇಕಾದರೆ ಶಿಕ್ಷಣ ಪಡೆಯುತ್ತಿರುವ ಬ್ಯಾರಿ ಹೆಣ್ಣಕ್ಕಳ ಗುರಿ, ಉದ್ದೇಶ ಸ್ಪಷ್ಟವಾಗಿರಬೇಕು. ಈ ಸಮುದಾಯದ ಸಬಲೀಕರಣಕ್ಕೆ ಕೊಡುಗೆ ನೀಡುವ ಉತ್ಸಾಹ, ಕಾಳಜಿ, ಗುರಿ ಅವರಲ್ಲಿರಬೇಕು.

ಒಂದು ಹೆಣ್ಣು ಶಿಕ್ಷಣ ಪಡೆದರೆ ಇಡೀ ಕುಟುಂಬವೇ ಶಿಕ್ಷಣ ಪಡೆದಂತೆ ಎಂದು ನಾವು ಕೇಳಿದ್ದೇವೆ. ಅದು ಸತ್ಯವೂ ಕೂಡ. ಒಂದು ಹೆಣ್ಣು ಹಲವು ಕುಟುಂಬಗಳನ್ನು ಆರೋಗ್ಯಕರ ಸುಶಿಕ್ಷಿತರನ್ನಾಗಿಸುವ ಶೈಕ್ಷಣಿಕ ಅವಕಾಶವೂ ಇದೆ. ಅದರ ಬಗ್ಗೆ ನಾವು ಹೆಚ್ಚು ಒತ್ತು ನೀಡಬೇಕು. ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತಿರುವುದೇನೆಂದರೆ, ಬ್ಯಾರಿ ಹೆಣ್ಮಕ್ಕಳು ಡಿಎಡ್, ಬಿಎಡ್ ಶಿಕ್ಷಣ ಪಡೆದು ಶಿಕ್ಷಕಿಯರಾಗಿ ಸೇವೆ ಸಲ್ಲಿಸುವ ಮೂಲಕ ಹಲವು ಕುಟುಂಬಗಳನ್ನು ಸುಶಿಕ್ಷಿತರನ್ನಾಗಿಸಬಹುದು. ಮೊನ್ನೆಯಷ್ಟೇ ಪುತ್ತೂರು ತಾಲೂಕಿನ ಶಿಕ್ಷಣ ಸಂಸ್ಥೆಯೊಂದರಲ್ಲಿ ಅಸಿಸ್ಟೆಂಟ್ ಟೀಚರ್ ಪೋಸ್ಟ್‌ಗೆ ಆಹ್ವಾನಿಸಿದಾಗ ಒಟ್ಟು 17 ಮಂದಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಅದರಲ್ಲಿ 10 ಮಂದಿ ಬ್ಯಾರಿ ಮಹಿಳೆಯರು ಆಗಿದ್ದರು. ನಿಜಕ್ಕೂ ಇದೊಂದು ಉತ್ತಮ ಬೆಳವಣಿಗೆ. ನಾನು ಮೊದಲೇ ಹೇಳಿದಂತೆ ಇದು ಪ್ರಗತಿಯ ಆರಂಭ ಘಟ್ಟವಷ್ಟೇ. ಸಾಧಿಸಬೇಕಾಗಿರುವುದು ಇನ್ನೂ ಇದೆ.

ಬ್ಯಾರಿ ಹೆಣ್ಮಕ್ಕಳು ಶಿಕ್ಷಣದಲ್ಲಿ ಪ್ರಗತಿ ಸಾಧಿಸಬೇಕು ಎಂದು ನಾವು ಭಾಷಣ ಬಿಗಿಯುವಾಗ, ಹೇಳಿಕೆ ನೀಡುವಾಗ ನಮಗೂ ಅದರಲ್ಲಿ ಜವಾಬ್ದಾರಿ ಇದೆ ಎಂಬುದನ್ನು ಮರೆಯಬಾರದು. ಬ್ಯಾರಿ ಹೆಣ್ಮಕ್ಕಳು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುವಲ್ಲಿ ಕೇವಲ ಕಲಿಯುವವರ ಪಾತ್ರ ಮಾತ್ರ ಅಲ್ಲ, ಕಲಿಸುವವರ, ಪ್ರೋತ್ಸಾಹ ನೀಡುವವರ ಪಾತ್ರವೂ ಮುಖ್ಯವಾಗಿರುತ್ತದೆ. ಧನ ಸಹಾಯ ಮಾಡುವ ಮೂಲಕವೋ, ಸಂಸ್ಥೆ ನಿರ್ಮಿಸುವ ಮೂಲಕವೋ, ಸ್ಕಾಲರ್‌ಶಿಪ್ ನೀಡುವ ಮೂಲಕವೋ ಬ್ಯಾರಿ ಹೆಣ್ಮಕ್ಕಳ ಶೈಕ್ಷಣಿಕ ಪ್ರಗತಿಗೆ ನೆರವಾದ ಮಾತ್ರಕ್ಕೆ ನಮ್ಮ ಜವಾಬ್ದಾರಿ ಮುಗಿಯುವುದಿಲ್ಲ. ಇದು ನೆರವು ಮಾತ್ರ. ಆದರೆ ಬ್ಯಾರಿ ಹೆಣ್ಮಕ್ಕಳ ಶಿಕ್ಷಣದ ವಿಚಾರದಲ್ಲಿ ನಾವು ಕೇವಲ ನೆರವುಗಳಾಗಿ ಮಾತ್ರ ಇರದೆ ನೆರಳಾಗಿ ಇರಬೇಕು. ಇಂದು ಕ್ಯಾಂಪಸ್‌ಗಳಲ್ಲಿ ಬ್ಯಾರಿ ಹೆಣ್ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆಯೂ ನಮಗೆ ಅರಿವು ಇರಬೇಕು. ಅದು ಸ್ಕಾರ್ಫ್ ಸಮಸ್ಯೆಯೇ ಇರಲಿ, ಕೋಮುವಾದವೇ ಇರಲಿ; ಈ ಎಲ್ಲ ಸಂದರ್ಭದಲ್ಲಿ ಬಲಿಪಶುಗಳಾಗುತ್ತಿರುವುದು ಬ್ಯಾರಿ ಹೆಣ್ಮಕ್ಕಳು ಎಂಬುದನ್ನು ನಾವು ಅರಿತುಕೊಳ್ಳಬೇಕು. ಯಾವಾಗ ಬ್ಯಾರಿ ಹೆಣ್ಮಕ್ಕಳು ದಾಖಲೆಯ ಸಂಖ್ಯೆಯಲ್ಲಿ ಕಾಲೇಜು ಸೇರಲಾರಂಭಿಸಿದರೋ ಆವಾಗಲೇ ಒಂದಿಲ್ಲೊಂದು ಸಮಸ್ಯೆಗಳು ಸೃಷ್ಟಿಯಾಗ ತೊಡಗಿದವು. ಇದು ಬ್ಯಾರಿ ಹೆಣ್ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ಪ್ರಾರಂಭದ ಘಟ್ಟದಲ್ಲಿ ಉಂಟಾದ ವಿಘ್ನ. ಇದನ್ನು ನಿವಾರಿಸಿಕೊಂಡು ಹೋಗುವಲ್ಲಿ ನಾವು ಸಕ್ರಿಯವಾಗಿ ಪಾತ್ರ ವಹಿಸಿದರೆ ಮಾತ್ರ ಬ್ಯಾರಿ ಹೆಣ್ಮಕ್ಕಳ ಶಿಕ್ಷಣದ ಕುರಿತು ಮಾತನಾಡಲು ನಮಗೆ ನೈತಿಕ ಹಕ್ಕು ಇರುತ್ತದೆ.

ಬ್ಯಾರಿ ಹೆಣ್ಮಕ್ಕಳು ಶೈಕ್ಷಣಿಕವಾಗಿ ಪ್ರಗತಿ ಸಾಧಿಸುವ ಮೂಲಕ ಈ ಸಮುದಾಯವು ಒಂದು ಅತ್ಯುತ್ತಮ ಸಮುದಾಯವಾಗಿ ಮುಂದುವರಿಯಲಿ ಎಂದು ಹಾರೈಸುತ್ತಾ ನನ್ನ ಮಾತುಗಳಿಗೆ ವಿರಾಮವಿಡುತ್ತಿದ್ದೇನೆ.

**ಜೈ ಹಿಂದ್, ಜೈ ಬ್ಯಾರಿ**

# ಪ್ರತಿಭೆಗಳು ನೆರಳು ನೀಡುವ ಹೆಮ್ಮರವಾಗಲಿ

ಫಾತಿಮಾ ನಸ್ರೀನ್
fathimanas09@gmail.com

ಈಗ ಶಿಕ್ಷಣದ ಸೀಸನ್

ಎರಡೂ ಮೂರು ವರ್ಷದ ಹಿಂದಿನ ಒಂದು ಘಟನೆ ನೆನಪಾಗುತ್ತಿದೆ...

ಆಕೆ ಓದಿನಲ್ಲಿ ತುಂಬಾ ಹುಷಾರಿದ್ದಾಳೆ ಎಂದು ನನ್ನ ಸಂಬಂಧಿಕರೆಲ್ಲ ಆಡಿಕೊಳ್ಳುತ್ತಿದ್ದರು. ಎಸ್ಸೆಸ್ಸೆಲ್ಸಿಯಲ್ಲಿ ತುಂಬಾ ಮಾರ್ಕ್ಸು ತೆಗೆದಾಗ ಎಲ್ಲರಿಗೂ ಖುಷಿಯಾಗಿತ್ತು. ಪಾಪದ ಹುಡುಗಿ, ಮನೆಯಲ್ಲಿ ಬಡತನವಿದ್ದರೂ ಸಂಬಂಧಿಕರಲ್ಲೇ ಯಾರಾದರೂ ಉಳ್ಳವರು ಆವಾಗ ಈವಾಗ ಕೊಟ್ಟ ಹಣದಿಂದಲೇ ಆಕೆ ಕಲಿತು ಸುಮಾರು ಮಾರ್ಕ್ಸು ತೆಗೆದಿದ್ದಳು.




ಅವಳು ಸೈನ್ಸ್ ಓದಲಿ, ಕಲಿತು ಡಾಕ್ಟ್ರು ಆಗಲಿ ಎಂದು ಸಂಬಂಧಿಕರೆಲ್ಲರೂ ಪುಕ್ಕಟೆ ಸಜೆಶನ್ ಕೊಡುತ್ತಿದ್ದರು. ಆಕೆ ಇನ್ನೂ ಚಿಕ್ಕ ಹುಡುಗಿ. ಮನೆಯವರು ಏನು ಹೇಳುತ್ತಾರೋ ಆಕೆ ಅದಕ್ಕೆ ತಲೆಯಾಡಿಸುತ್ತಾಳೆ. ಅಷ್ಟೆಲ್ಲ ಕಲಿಸಲು ಹಣ ಇಲ್ಲ, ನೀನು ಮನೆಯಲ್ಲೇ ಇರು ಎಂದರೂ ಆಕೆ ಹಠ ಹಿಡಿಯುವವಳಲ್ಲ. ಆಕೆಯ ಅದೃಷ್ಟವೋ ಏನೋ, ಹೇಗೋ ಸೈನ್ಸ್ ಸೇರಿದಳು. ಪಿಯುಸಿಯಲ್ಲೂ ಆಕೆ ಹಿಂದೆ ಬೀಳಲಿಲ್ಲ. ಚೆನ್ನಾಗಿ ಮಾರ್ಕ್ಸು ತೆಗೆದಳು. ಇನ್ನು ಡಾಕ್ಟ್ರು ಆಗಬೇಕೆಂದರೆ ಈವಾಗಲೇ ನಿರ್ಧಾರ ತೆಗೆದುಕೊಳ್ಳಬೇಕು. ನಿರ್ಧಾರ ತೆಗೆದುಕೊಂಡರೆ ಸಾಕಾಗೋದಿಲ್ಲ, ಹಣ ಕೂಡ ಬೇಕು. ಮುಂದೆ ಎಷ್ಟು ಖರ್ಚಾಗಬಹುದು ಎಂದು ಮನೆಯವರು ಲೆಕ್ಕಹಾಕಿದರು.

ಎಲ್ಲ ಕಲಿತು ಡಾಕ್ಟ್ರು ಆಗುವವರೆಗೆ ಲಕ್ಷ ಲಕ್ಷ ರೂಪಾಯಿ ಬೇಕಾಗಬಹುದು. ಹಾಗೆ ನೋಡಿದರೆ ಇಬ್ಬರು ಮಕ್ಕಳನ್ನು ಮದುವೆ ಮಾಡಿಸಿಬಿಡುವಷ್ಟು ಹಣ ಖರ್ಚು ಮಾಡಬೇಕು!

ಪಿಯುಸಿವರೆಗೆ ಓದಿಸಿದ್ದು ನಮ್ಮ ಹಣದಿಂದಲ್ಲ. ಅವರಿವರು ಅಂತ ನಮ್ಮ ಕಷ್ಟ ನೋಡಿ ಕೊಟ್ಟ ಹಣ. ಅದನ್ನೇ ಮಗಳ ಪಿಯುಸಿ ಶಿಕ್ಷಣಕ್ಕೆ ಬಳಸಿಕೊಂಡರು. ಇನ್ನು ನಮ್ಮ ಮಗಳು ಡಾಕ್ಟ್ರು ಓದಬೇಕು, ಅದಕ್ಕೆ ಲಕ್ಷ ಹಣ ಬೇಕು ಎಂದು ಸಂಬಂಧಿಕರಲ್ಲಿ ಯಾಚಿಸಿದರೆ ಕೊಡಲು ಯಾರು ಸಿದ್ಧರಿದ್ದಾರೆ? ಕೇಳುವುದಾದರೂ ಹೇಗೆ? ಎಂದೆಲ್ಲ ಚಿಂತಿಸಿದ ಹೆತ್ತವರು ಮಗಳ ಓದನ್ನು ಪಿಯುಸಿಗೆ ಕೊನೆಗೊಳಿಸಿದರು.

ಕೆಲವು ದಿನಗಳವರೆಗೆ ಮಾತ್ರ ಈ ವಿಚಾರ ಸಂಬಂಧಿಕರೊಳಗೆ ಚರ್ಚೆಯಾಯಿತು. ಹೀಗೆ ಚರ್ಚೆಯಲ್ಲಿ ಪಾಲ್ಗೊಂಡು ವೀರಾವೇಷದಿಂದ ಮಾತನಾಡಿದವರಾರೂ, ಮುಂದಿನ ವರ್ಷ ನಾನೇ ಖರ್ಚು ಮಾಡಿ ಓದಿಸುತ್ತೇನೆ ಎಂದು ಘೋಷಿಸಲಿಲ್ಲ. ತಿಂಗಳು ಕಳೆಯುವುದರೊಳಗೆ ಆಕೆಯ ಓದಿನ ವಿಚಾರ ಮರೆತೇ ಹೋಯಿತು. ಆಕೆ ಕೂಡ ಹಠ ಹಿಡಿಯಲಿಲ್ಲ. ಮನೆಯ ಪರಿಸ್ಥಿತಿಗೆ ಹೊಂದಿಕೊಂಡು ಮನೆಯವರು ಹೇಳಿದಂತೆ ನಡೆದುಕೊಂಡಳು. ಆದರೆ ಆಕೆಯ ಮನಸ್ಸಿನಲ್ಲಿ ಏನಿತ್ತೋ?! ದೇವನೇ ಬಲ್ಲ.

ಮದುವೆ ವಯಸ್ಸಿಗೆ ಬಂದ ಮಗಳನ್ನು ಎಷ್ಟು ವರ್ಷ ಅಂತ ಮನೆಯಲ್ಲಿರಿಸಿಕೊಳ್ಳೋದು. ತಂದೆ ಚಿಂತೆ ಶುರುವಾಯಿತು. ಮುಂದಿನ ವರ್ಷದಿಂದ ಆಕೆಯ ಮದುವೆಯ ಚರ್ಚೆ ಶುರುವಾಯಿತು. ಒಳ್ಳೆಯ ಕಡೆ ಸಂಬಂಧ ಹುಡುಕುವುದು ನಿಮ್ಮ ಕೆಲಸ, ಏನಾದರೂ ಏರ್ಪಾಡು ಮಾಡೋಣ... ಸಂಬಂಧಿಕರೆಲ್ಲರೂ ನೀಡಿದ ಭರವಸೆಯಿಂದ ಉಲ್ಲಾಸಗೊಂಡ ತಂದೆ, ವರನ ಹುಡುಕಾಟದಲ್ಲಿದ್ದರು.

ಗಲ್ಫ್ ಹುಡುಗ, ಒಳ್ಳೆಯ ಮನೆ ಮತ್ತು ಮನೆತನ. ಶ್ರೀಮಂತ ಕೂಡ. ವರದಕ್ಷಿಣೆ ಹಣ ಏನೂ ಬೇಡವಂತೆ. ಆದರೆ ಹುಡುಗಿಯ ಮೈಮೇಲೆ 30-40 ಪವನ್ ಚಿನ್ನಾಭರಣ ಇರಬೇಕಂತೆ... ಹೀಗೆ ಎಲ್ಲ ವಿವರಗಳನ್ನು ಸಂಬಂಧಿಕರ ಮುಂದೆ ಇರಿಸಿದ ಆಕೆಯ ತಂದೆ, ಅವರ ಉತ್ತರಕ್ಕಾಗಿ ಕಾದುಕುಳಿತರು. ನಾನು ಐದು, ನಾನು ಹತ್ತು ಎಂದು ಎಲ್ಲರೂ ತಮ್ಮ ಪಾಲಿನಿಂದ ಪವನ್ ಚಿನ್ನಾಭರಣ ನೀಡುವುದಾಗಿ ಒಪ್ಪಿಕೊಂಡರು. ಹಾಗೆ ನೋಡಿದಾಗ ಆಕೆಗೆ 50 ಪವನ್ ಚಿನ್ನಾಭರಣ ಆಯಿತು. ''ಅವಳು ತುಂಬಾ ಅದೃಷ್ಟವಂತೆ'' ಎಂದು ಹೆಂಗಸರೆಲ್ಲರೂ ಆಡಿಕೊಂಡರು.

ಹೇಗೂ ಮದುವೆಯಾಯಿತು. ಕೆಲವು ತಿಂಗಳಲ್ಲೇ ಆತ ಗಲ್ಫ್‌ಗೆ ಹೋದ. ಆಕೆ ತನ್ನ 50 ಪವನ್ ಚಿನ್ನವನ್ನು ಗಂಡನ ಮನೆಯ ಕಪಾಟಿನಲ್ಲಿ ಭದ್ರವಾಗಿರಿಸಿದ್ದಳು. ಈಗ ವರ್ಷಗಳು ಕಳೆದಿರಬಹುದು. ಆಕೆ ಅದೆಷ್ಟು ಸಂತೋಷವಾಗಿದ್ದಾಳೆ, ಎಷ್ಟು ಸುಖವಾಗಿದ್ದಾಳೆ ಎಂಬುದು ಆಕೆಗೆ ಮಾತ್ರ ಗೊತ್ತು. ಚಿನ್ನಾಭರಣ, ಮನೆ ನೋಡಿ ಆಕೆಯ ಮನದ ನೋವು- ನಲಿವನ್ನು ಅರಿಯಲು ಸಾಧ್ಯವೇ? ಕಾರಣ, ಅವಳು ಈಗಲೂ ತನ್ನ ಸ್ನೇಹಿತೆಯರೊಂದಿಗೆ ಆಗಾಗ ಫೋನು ಮಾಡಿ ಕೇಳುತ್ತಿರುವುದನ್ನು ನಾನು ಗಮನಿಸಿದ್ದೇನೆ, - ''ಹೇಗಿದೆ ಮೆಡಿಕಲ್ ಕಾಲೇಜು? ಕಷ್ಟ ಇದೆಯಾ? ತುಂಬಾ ಖರ್ಚು ಇದೆಯಾ?''

ಇದು ನಾನು ಆಗಾಗ ನೆನಪಿಸಿಕೊಳ್ಳುವ ಘಟನೆ. ಈಗ ಇದನ್ನು ನೆನಪಿಸಿಕೊಳ್ಳಲು ಕಾರಣ, ನಮ್ಮ ಸಮುದಾಯದಲ್ಲಿ ಹೆಣ್ಮಕ್ಕಳ ಮದುವೆಗೆ ನೀಡುವಷ್ಟು ಕಾಳಜಿ, ಪ್ರಾಶಸ್ತ್ಯವನ್ನು ಆಕೆಯ ಶಿಕ್ಷಣದ ಮೇಲೆ ನೀಡಲಾಗುತ್ತಿದೆಯೇ ಎಂಬ ಸಂದೇಹ ಕಾಡತೊಡಗಿತು. ನೀವೇ ಅಂದಾಜಿಸಿ, ಆಕೆಯ ಮದುವೆಗೆಂದು 50 ಪವನ್ ಚಿನ್ನ ಹೊಂದಿಸಲು ಸಿದ್ಧರಾದವರು, ಆಕೆಯ ಮೆಡಿಕಲ್ ಶಿಕ್ಷಣಕ್ಕೆ ಖರ್ಚು ಮಾಡಲು ಯಾಕೆ ಮುಂದಾಗಲಿಲ್ಲ. ಇನ್ನು ವ್ಯಾವಹಾರಿಕ ದೃಷ್ಟಿಯಿಂದ ನೋಡುವುದಾದರೂ, ಮದುವೆಗೆ ಖರ್ಚು ಮಾಡಿದ ಹಣದ ಕಾಲು ಭಾಗವನ್ನು ಆಕೆಯ ಮೆಡಿಕಲ್ ಶಿಕ್ಷಣಕ್ಕೆ ಖರ್ಚು ಮಾಡಿದ್ದಿದ್ದರೆ ಇಂದು ಆಕೆಯ ಸಮುದಾಯದ ಓರ್ವ ವೈದ್ಯೆಯಾಗಿ ಮೂಡಿಬರುತ್ತಿದ್ದಳು. 50 ಪವನ್ ಚಿನ್ನವನ್ನು ತಾನೇ ಸಂಪಾದಿಸುವಷ್ಟು ಶಕ್ತಳಾಗಿರುತ್ತಿದ್ದಳು. ಆದರೆ ದುರದೃಷ್ಟವಶಾತ್ ಹಲವು ಬಾರಿ ನಮ್ಮ ನಿರ್ಧಾರಗಳು ಸಮುದಾಯದ ಪ್ರತಿಭೆಯನ್ನು ಚಿವುಟಿ ಹಾಕುತ್ತವೆ.

ಈ ಬಾರಿಯ ಎಸ್ಸೆಸ್ಸೆಲ್ಸಿ ಮತ್ತು ಪಿಯು ಪರೀಕ್ಷೆಯಲ್ಲಿ ಸಮುದಾಯದ ಹೆಣ್ಮಕ್ಕಳು ಅತ್ಯುತ್ತಮ ಸಾಧನೆ ಮೆರೆದಿದ್ದಾರೆ. ಫಾತಿಮಾ ರಯೀಸಾ, ಇಸ್ರಾರ್, ಯಾಸ್ಮೀನ್, ನಿಹಾಲ ಮರಿಯಮ್, ಸನಾ ಫಾತಿಮಾ, ಸನಾ ಅಬೂಬಕರ್, ಅಪ್ಸರಿ ಬಾನು, ಝುಲ್ಫಾ ಅಬ್ದುಲ್ ಅಝೀಝ್, ಸುಹಾನಾ ಖಲಂದರಿ, ಖದೀಜಾ ರಫಾ, ಆಬಿದಾ ಬಾನು, ಆಫಿಯಾ, ನವೀದಾ ಹುಸೈನಾ ಸಅದಿ, ಫಾತಿಮಾ ನಝ್ರೀನಾ, ರೈಹಾನಾ ಪಿ.ಬಿ., ಸಾಹಿರಾ, ಝುಹರಾ ಅಖ್ತರ್, ಫಾಯಿಝಾ, ಫಾತಿಮಾ ತಫ್ಸೀರಾ, ಸಲ್ಮಾ ಝೀಬಾ, ಆಫ್ರಿನ್, ಸಮ್ರೀನ್, ಫಾತಿಮಾ ನಸೀಮಾ, ಫಾತಿಮಾ ಮೆವಿಶ್, ಆಯಿಶಾ ಮರ್ವಾ, ಸಫ್ರೀನಾ, ಫಾತಿಮಾ ಸಬೀಬಾ, ಖದೀಜಾ ಕಮರುನ್ನಿಸಾ ಹೆಸರುಗಳು ಅತ್ಯುತ್ತಮ ಅಂಕ ಗಳಿಸಿದವರ ಪಟ್ಟಿಯಲ್ಲಿ ರಾರಾಜಿ ಸುತ್ತಿವೆ. ಇಂತಹ ಅದೆಷ್ಟೋ ಪ್ರತಿಭೆಗಳಿವೆ. ಅವುಗಳ ಹಿಂದೆ ಬಡತನವೂ ಇರಬಹುದು. ಈ ಪ್ರತಿಭೆಗಳು ಸಮುದಾಯಕ್ಕೆ ನೆರಳು ನೀಡುವ ಭವಿಷ್ಯದ ಹೆಮ್ಮರವಾಗಲಿ. ಹೆಮ್ಮರವನ್ನು ಸಲಹಿ ಪೋಷಿಸುವ ಜವಾಬ್ದಾರಿ ನಮ್ಮ ಮೇಲಿದೆ. ಪವನ್ ಚಿನ್ನದ ಮಾರುಕಟ್ಟೆಯಲ್ಲಿ ಈ ಪ್ರತಿಭೆಗಳು ನೆಲೆ ಕಳೆದುಕೊಳ್ಳದಿರಲಿ ಎಂದು ನಾನು ವೈಯಕ್ತಿಕವಾಗಿ ಹಾರೈಸುತ್ತೇನೆ.

29ನೇ ಪುಟದಿಂದ



''ನಾನು ನನ್ನ ಕೈಲಾಗಿದ್ದನ್ನೆಲ್ಲಾ ಮಾಡಿದೆ. ಈಗ ಕಾಂಗ್ರೆಸ್‌ನೋರು ಸರಕಾರ ತೆಗೀಲಿಲ್ಲಾಂದ್ರೆ, ನಾನೇನ್ ಮಾಡ್ಲಿ'' ಎನ್ನುತ್ತಿದ್ದಾರೆ.

ಈ ನಡುವೆ ದೇವೇಗೌಡರ ನಡೆ ಕುತೂಹಲಕಾರಿಯಾಗಿದೆ. ಪ್ರಧಾನಿ ಸಿಂಗರ್‌ರನ್ನು ಭೇಟಿ ಮಾಡಿದ ಗೌಡರು ''ಸುಪ್ರೀಂಕೋರ್ಟ್ ತೀರ್ಪಿಗೆ ಮನ್ನಣೆ ನೀಡುವುದೆಂದರೆ ಸಿಎಂ ಯಡ್ಡಿ ಹಾಗೂ ಸ್ಪೀಕರ್ ಬೋಪಯ್ಯ ರಾಜೀನಾಮೆ ಕೊಡಲೇಬೇಕು. ಆಮೇಲೆ ಬಿಜೆಪಿ ಸರಕಾರ ಹೊಸ ನಾಯಕನನ್ನು ಆರಿಸಿಕೊಂಡು ಮುಂದುವರಿದರೂ ತಪ್ಪೇನಿಲ್ಲ'' ಎಂದಿದ್ದಾರಂತೆ. ವಾಸ್ತವವಾಗಿ ಕಾಂಗ್ರೆಸ್‌ನ ಗುಪ್ತ ಆಸೆಯೂ ಅದೇ ಆಗಿದೆ. ಆದರೆ ಅದನು ಹೇಗೆ ಸಾಧಿಸಬೇಕು ಎಂಬುದೇ ಕಾಂಗ್ರೆಸ್ ಹೈಕಮಾಂಡ್‌ಗೆ ದಾರಿ ಕಾಣದಾಗಿದೆ.

ಕೊನೆಗೂ ಬಿಜೆಪಿಗರು ಯಡ್ಡಿ- ಬೋಪಯ್ಯ ಕಿಲಾಡಿ ಜೋಡಿಯನ್ನು ಉಳಿಸಿಕೊಳ್ಳುವಲ್ಲಿ ತಾತ್ಕಾಲಿಕವಾಗಿ ಯಶಸ್ವಿಯಾಗಿದ್ದಾರೆ. ಆದರೆ ಕೇಂದ್ರದಿಂದ ಬಂದಿರುವ ಸಲಹೆ ಸೂಚನೆಗಳು ರಾಜಕೀಯದಾಟ ಇನ್ನೂ ಕೊನೆಗೊಂಡಿಲ್ಲ ಎಂಬುದರ ಮುನ್ಸೂಚನೆಯಾಗಿದೆ. ಬಿಜೆಪಿಗಳು ಈಗ ಬೀಸುವ ದೊಣ್ಣೆಯಿಂದ ಪಾರಾಗಿರಬಹುದು. ಸ್ಪೀಕರ್ ಬೋಪಯ್ಯರಿಂದ ರಾಜೀನಾಮೆ ಕೊಡಿಸಿದ್ದರೆ ಬಿಜೆಪಿಯ ಮಾನ ತಕ್ಕಮಟ್ಟಿಗೆ ಉಳಿಯುತ್ತಿತ್ತು. ಆದರೆ ಸದ್ಯ ಬಿಜೆಪಿಗೆ ಇರುವ ಭಯ ಏನೆಂದರೆ ಒಂದು ವೇಳೆ ''ಬೋಪಯ್ಯ ರಾಜೀನಾಮೆ ಕೊಟ್ಟರೆ 2010ರ ಅಕ್ಟೋಬರ್‌ನಲ್ಲಿ ಯಡ್ಡಿ ಪಡೆದಿದ್ದ ವಿಶ್ವಾಸಮತ ತಪ್ಪು ಆಗಿ ಬಿಡುತ್ತದೆ. ಆಗ ಯಡ್ಡಿಯೂ ರಾಜೀನಾಮೆ ಕೊಡಬೇಕಾಗಿ ಬರಬಹುದು ಎಂಬುದು.

ಕೃಪೆ:ಲಂಕೇಶ್



# ಅನಸ್ ಬಿನ್ ಮಾಲಿಕ್(ರ)

''ಯಾ ಅಲ್ಲಾಹ್, ನೀನು ಈತನನ್ನು ಸಂಪತ್ತು ಮತ್ತು ಸಂತತಿಯನ್ನು ನೀಡಿ ಅನುಗ್ರಹಿಸು, ಈತನಿಗೆ ಐಶ್ವರ್ಯವನ್ನು ನೀಡು''- ಪ್ರವಾದಿ(ಸ)ರವರ ಪ್ರಾರ್ಥನೆಯಿಂದ.

ಅನಸ್ ಓರ್ವ ಮಗುವಾಗಿದ್ದ ವೇಳೆಗೇ ತಾಯಿ ಗುಮೈಸ ಆತನಿಗೆ ಶಹಾದತ್ ಕಲಿಮಃ ಹೇಳಿಕೊಟ್ಟರು. ಆ ಪುಟ್ಟ ಕಂದನ ಹೃದಯದಲ್ಲಿ ಪ್ರವಾದಿ ಪ್ರೀತಿಯನ್ನು ತುಂಬಿಸಿಟ್ಟರು.

ಪುಣ್ಯಪ್ರವಾದಿ(ಸ) ಇನ್ನೂ ಹಿಜ್ರಾ ಮುಗಿಸಿ ಮದೀನಾ ಬಂದು ತಲುಪಿರಲಿಲ್ಲ. ಪ್ರವಾದಿ(ಸ)ರನ್ನು ಇನ್ನೂ ಪ್ರತ್ಯಕ್ಷವಾಗಿ ನೋಡಿಲ್ಲ. ಆದರೆ ಪ್ರವಾದಿ(ಸ)ರ ಕುರಿತು ಬಹಳಷ್ಟು ಕೇಳಿದ್ದರು. ಈ ರೀತಿ ಅನಸ್ ಎಂಬ ಹುಡುಗನ ಹೃದಯದಲ್ಲಿ ಪ್ರವಾದಿ(ಸ)ರವರ ಕುರಿತು ಪ್ರೀತಿ ತುಂಬಿ ಹರಿದಿತ್ತು.

ಪ್ರವಾದಿ(ಸ)ರನ್ನು ಕಣ್ತುಂಬಾ ನೋಡಲು ಆ ಹುಡುಗನು ಕಾತರಗೊಂಡನು. ಒಂದೋ ಮಕ್ಕಾಗೆ ತೆರಳಿ ನೋಡಬೇಕು, ಇಲ್ಲದಿದ್ದರೆ ಯಸ್ರಿಬ್‌ಗೆ ಬರಬೇಕು. ಅದರ ನಂತರವಷ್ಟೇ ನೋಡಲು ಸಾಧ್ಯ, ಮನಸಂತಸಗೊಳ್ಳಲು ಸಾಧ್ಯ.

ಈ ಸುಪ್ರಭಾತಕ್ಕಾಗಿ ಹೆಚ್ಚೇನೂ ಕಾಯಬೇಕಾಗಿ ಬರಲಿಲ್ಲ. ತನ್ನ ಆಪ್ತಮಿತ್ರ ಅಬೂಬಕರ್(ರ)ರೊಂದಿಗೆ ಯಸ್ರಿಬ ಗುರಿಯಾಗಿಸಿಕೊಂಡು ಪ್ರವಾದಿ(ಸ) ತೆರಳಿದ ಸುದ್ದಿಯು ಯಸ್ರಿಬದ ಸಣ್ಣಪುಟ್ಟ ಮನೆಯನ್ನೂ ಹರ್ಷೋಲ್ಲಾಸದಿಂದ ತುಂಬಿ ತುಳುಕುವಂತೆ ಮಾಡಿತು. ಪ್ರತಿಯೊಬ್ಬರೂ ಕಾತರದಿಂದ ಚಾತಕಪಕ್ಷಿಯಂತೆ ಕಾಯತೊಡಗಿದರು.

ಆ ದಿನ ಬಂದೇ ಬಿಟ್ಟಿತು. ಪ್ರವಾದಿ(ಸ) ಆಪ್ತಗೆಳೆಯನೊಂದಿಗೆ ಯಸ್ರಿಬ ಪ್ರವೇಶಿಸಿದರು. ವಯಸ್ಕರು ಮಕ್ಕಳಾದಿ ಒಂದೆಡೆ ಸೇರಿಕೊಂಡರು. ಪುರುಷರ ದೊಡ್ಡ ಗುಂಪೊಂದು ಈರ್ವರನ್ನು ಬರಮಾಡಿಕೊಳ್ಳಲು ಸಿದ್ಧರಾದರು.

ಯಸ್ರಿಬದ ಹೆಂಗಳೆಯರು ಮರಿಮಕ್ಕಳೊಂದಿಗೆ ಸೇರಿಕೊಂಡು ಮನೆಕಟ್ಟಡಗಳ ಮೇಲೇರಿ ಕುಳಿತಿದ್ದಾರೆ. ಎಲ್ಲರ ನೋಟ ಆಗಮಿಸುವ ಅತಿಥಿಗಳ ಮೇಲಿದೆ.

ಇವರಿಬ್ಬರದಲ್ಲಿ ಪ್ರವಾದಿ(ಸ) ಯಾರಿರಬಹುದು? ಪ್ರವಾದಿ(ಸ) ನೋಡಲು ಕಾತರಿಸುವ ಕಣ್ಣುಗಳೊಂದಿಗೆ ಸ್ವಗತಃದಲ್ಲಿ ನುಡಿದರು.

ಆ ದಿನವನ್ನಂತೂ ನೋಡಲೇಬೇಕಿತ್ತು. ನೂರು ವರ್ಷ ವಯಸ್ಸಿರುವಾಗಲೂ ಕೂಡ ಅನಸ್ ಬಿನ್ ಮಾಲಿಕ್(ರ) ನಿನ್ನೆಯ ಬೆಚ್ಚನೆಯ ಘಟನೆಯಂತೆ ಅದನ್ನು ನೆನಪಿಸಿಕೊಂಡರು.

ಪ್ರವಾದಿ(ಸ) ಮದೀನಾದಲ್ಲಿ ವಾಸಿಸತೊಡಗಿ ಹೆಚ್ಚೇನೂ ದಿನಗಳಾಗಿರಲಿಲ್ಲ. ಮಿಲ್‌ಹಾನ ಮಗಳು ಗುಸೈಮ ತನ್ನ ಪುತ್ರ ಅನಸ್‌ನ ಕೈಹಿಡಿದು ಪ್ರವಾದಿ(ಸ)ರ ಬಳಿಗೆ ಬಂದರು. ಅನಸ್(ರ) ಅವರ ಕೈಗಳ ಮಧ್ಯೆ ಅಸ್ವಸ್ಥನಾಗಿದ್ದರು. ಆತನ ಹಣೆಯ ಮೇಲೆ ಕೂದಲುಗಳು ಹರಿದಾಡಿಕೊಂಡಿತ್ತು. ಪ್ರವಾದಿ(ಸ)ರಿಗೆ ಸಲಾಮ್ ಹೇಳುತ್ತಾ ಅವರು ಹೀಗೆಂದರು;

''ಅಲ್ಲಾಹನ ಪ್ರವಾದಿ ವರ್ಯರೇ, ಅನ್ಸಾರಿ ಸ್ತ್ರೀ ಪುರುಷರೆಲ್ಲರೂ ಉಡುಗೊರೆಗಳೊಂದಿಗೆ ತಮ್ಮನ್ನು ಬಂದು ಕಂಡರು. ಆದರೆ ದುರದೃಷ್ಟವಶಾತ್ ತಮಗೇನಾದರೂ ಉಡುಗೊರೆ ನೀಡಲು ನನ್ನ ಬಳಿ ಈ ಮಗನಲ್ಲದೆ ಬೇರೇನೂ ಇಲ್ಲ. ಈತನನ್ನು ನೀವು ಸ್ವೀಕರಿಸುವಂತಿದ್ದರೆ ತಮಗೆ ಬೇಕಾದ ಎಲ್ಲ ಸೇವೆಗಳನ್ನು ಈತ ಮಾಡಿಕೊಡುವನು''.

ಮುಗ್ಧತೆಯೇ ಮೈಗೂಡಿಸಿಕೊಂಡಂತಿರುವ ಆ ಬಾಲಕನನ್ನು ನೋಡಿದ ಪ್ರವಾದಿ(ಸ) ಅತೀವ ಸಂತಸಗೊಂಡರು. ತನ್ನ ಬಳಿಗೆ ಕರೆದು ಆತನ ತಲೆನೇವರಿಸಿದರು. ಮತ್ತು ತಲೆ ಮತ್ತು ಮುಖದ ಮೇಲೆ ಕರುಣೆಯಿಂದ ಬೆರಳಾಡಿಸಿದರು. ಸಂತಸದಿಂದ ಆತನನ್ನು ಸ್ವೀಕರಿಸಿ ತನ್ನ ಮನೆಗೆ ಕರೆದೊಯ್ದರು.

ಅನಸ್(ರ)ರನ್ನು ಉನೈಸ್ ಎಂದು ಪ್ರೀತಿಯಿಂದ ಕರೆದರು. ಪ್ರವಾದಿ(ಸ)ರಿಗೆ ಸೇವಕನಾಗಿ ಅನಸ್(ರ)ರನ್ನು ಗುಮೈಸ ಕರೆತಂದಾಗ ಆತನಿಗೆ 10 ವರ್ಷ ಪ್ರಾಯವಷ್ಟೇ ಆಗಿತ್ತು. ಪ್ರವಾದಿ(ಸ)ರ ಪ್ರೀತಿ ವಾತ್ಸಲ್ಯದಿಂದ ಅನಸ್(ರ) ಬೆಳೆದರು. ಪರಸ್ಪರವಾದ ಆ ಸ್ನೇಹ ಸಂಬಂಧ ಪ್ರವಾದಿ(ಸ)ರ ಜೀವಾಂತ್ಯದವರೆಗೆ ಮುಂದುವರಿಯಿತು. ಸುದೀರ್ಘವಾದ 10 ವರ್ಷ ಅನಸ್(ರ)ರವರ ಕುರಿತು ಹೇಳುವುದಾದರೆ ಅದು ಅವರ ಆತ್ಮಸಂಸ್ಕರಣೆಯ ಸುವರ್ಣ ಕಾಲವಾಗಿತ್ತು. ಪ್ರವಾದಿ(ಸ)ರ ಸನ್ನಿಧಿಯಲ್ಲಿ ಅನಸ್(ರ) ಬಹಳಷ್ಟು ವಿಚಾರಗಳನ್ನು ಕಂಡು

## ಸಹಾಬಿಗಳೊಂದಿಗೆ...

*ಪ್ರವಾದಿ(ಸ)ರವರ ಅನುಕಂಪದಿಂದ ಕೂಡಿದ ಪ್ರೀತಿಪೂರ್ವಕವಾದ ಉಪದೇಶಗಳು ಅನಸ್(ರ)ರವರ ಹೃದಯವನ್ನು ತುಂಬಿಬಿಟ್ಟಿತು. ಅವುಗಳನ್ನು ಅವರು ತುಂಬಾ ನೆನಪಿಸಿಕೊಳ್ಳುತ್ತಿದ್ದರು.*

*''ಪುಟ್ಟ ಮಗನೇ ಸಾಧ್ಯವಾದಷ್ಟು ನಿನ್ನ ಪ್ರತಿಯೊಂದು ಪ್ರಭಾತ ಮತ್ತು ಪ್ರದೋಷವು ಯಾರಲ್ಲೂ ದ್ವೇಷಕಟ್ಟಿಕೊಳ್ಳುವಂತೆಯೂ, ವಂಚಿಸುವಂತೆಯೂ ಆಗದಿರಲಿ. ಅದುವೇ ನನ್ನ ನಿಜವಾದ ಚರ್ಯೆ. ಯಾರಾದರೂ ನನ್ನ ಚರ್ಚೆಯನ್ನು ಜೀವಂತಿಕೆಯಿಂದ ಖಾಯಂ ಮಾಡಿದರೆ ಆತ ನನ್ನನ್ನು ಇಷ್ಟಪಟ್ಟನು. ಯಾರದರೂ ನನ್ನನ್ನು ಇಷ್ಟಪಟ್ಟರೆ ಸ್ವರ್ಗದಲ್ಲಿ ಆತನು ನನ್ನೊಂದಿಗಿರುವನು''.*

ಕೇಳಿ ಕಲಿತರು. ಪುಣ್ಯ ಪ್ರವಾದಿಯ ಜೀವನದ ಒಳ-ಹೊರ ವಿಚಾರಗಳನ್ನು ಒಂದೇ ಬಾರಿಗೆ ನೋಡಿ ಕಲಿಯಲು ಸಾಧ್ಯವಾಯಿತು. ಅದು ಬೇರೆ ಯಾರಿಗೂ ಸಿಗದ ಸೌಭಾಗ್ಯವಾಗಿತ್ತು !

ಯಾವುದೇ ತಂದೆಯಿಂದ ಲಭಿಸದಷ್ಟು ಅಪಾರವಾದ ಪ್ರೀತಿ-ಅನುಕಂಪ ಮತ್ತು ಉದಾತ್ತವಾದ ಸಂಬಂಧ ಮತ್ತು ನಡೆನುಡಿ ಸ್ವಭಾವಗಳನ್ನು ಪ್ರವಾದಿ(ಸ)ರವರಿಂದ ಅನಸ್(ರ)ರವರಿಗೆ ಅನುಭವಿಸಲು ಸಾಧ್ಯವಾಯಿತು.

ಅಸಾಧಾರಣವಾದ ಈ ಉತ್ಕೃಷ್ಟ ಸ್ವಭಾವವನ್ನು ಸಮೀಪದಿಂದ ತಿಳಿದು ಅನುಭವಿಸಿದ್ದನ್ನು ಭಾವಪರವಶನಾಗಿ ಅನಸ್(ರ)ರವರು ನೆನಪಿಸಿಕೊಳ್ಳುತ್ತಾರೆ. ಮನುಷ್ಯರಲ್ಲೇ ಅತ್ಯಂತ ಉತ್ತಮ ಸ್ವಭಾವಗಳಿರುವ ವ್ಯಕ್ತಿ ಪ್ರವಾದಿ(ಸ).

''ಒಂದು ದಿನ ಪ್ರವಾದಿ(ಸ) ಅದ್ಯಾವುದೋ ಕೆಲಸಕ್ಕಾಗಿ ಕಳುಹಿಸಿದರು. ಆದರೆ ದಾರಿಮಧ್ಯೆ ಮಕ್ಕಳು ಆಟವಾಡುವುದನ್ನು ಕಂಡು ನಾನು ಅವರೊಂದಿಗೆ ಆಟದಲ್ಲಿ ಸೇರಿಕೊಂಡೆ. ಪ್ರವಾದಿ(ಸ) ನನಗೆ ವಹಿಸಿದ್ದ ಕೆಲಸವನ್ನು ನಾನು ಮಾಡಲಿಲ್ಲ. ಹಾಗೆ ನಾನು ಮಕ್ಕಳೊಂದಿಗೆ ಆಟದಲ್ಲಿ ಮುಳುಗಿರಬೇಕಾದರೆ ನನ್ನ ಬೆನ್ನ ಹಿಂದೆ ಅದ್ಯಾರೋ ಬಂದು ನನ್ನ ಬಟ್ಟೆಯನ್ನು ಹಿಡಿದು ಜಗ್ಗಿದಂತೆ ಭಾಸವಾಯಿತು. ಆ ವೇಳೆ ನಾನು ತಿರುಗಿ ನೋಡಿದೆನು. ಆ ವೇಳೆ ಅಲ್ಲಿ ಪ್ರವಾದಿ(ಸ) ಮುಗುಳ್ನಗುತ್ತಾ ನಿಂತಿದ್ದಾರೆ. ಅವರು ಕೇಳಿದರು- 'ಉನೈಸ್, ನಾನು ಹೇಳಿದ ಕೆಲಸದ ಕಡೆ ನೀನು ಹೋಗಿಲ್ಲವೇ?'

ನಾಚಿಕೆಯಿಂದ ನಾನು ಉತ್ತರಿಸಿದೆ : ಇಲ್ಲ ಪ್ರವಾದಿ ವರ್ಯರೇ, ಇದೋ ಈಗ ನಾನು ಆ ಕಡೆ ಹೋಗುತ್ತಿದ್ದೇನೆ.

ಅಲ್ಲಾಹನಾಣೆ, ನಾನು ಪ್ರವಾದಿ(ಸ)ರೊಂದಿಗೆ 10 ವರ್ಷಗಳ ಕಾಲ ಸೇವೆ ಮಾಡಿದೆನು. ಆ ವೇಳೆಯಲ್ಲಿ ಯಾವುದೇ ವಿಚಾರದ ಕುರಿತು ಎಂದೂ 'ನೀನು ಇದನ್ನಾಕೆ ಮಾಡಿದೆ?, ಯಾತಕ್ಕಾಗಿ ನೀನು ಮಾಡಿಲ್ಲ?' ಎಂದು ಅವರು ನನ್ನಲ್ಲಿ ಕೇಳಿದ್ದಿಲ್ಲ.

ಪ್ರವಾದಿ(ಸ)ರವರು ಅನಸ್(ರ)ರನ್ನು ಕರೆಯುತ್ತಿದ್ದುದು ಪ್ರೀತಿಯಿಂದ 'ಉನೈಸ್ (ಪುಟ್ಟ ಮಗನೇ)' ಎಂದಾಗಿತ್ತು.

ಪ್ರವಾದಿ(ಸ)ರವರ ಅನುಕಂಪದಿಂದ ಕೂಡಿದ ಪ್ರೀತಿಪೂರ್ವಕವಾದ ಉಪದೇಶಗಳು ಅನಸ್(ರ)ರವರ ಹೃದಯವನ್ನು ತುಂಬಿಬಿಟ್ಟಿತು. ಅವುಗಳನ್ನು ಅವರು ತುಂಬಾ ನೆನಪಿಸಿಕೊಳ್ಳುತ್ತಿದ್ದರು.

''ಪುಟ್ಟ ಮಗನೇ ಸಾಧ್ಯವಾದಷ್ಟು ನಿನ್ನ ಪ್ರತಿಯೊಂದು ಪ್ರಭಾತ ಮತ್ತು ಪ್ರದೋಷವು ಯಾರಲ್ಲೂ ದ್ವೇಷಕಟ್ಟಿಕೊಳ್ಳುವಂತೆಯೂ, ವಂಚಿಸುವಂತೆಯೂ ಆಗದಿರಲಿ. ಅದುವೇ ನನ್ನ ನಿಜವಾದ ಚರ್ಯೆ. ಯಾರಾದರೂ ನನ್ನ ಚರ್ಚೆಯನ್ನು ಜೀವಂತಿಕೆಯಿಂದ ಖಾಯಂ ಮಾಡಿದರೆ ಆತ ನನ್ನನ್ನು ಇಷ್ಟಪಟ್ಟನು. ಯಾರದರೂ ನನ್ನನ್ನು ಇಷ್ಟಪಟ್ಟರೆ ಸ್ವರ್ಗದಲ್ಲಿ ಆತನು ನನ್ನೊಂದಿಗಿರುವನು''.

''ಪುಟ್ಟ ಮಗನೇ, ನೀನು ಮನೆಯನ್ನು ಪ್ರವೇಶಿಸುವಾಗ ಮನೆಮಂದಿಯೊಂದಿಗೆ ಸಲಾಮ್ ಹೇಳುವಿಯಂತೆ. ಅದು ನಿನಗೂ ಅವರಿಗೂ ಅನುಗ್ರಹವಾಗುವುದು''.

ಪ್ರವಾದಿ(ಸ)ರ ಮರಣದ ನಂತರ ಸುಮಾರು 80 ವರ್ಷಗಳ ಕಾಲ ಅನಸ್(ರ) ಜೀವಿಸಿದರು. ಆ ವೇಳೆಯಲ್ಲೆಲ್ಲಾ ಪ್ರವಾದಿ(ಸ)ರ ನೆನಪಿನಿಂದ ಅವರ ಮನಸ್ಸು ಧನ್ಯವಾಗಿತ್ತು. ಪ್ರವಾದಿ(ಸ)ರವರ ಅಧ್ಯಾಪನಗಳನ್ನು ಮತ್ತು ಚರ್ಯೆಗಳನ್ನು ಕಲಿಯುತ್ತಾ, ಕಲಿಸುತ್ತಾ ಆ ಕಾಲವನ್ನು ಸವೆಸಿದರು.

ಸಹಾಬಿ ಶ್ರೇಷ್ಠರ ಮತ್ತು ಅವರ ಅನುಯಾಯಿಗಳ ಕಾಲದಲ್ಲಿ ಜನರ ಹೃದಯಗಳನ್ನು ಪ್ರವಾದಿ ಸ್ಮರಣೆ ಮತ್ತು ಉತ್ಕೃಷ್ಟವಾದ ಪ್ರವಾದಿ ಪಾಠಗಳಿಂದ ಅವರು ತುಂಬಿದರು. ಆ ಕಾಲದಲ್ಲೆಲ್ಲಾ ಮುಸ್ಲಿಮ್ ಸಮಾಜವು ಅವರ ಹಲವಾರು ಸಂಶಯಗಳನ್ನು ದೂರೀಕರಿಸಿದ್ದು ಮತ್ತು ವಿವರಣೆಯನ್ನು ಕೇಳಿದ್ದು ಹೆಚ್ಚಿನ ವೇಳೆ ಅನಸ್(ರ)ರೊಂದಿಗೇ ಆಗಿತ್ತು. ಪ್ರವಾದಿ(ಸ)ರವರ ಹೌಳ್‌ಗೆ ಸಂಬಂಧಿಸಿದ ಒಂದು ತರ್ಕವು ಅದರಲ್ಲಿ ಪ್ರಸಿದ್ಧವಾದುದು. ಅಂತ್ಯ ದಿನದಂದು ಪ್ರವಾದಿ(ಸ) ಅನುಯಾಯಿಗಳ ದಾಹವನ್ನು ನೀಗಿಸಲು ತನ್ನ ಹೌಳ್‌ನ ಬಳಿ ಪ್ರತ್ಯಕ್ಷಗೊಳ್ಳುವರು ಎಂಬ ವಿಚಾರದಲ್ಲಿ ಕೆಲವರಿಗೆ ಸಂಶಯವುಂಟಾಯಿತು. ಇದರ ಕುರಿತು ಅನಸ್(ರ) ಹೇಳುತ್ತಾರೆ;

## ಸಹಾಬಿಗಳೊಂದಿಗೆ...

*ಮರಣಾಸನ್ನನಾಗಿ ರೋಗ ಶಯ್ಯೆಯಲ್ಲಿ ಮಲಗಿರುವಾಗ ಅನಸ್‌ಬಿನ್ ಮಾಲಿಕ್(ರ) ಮನೆಮಂದಿಯೊಂದಿಗೆ ಈ ರೀತಿ ಹೇಳಿದರು;*

*''ನೀವು ನನಗೆ ಕಲಿಮಃ ಹೇಳಿಕೊಡಿ''.*

*ಈ ರೀತಿ ಕೊನೆಯುಸಿರಿನ ವರೆಗೂ ಅವರು ಆ ವಾಕ್ಯವನ್ನು ಪುನರಾವರ್ತಿಸುತ್ತಿದ್ದರು. - ''ಲಾ ಇಲಾಹ ಇಲ್ಲಲ್ಲಾಹ್, ಮುಹಮ್ಮದುರ್‍ರಸೂಲುಲ್ಲಾಹ್''.*

''ಆ ಹೌಳಿನ ವಿಚಾರದಲ್ಲಿ ಸಂಶಯಿಸುವ ನಿಮ್ಮಂಥ ಮಂದಿಯನ್ನು ಕಾಣುವಷ್ಟು ದೀರ್ಘ ಕಾಲ ಜೀವಿಸಬೇಕಾಗಿ ಬರಬಹುದು ಎಂದು ನಾನು ಭಾವಿಸಿರಲಿಲ್ಲ. ಪುಣ್ಯಪ್ರವಾದಿ(ಸ) ಹೌಳಿನಿಂದ ದಾಹವನ್ನು ತಣಿಸಲು ತೌಫೀಕ್ ನೀಡೆಂದು ಪ್ರಾರ್ಥಿಸುತ್ತಾ ನಮಾಝ್ ಪೂರ್ತಿಗೊಳಿಸುತ್ತಿದ್ದ ಪ್ರವಾದಿ(ಸ)ರ ಪತ್ನಿಯ ಕಾಲವನ್ನೂ ನಾನು ನೋಡಿದೆನು''.

ತನ್ನ ಸುದೀರ್ಘ ಬದುಕಿನುದ್ದಕ್ಕೂ ಅನಸ್(ರ) ಪ್ರವಾದಿ(ಸ)ವರ ನೆನಪಿನಲ್ಲೇ ಕಳೆದರು. ಪ್ರವಾದಿ(ಸ)ಯನ್ನು ತನ್ನ ಜೀವನದಲ್ಲಿ ಮೊದಲ ಬಾರಿ ಕಂಡಾಗ ಅವರಿಗುಂಟಾದ ಆಹ್ಲಾದ ವರ್ಣನಾತೀತವಾಗಿತ್ತು. ಪ್ರವಾದಿ(ಸ) ಈ ಲೋಕಕ್ಕೆ ವಿದಾಯ ಹೇಳಿದಾಗ ಹೃದಯ ಭಾರದಿಂದ ದುಃಖಿಸಿ ಮೂಕರಾಗಿಬಿಟ್ಟಿದ್ದರು.

ಮಾತು ಮತ್ತು ಕೃತಿಯಲ್ಲೆರಡರಲ್ಲೂ ಪ್ರವಾದಿ(ಸ)ರನ್ನು ಅನುಭವಿಸಲು ಅವರು ಅತ್ಯಂತ ಆಸಕ್ತಿಯನ್ನು ತೋರಿದರು. ಪ್ರವಾದಿ(ಸ) ಇಷ್ಟಪಟ್ಟದ್ದನ್ನೆಲ್ಲವನ್ನು ಅವರೂ ಇಷ್ಟಪಟ್ಟರು. ಪ್ರವಾದಿ(ಸ) ಮೆಚ್ಚದ ಯಾವುದನ್ನೂ ಅವರು ಮೆಚ್ಚಲಿಲ್ಲ. ಅನಸ್(ರ) ಅತ್ಯಂತ ಹೆಚ್ಚು ನೆನಪಿಸಿಕೊಳ್ಳುತ್ತಿದ್ದುದು ಎರಡು ವಿಚಾರಗಳನ್ನು. ಒಂದನೆಯದಾಗಿ ಪ್ರವಾದಿ(ಸ)ರನ್ನು ಭೇಟಿಯಾದ ಬದುಕಿನ ಮೊದಲನೆ ದಿನ. ಇನ್ನೊಂದು ಎಂದೆಂದಿಗೂ ವಿದಾಯ ಹೇಳಿದ ಪ್ರವಾದಿ(ಸ)ರವರ ನಿಧನದ ದಿನ.

ಪ್ರವಾದಿ(ಸ)ರನ್ನು ಕಂಡ ಆ ಮೊದಲ ದಿನಗಳ ಕುರಿತು ನೆನಪಿಸಿಕೊಳ್ಳುವಾಗ ಸುಗಂಧವನ್ನು ಅನುಭವಿಸುವಂತೆ ಅನಸ್(ರ) ಆಹ್ಲಾದಿತರಾಗುತ್ತಾರೆ. ಎರಡನೆಯ ಘಟನೆಯನ್ನು ನೆನಪಿಸಿಕೊಳ್ಳುವಾಗ ಸಣ್ಣಮಕ್ಕಳಂತೆ ಬಿಕ್ಕಿ ಬಿಕ್ಕಿ ಅಳುವರು. ಅದನ್ನು ನೋಡಿ ಪಕ್ಕದಲ್ಲಿರುವವರೆಲ್ಲರೂ ಅಳು ಪ್ರಾರಂಭಿಸುವರು. ಅವರು ಹೆಚ್ಚಿನ ವೇಳೆ ಈ ರೀತಿ ಹೇಳುತ್ತಿದ್ದರು;

''ಪ್ರವಾದಿ(ಸ) ಮೊತ್ತಮೊದಲು ನಮ್ಮೂರಿಗೆ ಆಗಮಿಸಿದ್ದನ್ನು ನಾನು ಕಂಡೆನು. ಪುಣ್ಯ ನೆಬಿಯನ್ನು ಅಲ್ಲಾಹನು ಹಿಂದೆ ಕರೆಯಿಸಿಕೊಂಡಿದ್ದನ್ನೂ ಕಂಡೆನು. ಇವರೆಡರಷ್ಟು ಸಾಮ್ಯತೆಯಿರುವ ಬೇರೆ ದಿನಗಳು ನನ್ನ ಜೀವನದಲ್ಲಿ ಉಂಟಾಗಿಲ್ಲ''.

''ಮದೀನಾಗೆ ಪ್ರವೇಶಿಸಿದ ದಿನದಂದು ಅಲ್ಲಿ ಪ್ರಕಾಶವುಂಟಾಯಿತು. ಅಲ್ಲಾಹನ ಸನ್ನಿಧಿಗೆ ಮರಳಿದ ದಿನವಂತೂ ಮದೀನವಿಡೀ ಇರುಳಾಯಿತು.''

''ನಾನು ಪುಣ್ಯ ನೆಬಿಯನ್ನು ಕೊನೆಯದಾಗಿ ನೋಡಿದ ದಿನ. ಅದನ್ನು ನೆನಪಿಸಿಕೊಳ್ಳಲಾಗದು. ಅಂದು ಸೋಮವಾರವಾಗಿತ್ತು. ಪ್ರವಾದಿ(ಸ)ರ ಕೋಣೆಯ ತೆರೆಯನ್ನು ತೆರೆದಿಡಲಾಗಿತ್ತು. ಮುಸ್‌ಹಫ್‌ನ ಒಂದು ತಾಳೆಯಂತೆ ಅವರ ಮುಖವು ಕಾಣುತ್ತಿತ್ತು. ಜನರೆಲ್ಲರೂ ಅಬೂಬಕರ್(ರ)ರವರ ಹಿಂದೆ ಗುಂಪು ಸೇರಿಕೊಂಡಿದ್ದಾರೆ. ಅವರೆಲ್ಲರೂ ಆತಂಕದಿಂದ ಪ್ರವಾದಿ(ಸ)ರನ್ನು ನೋಡುತ್ತಿದ್ದಾರೆ. ಎಲ್ಲರೂ ಬಿಕ್ಕಿ ಬಿಕ್ಕಿ ಅಳುತ್ತಿದ್ದಾರೆ. ಆದರೆ ತಾಳ್ಮೆ ವಹಿಸಲು ಅಬೂಬಕರ್(ರ) ಅವರೊಂದಿಗೆ ಸನ್ನೆ ಮಾಡುತ್ತಿದ್ದಾರೆ.''

''ಆದರೆ ಆ ಅವಸ್ಥೆ ಇನ್ನೂ ಮುಂದುವರಿಯಲಿಲ್ಲ. ಸಂಜೆಯ ವೇಳೆ ಪ್ರವಾದಿ(ಸ) ತನ್ನ ಒಡೆಯನ ಕರೆಗೆ ಓಗೊಟ್ಟು ವಿದಾಯ ಯಾತ್ರೆಗೈದರು. ನಿಧನಗೊಂಡ ಪ್ರವಾದಿ(ಸ)ರ ಮಲಗಿದ ದೃಶ್ಯವನ್ನು ನೋಡಬೇಕಿತ್ತು. ಅನಂತರ ದಫನ ಮಾಡುವ ವೇಳೆ ಖಬರ್ ಮೇಲೆ ಮಣ್ಣುಸೇರಿಸುವ ದೃಶ್ಯವು ಹೃದಯ ಒಡೆದು ಹೋಗುವಂತೆ ಇತ್ತು''.

ಹಲವಾರು ಬಾರಿ ಅನಸ್‌ಬಿನ್ ಮಾಲಿಕ್(ರ)ಗಾಗಿ ಪ್ರವಾದಿ(ಸ) ಪ್ರಾರ್ಥಿಸಿದ್ದರು. ಆ ಪ್ರಾರ್ಥನೆಯಲ್ಲಿ ಮುಖ್ಯವಾದುದು ಹೀಗಿತ್ತು;

''ಅಲ್ಲಾಹನೇ, ನೀನು ಈತನನ್ನು ಸಂಪತ್ತು ಮತ್ತು ಸಂತತಿಗಳಿಂದ ಅನುಗ್ರಹಿಸು! ಈತನಿಗೆ ಐಶ್ವರ್ಯವನ್ನು ನೀಡು!''

ಪುಣ್ಯ ಪ್ರವಾದಿ(ಸ)ರ ಪ್ರಾರ್ಥನೆಯನ್ನು ಅಲ್ಲಾಹನು ಅಕ್ಷರಶಃ ಸ್ವೀಕರಿಸಿದನು. ಅನ್ಸಾರ್‌ಗಳ ಪೈಕಿ ನಂತರದ ದಿನಗಳಲ್ಲಿ ಅತ್ಯಂತ ದೊಡ್ಡ ಶ್ರೀಮಂತನೂ, ಮಕ್ಕಳಿರುವಾತನೂ ಅನಸ್ ಬಿನ್ ಮಾಲಿಕ್(ರ) ಆಗಿದ್ದರು. ಮಕ್ಕಳು ಮರಿಮಕ್ಕಳಾಗಿ ನೂರಕ್ಕೂ ಮಿಕ್ಕಿದ ಸಂಖ್ಯೆಯಲ್ಲಿದ್ದರು.

ಒಂದು ನೂರ ಮೂರು ವರ್ಷಗಳ ಕಾಲ ಅವರು ಜೀವಿಸಿದರು.

ಅಂತ್ಯ ದಿನದಲ್ಲಿ ಪ್ರವಾದಿ(ಸ)ರವರ ಶಿಫಾರಸು ಲಭಿಸುವ ಮಂದಿಯಲ್ಲಿ ತಾನೂ ಸೇರಬೇಕೆಂಬುದು ಅನಸ್(ರ)ರವರ

ಮಹತ್ವಾಕಾಂಕ್ಷೆಯಾಗಿತ್ತು. ಅವರು ಸಾಮಾನ್ಯವಾಗಿ ಹೇಳುತ್ತಿದ್ದರು;

''ಪ್ರವಾದಿ(ಸ)ವರ್ಯರನ್ನು ಅಂತ್ಯ ದಿನದಂದು ಸಂಧಿಸಿದರೆ ಈ ರೀತಿ ಹೇಳಲು ನಾನು ಬಯಸುತ್ತೇನೆ. 'ಅಲ್ಲಾಹನ ದೂತರೇ, ಇದು ತಮ್ಮ ಪುಟ್ಟ ಸೇವಕ ಉನೈಸ್ ಆಗಿರುವೆನು''.

ಮರಣಾಸನ್ನನಾಗಿ ರೋಗ ಶಯ್ಯೆಯಲ್ಲಿ ಮಲಗಿರುವಾಗ ಅನಸ್‌ಬಿನ್ ಮಾಲಿಕ್(ರ) ಮನೆಮಂದಿಯೊಂದಿಗೆ ಈ ರೀತಿ ಹೇಳಿದರು;

''ನೀವು ನನಗೆ ಕಲಿಮಃ ಹೇಳಿಕೊಡಿ''.

ಈ ರೀತಿ ಕೊನೆಯುಸಿರಿನ ವರೆಗೂ ಅವರು ಆ ವಾಕ್ಯವನ್ನು ಪುನರಾವರ್ತಿಸುತ್ತಿದ್ದರು. - ''ಲಾ ಇಲಾಹ ಇಲ್ಲಲ್ಲಾಹ್, ಮುಹಮ್ಮದುರ್ರಸೂಲುಲ್ಲಾಹ್''.

ಮರಣಾಸನ್ನ ವೇಳೆ ಅವರಿಗೆ ವಸಿಯ್ಯತ್ ಮಾಡಲು ಒಂದೇ ಒಂದು ವಿಷಯವಿತ್ತು. ಪ್ರವಾದಿ(ಸ)ರವರ ಸಣ್ಣ ಬೆತ್ತವೊಂದು ಅವರ ಬಳಿಯಿತ್ತು. ತನ್ನನ್ನು ದಫನ ಮಾಡುವ ವೇಳೆ ಆ ಬೆತ್ತವನ್ನು ತನ್ನ ಸಂಗಡ ಇಡಬೇಕೆಂದು ಹೇಳಿದರು. ಅನಸ್(ರ)ರ ವಸಿಯ್ಯತ್‌ನಂತೆ ಅವರನ್ನು ದಫನ ಮಾಡುವಾಗ ಪ್ರವಾದಿ(ಸ)ರ ಆ ಸಣ್ಣ ಬೆತ್ತವನ್ನು ಮೃತದೇಹದ ಬಳಿ ವಸ್ತ್ರಕ್ಕೆ ತಾಗುವಂತೆ ಇರಿಸಲಾಯಿತು.

ಅನಸ್ ಬಿನ್ ಮಾಲಿಕ್(ರ) ಭಾಗ್ಯಶಾಲಿಯಾಗಿದ್ದರು. ಅಲ್ಲಾಹನು ಅವರನ್ನು ಅನುಗ್ರಹಿಸಿದನು. ಸುದೀರ್ಘವಾದ ಹತ್ತು ವರ್ಷಗಳ ಕಾಲ ಪ್ರವಾದಿ(ಸ)ರೊಂದಿಗೆ ಜೀವಿಸಲು ಅವರಿಗೆ ಸಾಧ್ಯವಾಯಿತು. ನೆಬಿ ವರ್ಯರ ಜೀವನ ಸಂದೇಶ ಮತ್ತು ಪುಣ್ಯ ಚರ್ಯೆಯನ್ನು ನಂತರದ ತಲೆಮಾರಿಗೆ ವರದಿ ಮಾಡಿ ಪರಿಚಯಿಸಿದ ಹದೀಸ್ ವರದಿಗಾರರಲ್ಲಿ ಅನಸ್(ರ)ರವರು ಮೂರನೇ ಸ್ಥಾನದಲ್ಲಿರುವವರು. ಅಬೂಹುರೈರಾ(ರ) ಮತ್ತು ಅಬ್ದುಲ್ಲಾಹಿಬ್ನು ಉಮರ್(ರ)ರವರು ಇವರ ಮುಂದಿನ ಸ್ಥಾನದಲ್ಲಿರುವವರು. ಇಸ್ಲಾಮ್ ಮತ್ತು ಮುಸ್ಲಿಮರು ಅನಸ್(ರ) ಮತ್ತು ತಾಯಿ ಗುಮೈಸಾರೊಂದಿಗೆ ಬಹಳಷ್ಟು ಬಾಧ್ಯತೆವುಳ್ಳವರಾಗಿದ್ದಾರೆ. ಅಲ್ಲಾಹನು ಅವರಿಗೆ ಅತ್ಯುತ್ತಮ ಪ್ರತಿಫಲ ನೀಡುವಂತಾಗಲಿ. ಆಮೀನ್.


ಶಿಹಾಬ್ ರೆಸಿಡೆನ್ಸಿಯಲ್ ಸ್ಕೂಲ್ | ಶಿಹಾಬ್ ಇಂಗ್ಲೀಷ್ ಮೀಡಿಯಂ ಸ್ಕೂಲ್

ಪ್ರೈಮರಿ, ಅಪ್ಪರ್ ಪ್ರೈಮರಿ ಮತ್ತು ಪ್ರೌಢ ಶಾಲೆಯ ಮಕ್ಕಳ ಧಾರ್ಮಿಕ ಹಾಗೂ ಲೌಕಿಕ ವಿದ್ಯಾ ಕೇಂದ್ರ



ಪ್ರತೀ ವರ್ಷದಂತೆ ಈ ವರ್ಷವೂ S.S.L.C ಪಬ್ಲಿಕ್ ಪರೀಕ್ಷೆಯಲ್ಲಿ ಶೇ.100% ಫಲಿತಾಂಶ ಬಂದಿರುತ್ತದೆ.

ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದೆ.

- ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣ.
- ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸದ ಜೊತೆಗೆ ಕಂಪ್ಯೂಟರ್ ತರಬೇತಿ.
- ಅರ್ಹತೆಗನುಸಾರ ವಿದ್ಯಾರ್ಥಿವೇತನ.
- ಮಂಗಳೂರಿನಿಂದ 32ಕಿ.ಮೀ. ದಕ್ಷಿಣದಲ್ಲಿ ರಾಷ್ಟ್ರೀಯ ಹೆದ್ದಾರಿ 17ರ ಪಕ್ಕದ ಪ್ರಶಾಂತ ವಾತಾವರಣ.

ದಾಖಲಾತಿಗಾಗಿ ಸಂಪರ್ಕಿಸಿರಿ

ಚೆಯರ್‌ಮೆನ್,
ಶೇಕ್ ಅಬ್ದುಲ್ಲಾ, ಬಿ.ಎ; ಎಫ್.ಸಿ.ಎ.,
ಚಾರ್ಟರ್ಡ್ ಅಕೌಂಟೆಂಟ್, ಚರ್ಚ್ ಬಿಲ್ಡಿಂಗ್, ಕೊಡಿಯಾಲ್ ಬೈಲ್,
ಮಂಗಳೂರು - 575003,
ಫೋನ್ : 0824-2440339(0), 2495121(R)
ಇಮೈಲ್ : sheikhabdullah@email.com
ಫ್ಯಾಕ್ಸ್ : 0824 : 4256762 ಮೊಬೈಲ್ : 98440 35786

ಪ್ರಾಂಶುಪಾಲರು,
ಶಿಹಾಬುಲ್ ಉಲೂಮ್ ರೆಸಿಡೆನ್ಸಿಯಲ್ ಸ್ಕೂಲ್,
ಅಡ್ಕಬಂದಿಯೋಡ್, ಮಂಗಲಪಾಡಿ - 671 324
ಉಪ್ಪಳ, ಕಾಸರಗೋಡ್ ಜಿಲ್ಲೆ,
ಫೋನ್ : 04998 - 240222, 240333
ಫ್ಯಾಕ್ಸ್ : 04998-240333
ವೆಬ್‌ಸೈಟ್ : www.shihabfoundation.org

# ಮೌಲ್ಯಯುತ ಶಿಕ್ಷಣ ನಮ್ಮದಾಗಲಿ...

'ಶಿಕ್ಷಣ' ಮಾನವನ ಮೂಲಭೂತ ಅವಶ್ಯಕತೆಗಳಲ್ಲೊಂದಾಗಿದೆ. ವಿದ್ಯಾಭ್ಯಾಸ ಮಾಡುವುದು ಅತೀ ಅವಶ್ಯ. ಅದಿಲ್ಲದೆ ಮಾನವ ಸಮಾಜವನ್ನು ಕಲ್ಪಿಸಿಕೊಳ್ಳಲು ಅಸಾಧ್ಯ. ಈಗ ಶಾಲಾ ಕಾಲೇಜುಗಳು ಆರಂಭಗೊಂಡಿದೆ. ಎಲ್ಲೆಲ್ಲೂ ಶಿಕ್ಷಣದ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ತಮ್ಮ ಮಕ್ಕಳನ್ನು ಯಾವ ಸಂಸ್ಥೆಗೆ ಹಾಗೂ ಯಾವ ಕ್ಷೇತ್ರಕ್ಕೆ ಆಯ್ಕೆ ಮಾಡಿಕೊಳ್ಳಬೇಕೆಂಬ ಗೊಂದಲದಲ್ಲಿರುವ ಪೋಷಕರು ಒಂದೆಡೆಯಾದರೆ, ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮ ಮಕ್ಕಳಿಗೆ ಸ್ಥಾನ ಗಿಟ್ಟಿಸಿಕೊಂಡಿರುವುದರ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತಿರುವ ಪೋಷಕರು ಇನ್ನೊಂದು ಕಡೆ.



ಒಟ್ಟಿನಲ್ಲಿ ಶಿಕ್ಷಣವೆಂದರೆ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ ಬೋಧನೆ, ಓದುವುದು, ಬರೆಯುವುದು, ಅಂಕಿಸಂಖ್ಯೆಗಳ ಬಗ್ಗೆ ತಿಳಿದುಕೊಳ್ಳುವುದು, ಪುಸ್ತಕದಿಂದ ಉರುಹೊಡೆಯುವುದು, ಪರೀಕ್ಷೆ ಎದುರಿಸುವುದು, ರ್‍ಯಾಂಕ್ ಗಳಿಸುವುದು, ವೈದ್ಯಕೀಯ, ಎಂಜಿನಿಯರಿಂಗ್, ಕಾನೂನು, ಕಂಪ್ಯೂಟರ್, ಮ್ಯಾನೇಜ್‌ಮೆಂಟ್ ಮುಂತಾದ ಪದವಿಗಳನ್ನು ಹೊಂದುವುದು ಶಿಕ್ಷಣ ಎಂದು ಅನೇಕರು ಭಾವಿಸಿದ್ದಾರೆ. ವಾಸ್ತವದಲ್ಲಿ ಇದ್ಯಾವುದೂ ನಿಜವಾದ ಶಿಕ್ಷಣವಲ್ಲ.

ಯೋಗ್ಯ ಜ್ಞಾನವನ್ನು ಒದಗಿಸಿ ವ್ಯಕ್ತಿಯಲ್ಲಿ ಸುಪ್ತವಾಗಿರುವ ಶಕ್ತಿಗಳನ್ನು ಸಂವರ್ಧನೆಗೊಳಿಸುವುದು ಶಿಕ್ಷಣ. ಮಾನವನ ಜಡತ್ವಕ್ಕೆ ಚೈತನ್ಯದ ಪ್ರಕಾಶಯುಕ್ತ ಶಕ್ತಿಯನ್ನು ತುಂಬುವುದೇ ಶಿಕ್ಷಣ. ತಾನು ಕಲಿತ ಶಿಕ್ಷಣ ಎಂಥದ್ದು ಎಂದು ತಿಳಿದು ಅದರಿಂದ ಸಂಸ್ಕಾರಗೊಂಡ ಮನೋಸ್ಥಿತಿಯೇ ಶಿಕ್ಷಣ. ಜೀವನದ ಸಾಧನೆಗೆ ಶಿಕ್ಷಣವು ಪೂರಕವಾಗಿರಬೇಕು. ಜೀವನದ ಸವಾಲುಗಳನ್ನು ಎದುರಿಸುವುದಕ್ಕೆ ಜೀವನದ ಜವಾಬ್ದಾರಿ ತೆಗೆದುಕೊಳ್ಳಲು ಕಲಿಸುವುದೇ ಶಿಕ್ಷಣ. ಶಿಕ್ಷಣವು ಜ್ಞಾನದ ಬೀಜಗಳನ್ನು ಬಿತ್ತಿ ಆದರ್ಶಗಳನ್ನು ಭಾವನೆಗಳಿಗೆ ಕಾರಣವಾಗಿ ಮನಸ್ಸನ್ನು ಉದ್ದೀಪನಗೊಳಿಸುತ್ತದೆ. ಶಿಕ್ಷಣದಿಂದ ಸದ್ವರ್ತನೆ, ಸದ್ಭಾವನೆಗಳು ಸೃಜನಶೀಲಗೊಳ್ಳುತ್ತದೆ. ನಮ್ಮನ್ನು ನಾವು

ಅರಿತಾಗ ಮಾತ್ರ ಶಿಕ್ಷಣದ ಮಹತ್ವದ ಅರಿವು ಉಂಟಾಗುವುದು ಹಾಗೂ ಅಂತರಂಗದಲ್ಲಿ ಪರಿವರ್ತನೆ ಉಂಟಾಗುವುದು.

'ಉದ್ಯೋಗ' ಎಂಬ ಒಂದೇ ಧ್ಯೇಯವನ್ನಿಟ್ಟುಕೊಂಡು ಇಂದು ಶಿಕ್ಷಣ ಕ್ಷೇತ್ರ ಮುಂದುವರಿಯುತ್ತಿದೆ. ವಿಭಕ್ತ ಕುಟುಂಬದಲ್ಲೇ ನೆಲೆಯೂರಿದ ಇಂದಿನ ಸಮಾಜದಲ್ಲಿ ಮನೆಯಲ್ಲಿ ತಾಯಿಯ ಪ್ರೀತಿ, ತಂದೆಯ ರಕ್ಷಣೆ, ಸಹೋದರ ಸಹೋರಿಯರ ಮಮತೆ, ಪತ್ನಿಯ ಪ್ರೇಮ, ಪತಿಯ ಅಕ್ಕರೆ, ಮಕ್ಕಳ ವಾತ್ಸಲ್ಯ ಇವೆಲ್ಲವೂ ಇಂದಿನ ಒತ್ತಡದ ಜೀವನದಲ್ಲಿ ಕ್ರಮೇಣ ಕಡಿಮೆಯಾಗುತ್ತಿದೆ.

ಮಾನವ ಸಂಬಂಧ, ಕುಟುಂಬ ಸಂಬಂಧ ವೃದ್ಧಿಸುವ ಸಹಕಾರ, ಪ್ರೀತಿ, ವಿಶ್ವಾಸ, ಸ್ನೇಹ ಹಾಗೂ ಒಬ್ಬರನ್ನೊಬ್ಬರು ಪರಸ್ಪರ ಅರ್ಥಮಾಡಿಕೊಳ್ಳುವ ಭಾವನೆಗಳನ್ನು ಬಿಂಬಿಸುವ ಶಿಕ್ಷಣ ಅಗತ್ಯ. ಉನ್ನತ ಜೀವನ ಮೌಲ್ಯಗಳನ್ನು ಶಿಕ್ಷಣ ಒದಗಿಸಬೇಕು. ಭಯಮುಕ್ತ ಸ್ವಾತಂತ್ರ್ಯವನ್ನುಂಟು ಮಾಡುವ ಶಿಕ್ಷಣ ಇಂದು ಅಗತ್ಯವಾಗಿದೆ.

ನಮ್ಮ ಸುತ್ತಲಿರುವ ಮೂಢನಂಬಿಕೆ, ಅಂಧವಿಶ್ವಾಸವನ್ನು ವಿರೋಧಿಸಿ ವೈಜ್ಞಾನಿಕ-ವೈಚಾರಿಕ ಜಾಗೃತಿಯನ್ನುಂಟು ಮಾಡುವ ಶಿಕ್ಷಣಬೇಕಾಗಿದೆ. ಜೀವನ ನಿರ್ವಹಣೆಗೆ ನಾವು ಆರಿಸಿಕೊಂಡ ಕ್ಷೇತ್ರದಲ್ಲಿ ಪರಿಣತಿ ನೀಡಿ ಸ್ವ-ಉದ್ಯೋಗ ಹೊಂದುವ ಶಿಕ್ಷಣಬೇಕು. ಪರಿಸರ ಪ್ರಜ್ಞೆ, ನೈರ್ಮಲ್ಯ ಕಾಪಾಡುವ, ವೃಕ್ಷನೆಟ್ಟು ಬೆಳೆಸುವ ಪ್ರಜ್ಞೆ ಮೂಡಿಸುವ ಶಿಕ್ಷಣ ಇಂದು ಬೇಕಾಗಿದೆ. ದೇಶಪ್ರೇಮ, ಧಾರ್ಮಿಕ ಜಾಗೃತಿ, ಸಮಾಜ ನಿಷ್ಠೆ ಹುಟ್ಟಿಸುವ ಶಿಕ್ಷಣ ಬೇಕಾಗಿದೆ. ಇದಕ್ಕೆಲ್ಲಾ ಪೂರಕವಾಗಿ ಶಾಲಾ-ಕಾಲೇಜುಗಳು ಕಾರ್ಯ ಚಟುವಟಿಗಳನ್ನು ರೂಪಿಸಬೇಕು.

ಸಂಸ್ಕೃತಿಯ ಮೌಲ್ಯಗಳನ್ನು ಪ್ರತಿಬಿಂಬಿಸುವ ನೈತಿಕ ಮೌಲ್ಯಗಳನ್ನು ವೃದ್ಧಿಸುವ ಶಿಕ್ಷಣ ಬೇಕು. ಜಾಗತೀಕರಣ, ಬಾಂಬ್ ಪ್ರಯೋಗ, ಭಯೋತ್ಪಾದನೆ, ಕೋಮುವಾದ,ಮಾನವ ಹಕ್ಕುಗಳ ಉಲ್ಲಂಘನೆ ಇವುಗಳ ನಿಯಂತ್ರಣ ಮತ್ತು ಪ್ರಚಲಿತ ವಿದ್ಯಾಮಾನಗಳ, ಸಮಕಾಲೀನ ಸಮಸ್ಯೆಗಳ ಬಗ್ಗೆ ವಿವೇಚನೆ ಮಾಡುವ ಶಿಕ್ಷಣ ಬೇಕಾಗಿದೆ. ಒಂದು ವಸ್ತುಸ್ಥಿತಿಯ ಬಗ್ಗೆ ವಿಮರ್ಶಿಸುವ, ಅದರ ಪೂರ್ವಾಪರಗಳ ಬಗ್ಗೆ ಚರ್ಚಿಸುವ ಶಿಕ್ಷಣ ಬೇಕಾಗಿದೆ. ವರದಕ್ಷಿಣೆ, ಅಸ್ಪೃಶತೆ, ಸ್ತ್ರೀಯರ ಮೇಲಿನ ದೌರ್ಜನ್ಯ, ಸಾಮಾಜಿಕ ಅನಿಷ್ಠಗಳ ನಿವಾರಣೆಗೆ ವೈಜ್ಞಾನಿಕ ವೈಚಾರಿಕ ಶಿಕ್ಷಣ ಬೇಕಾಗಿದೆ.

***ಸಂಸ್ಕೃತಿಯ ಮೌಲ್ಯಗಳನ್ನು ಪ್ರತಿಬಿಂಬಿಸುವ ನೈತಿಕ ಮೌಲ್ಯಗಳನ್ನು ವೃದ್ಧಿಸುವ ಶಿಕ್ಷಣ ಬೇಕು. ಜಾಗತೀಕರಣ, ಬಾಂಬ್ ಪ್ರಯೋಗ, ಭಯೋತ್ಪಾದನೆ, ಕೋಮುವಾದ,ಮಾನವ ಹಕ್ಕುಗಳ ಉಲ್ಲಂಘನೆ ಇವುಗಳ ನಿಯಂತ್ರಣ ಮತ್ತು ಪ್ರಚಲಿತ ವಿದ್ಯಾಮಾನಗಳ, ಸಮಕಾಲೀನ ಸಮಸ್ಯೆಗಳ ಬಗ್ಗೆ ವಿವೇಚನೆ ಮಾಡುವ ಶಿಕ್ಷಣ ಬೇಕಾಗಿದೆ. ಒಂದು ವಸ್ತುಸ್ಥಿತಿಯ ಬಗ್ಗೆ ವಿಮರ್ಶಿಸುವ, ಅದರ ಪೂರ್ವಾಪರಗಳ ಬಗ್ಗೆ ಚರ್ಚಿಸುವ ಶಿಕ್ಷಣ ಬೇಕಾಗಿದೆ. ವರದಕ್ಷಿಣೆ, ಅಸ್ಪೃಶತೆ, ಸ್ತ್ರೀಯರ ಮೇಲಿನ ದೌರ್ಜನ್ಯ, ಸಾಮಾಜಿಕ ಅನಿಷ್ಠಗಳ ನಿವಾರಣೆಗೆ ವೈಜ್ಞಾನಿಕ ವೈಚಾರಿಕ ಶಿಕ್ಷಣ ಬೇಕಾಗಿದೆ.***

ವರ್ಷವಿಡೀ ಅಧ್ಯಯನದಲ್ಲಿ ತೊಡಗಿದ ವಿದ್ಯಾರ್ಥಿಯು ಕೇವಲ 3 ಗಂಟೆಯ ಅವಧಿಯಲ್ಲಿ ಆ ಜ್ಞಾನವನ್ನು ಹೊರಗೆಡವಿ ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದು ದೊಡ್ಡ ಸಾಧನೆಯೇನಲ್ಲ. ಬದಲಾಗಿ ಜೀವನದಲ್ಲಿ ಸವಾಲುಗಳನ್ನು ಎದುರಿಸುವ ಸಂದರ್ಭ ಬಂದಾಗ, ಸುಖ-ದುಃಖಗಳನ್ನು ಎದೆಗುಂದದೆ ಎದುರಿಸಿ ಉತ್ತೀರ್ಣನಾಗುವುದೇ ದೊಡ್ಡ ಸಾಧನೆ. ಅದುವೇ ನಿಜವಾದ ಪರೀಕ್ಷೆಯಾಗಿದೆ. ನಾವು ಪರೀಕ್ಷೆಯನ್ನು ಎದುರಿಸುವ ಸಲುವಾಗಿ ಅಧ್ಯಯನ ಮಾಡಬಾರದು. ಬದಲಾಗಿ ಅಧ್ಯಯನ ಮಾಡಿದುದಕ್ಕಾಗಿ ಪರೀಕ್ಷೆಯನ್ನು ಎದುರಿಸಬೇಕು. ಅದುವೇ ನಿಜವಾದ ಶಿಕ್ಷಣ. ನಿಜವಾದ ಪರೀಕ್ಷೆ.

ಪರೀಕ್ಷೆ, ಅಂಕಪಟ್ಟಿಗಳಿಗೆ ಒತ್ತು ನೀಡಿರುವ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ವಿವೇಕಾನಂದರ ಪ್ರಕಾರ 'ವಿದ್ಯಾಭ್ಯಾಸವೆಂದರೆ ನಿಮ್ಮ ತಲೆಗೆ ತುಂಬಲ್ಪಟ್ಟ ಮಾಹಿತಿಗಳ ಮೊತ್ತವಲ್ಲ, ಅದು ಅಲ್ಲಿ ಜೀರ್ಣವಾಗದೇ ಅಸ್ತವ್ಯಸ್ತವಾಗಿ ಬಿದ್ದಿರುವುದು. ಯಾವ ಶಿಕ್ಷಣ ಜನಸಾಮಾನ್ಯರನ್ನು ಜೀವನ ಸಂಗ್ರಾಮಕ್ಕೆ ಸಮರ್ಥರನ್ನಾಗಿ ಮಾಡುವುದಿಲ್ಲವೋ, ಯಾವುದು ಮನುಷ್ಯನಿಗೆ ಚಾರಿತ್ರ್ಯ, ಬಲ, ಸೇವಾ ತತ್ಪರತೆ, ಸಾಹಸಿಕತೆ ಇವುಗಳನ್ನು ಒದಗಿಸುವುದಿಲ್ಲವೋ ಅದು ಶಿಕ್ಷಣ ಎಂಬ ಹೆಸರಿಗೆ ಯೋಗ್ಯವೇ? ವ್ಯಕ್ತಿಯನ್ನು ಸ್ವಾಲಂಬಿಯನ್ನಾಗಿ ಮಾಡುವುದೇ ಶಿಕ್ಷಣ'' ಎಂಬ ಮಾತು ಎಷ್ಟೊಂದು ಅರ್ಥಪೂರ್ಣವಲ್ಲವೇ?

**ಅಬ್ದುಲ್ ಜಲೀಲ್ ನಂದಾವರ**
**ಎಸ್‌ಡಿಎಂ ಲಾ ಕಾಲೇಜು, ಮಂಗಳೂರು**

# ಬಡತನದ ಕಾರಣಕ್ಕೆ ಯಾರೂ ಶಿಕ್ಷಣ ವಂಚಿತರಾಗಬಾರದು

## ಇಸ್ರಾರ್



*ಇಸ್ರಾರ್ ಬಾನು ಬಳ್ಳಾರಿಗೆ ಅಭಿನಂದನೆಗಳು...*

ದ್ವಿತೀಯ ಪಿಯು ಪರೀಕ್ಷೆಯ ಕಲಾ ವಿಭಾಗದಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನಿಯಾಗಿ ಸಾಧನೆಗೈದ ಇಸ್ರಾರ್ ಬಾನು ಬಳ್ಳಾರಿಗೆ ಅಭಿನಂದನೆಯ ಮಹಾಪೂರವೇ ಹರಿದುಬರುತ್ತಿದೆ. ಕಿತ್ತುತಿನ್ನುವ ಬಡತನವಿದ್ದರೂ ಇಸ್ರಾರ್ ಮನೆಯಲ್ಲಿ ಶಿಕ್ಷಣ ಶ್ರೀಮಂತಿಕೆಯಿದೆ. ಮಗಳ ಅಭೂತಪೂರ್ವ ಸಾಧನೆಯಿಂದಾಗಿ ಮನೆಯ ಬಡತನ ಅನುಭವಕ್ಕೆ ಬರುತ್ತಿಲ್ಲವಂತೆ.

ಗದಗ ಜಿಲ್ಲೆಯ ರಾಜೀವ್ ಗಾಂಧಿ ನಗರದಲ್ಲಿ ವಾಸವಾಗಿರುವ ಮನ್ಸೂರ್ ಸಾಬ್ ಬಳ್ಳಾರಿ ಹಾಗೂ ಮೆಹರುನ್ನಿಸಾ ದಂಪತಿಯ ಪುತ್ರಿ ಇಸ್ರಾರ್ ಬಾನು ಅತಿ ಹೆಚ್ಚು ಅಂಕ ಪಡೆಯಬೇಕೆಂದು ಸಾಕಷ್ಟು ಪರಿಶ್ರಮಪಟ್ಟಿದ್ದಾಳೆ. ಒಟ್ಟು 572 ಅಂಕಗಳನ್ನು ಪಡೆದಿರುವ ಇಸ್ರಾರ್ ಬಾನು, ಕನ್ನಡದಲ್ಲಿ 97, ಹಿಂದಿಯಲ್ಲಿ 88, ಶಿಕ್ಷಣದಲ್ಲಿ 95, ಸಮಾಜ ಶಾಸ್ತ್ರದಲ್ಲಿ 95, ಇತಿಹಾಸದಲ್ಲಿ 99 ಅಂಕಗಳನ್ನು ಪಡೆದು ಸಾಧನೆ ಮೆರೆದಿದ್ದಾರೆ. ಆದರೆ ಆಕೆಗೆ ತಾನು ರಾಜ್ಯಕ್ಕೆ ಪ್ರಥಮಳಾಗುತ್ತೇನೆ ಎಂಬ ನಿರೀಕ್ಷೆ ಇರಲಿಲ್ಲ. ಆಕೆಯ ಸಾಧನೆಯನ್ನು ಮೆಚ್ಚಿ ಸಚಿವರು, ಶಾಸಕರು, ಅಧಿಕಾರಿಗಳು, ಸಂಘಸಂಸ್ಥೆಗಳು ಮನೆಗೆ ಭೇಟಿ ನೀಡಿ ಅಭಿನಂದನೆ ಸಲ್ಲಿಸಿದ್ದಾರೆ.

ಇಸ್ರಾರ್‌ಳ ತಂದೆ ಮನ್ಸೂರ್ ಸಾಬ್ ಎಂ.ಎ. ಪದವಿ ಹೊಂದಿದ್ದು, ಗದಗ್‌ನ ವಿಕ್ರಂ ಪ್ರಕಾಶನದಲ್ಲಿ ಡಿಟಿಪಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ತನಗೆ ಸಿಗುವ ಮೂರು ಸಾವಿರ ಸಂಬಳದಲ್ಲಿ ಹಿರಿಯ ಮಗಳನ್ನು ಬಿಎಡ್‌ವರೆಗೆ ಓದಿಸಿದ್ದಾರೆ. ಎರಡನೆಯ ಮಗಳಾದ ಇಸ್ರಾರ್ ಬಾನುಳನ್ನು ಚೆನ್ನಾಗಿ ಓದಿಸುವ ಇರಾದೆ ಹೊಂದಿದ್ದಾರೆ. ಇನ್ನಿಬ್ಬರು ಗಂಡು ಮಕ್ಕಳು ಹೈಸ್ಕೂಲ್ ಕಲಿಯುತ್ತಿದ್ದಾರೆ. ತಾಯಿ ಮೆಹರುನ್ನಿಸಾ ಉರ್ದು ಮಾಧ್ಯಮದಲ್ಲಿ ಎಸ್‌ಎಸ್‌ಎಲ್‌ಸಿ ಶಿಕ್ಷಣ ಪಡೆದಿದ್ದಾರೆ. ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ ಮಕ್ಕಳನ್ನು ಬೆಳೆಸುತ್ತಿರುವ ಹೆತ್ತವರ ನಿರೀಕ್ಷೆಗೆ ತಕ್ಕಂತೆ ಮಕ್ಕಳು ಅತ್ಯುತ್ತಮವಾಗಿ ಕಲಿಯುತ್ತಿರುವುದು ಮನ್ಸೂರ್ ಸಾಬ್‌ಗೆ ಅತೀವ ಸಂತೋಷ ನೀಡಿದೆ.

ಇಸ್ರಾರ್ ಬಾನು ಬಳ್ಳಾರಿ ಅವರನ್ನು ಪ್ರಸ್ತುತ ಪಾಕ್ಷಿಕವು ಮಾತನಾಡಿಸಿದಾಗ ತನ್ನ ಅನಿಸಿಕೆ, ಅನುಭವಗಳನ್ನು ಅವರು ಈ ರೀತಿ ಹಂಚಿಕೊಂಡರು.

''ಫಲಿತಾಂಶದ ದಿನದಂದು ಕಾಲೇಜಿನ ಇತಿಹಾಸ ಉಪನ್ಯಾಸಕ ಗೋವೆಣ್ಣವರ್ ಫೋನು ಮಾಡಿ ತಿಳಿಸಿದಾಗ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಅದರ ಬೆನ್ನಿಗೇ ಹಿಂದಿ ಮೇಡಂ ಎಸ್.ಎಂ.ಪಾಟೀಲ್ ಫೋನು ಮಾಡಿ ಅಭಿನಂದನೆ ಸಲ್ಲಿಸಿದರು. ಮನೆಯಲ್ಲಿ, ಊರಲ್ಲೆಲ್ಲಾ ಸುದ್ದಿ ಹರಡಿತು. ಮನೆಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಯಿತು. ಫ್ರೆಂಡ್ಸ್‌ಗಳು ಮನೆಗೆ ಬಂದು ಅಭಿನಂದನೆ ಸಲ್ಲಿಸಿದರು. ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ.ಸಿ.ಪಾಟೀಲ್, ಬಸವರಾಜ ಹೊರಟ್ಟಿ ಮನೆಗೆ ಬಂದು ಅಭಿನಂದನೆ ಸಲ್ಲಿಸಿದರು. ಮುಂದಿನ ಶಿಕ್ಷಣಕ್ಕೆ ನೆರವು ನೀಡುವುದಾಗಿ ಭರವಸೆ ನೀಡಿದರು. ಅದೇ

''ಮನೆಯಲ್ಲಿ ಬಡತನ ಇತ್ತು. ಆದರೆ ನಮ್ಮ ಅಪ್ಪ ಅಮ್ಮ ನಮ್ಮ ಶಿಕ್ಷಣಕ್ಕೆ ಏನೂ ತೊಂದರೆಯಾಗದಂತೆ ನೋಡಿಕೊಂಡರು. ತಂದೆಯವರು ಹಿಸ್ಟರಿಯಲ್ಲಿ ಎಂ.ಎ. ಮಾಡಿದವರು. ಅವರು ಕೂಡ ನಮಗೆ ಆವಾಗಾವಾಗ ಸಲಹೆ, ಸೂಚನೆ, ಮಾರ್ಗದರ್ಶನ ನೀಡುತ್ತಿದ್ದರು. ಅಕ್ಕ ಮಹಬೂಬಿ ಬಿಎಡ್ ಕಲಿತಿದ್ದಾಳೆ. ಮನೆಯಲ್ಲಿ ಎಲ್ಲರೂ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಮನೆಯವರ ಮತ್ತು ಶಿಕ್ಷಕರ ಪ್ರೋತ್ಸಾಹದಿಂದಾಗಿ ನನಗೆ ಇವತ್ತು ಸಾಧನೆ ಮಾಡಲು ಸಾಧ್ಯವಾಯಿತು.''

ರೀತಿ ಗದಗ ಜಿಲ್ಲಾಧಿಕಾರಿ ಶಂಕರನಾರಾಯಣ ಮೂರ್ತಿಯವರೂ ಬಂದು ಶ್ಲಾಘಿಸಿದರು. ಸಚಿವರು, ಅಧಿಕಾರಿಗಳು ಮನೆಗೆ ಬಂದು ಅಭಿನಂದನೆ ಸಲ್ಲಿಸುವಾಗ ಮನೆಯವರೆಲ್ಲರಿಗೂ ಖುಷಿಯೋ ಖುಷಿ. ಸ್ಥಳೀಯ ಸಂಘಟನೆಗಳವರು ಕೂಡ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಮುಸ್ಲಿಮ್ ಸರ್ವೀಸ್ ಸೊಸೈಟಿ ಸಂಘಟನೆಯವರು ನಮ್ಮನ್ನು ಬೆಂಗಳೂರಿಗೆ ಕರೆಸಿ ಸನ್ಮಾನ ಮಾಡಿದ್ದಾರೆ''.

''ಮನೆಯಲ್ಲಿ ಬಡತನ ಇತ್ತು. ಆದರೆ ನಮ್ಮ ಅಪ್ಪ ಅಮ್ಮ ನಮ್ಮ ಶಿಕ್ಷಣಕ್ಕೆ ಏನೂ ತೊಂದರೆಯಾಗದಂತೆ ನೋಡಿಕೊಂಡರು. ತಂದೆಯವರು ಹಿಸ್ಟರಿಯಲ್ಲಿ ಎಂ.ಎ. ಮಾಡಿದವರು. ಅವರು ಕೂಡ ನಮಗೆ ಆವಾಗಾವಾಗ ಸಲಹೆ, ಸೂಚನೆ, ಮಾರ್ಗದರ್ಶನ ನೀಡುತ್ತಿದ್ದರು. ಅಕ್ಕ ಮಹಬೂಬಿ ಬಿಎಡ್ ಕಲಿತಿದ್ದಾಳೆ. ಮನೆಯಲ್ಲಿ ಎಲ್ಲರೂ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಮನೆಯವರ ಮತ್ತು ಶಿಕ್ಷಕರ ಪ್ರೋತ್ಸಾಹದಿಂದಾಗಿ ನನಗೆ ಇವತ್ತು ಸಾಧನೆ ಮಾಡಲು ಸಾಧ್ಯವಾಯಿತು.''.

''ಪಿಯು ಪರೀಕ್ಷೆಯಲ್ಲಿ ಏನಾದರೂ ಸಾಧನೆ ಮಾಡಬೇಕು ಎಂದುಕೊಂಡಿದ್ದೆ. ದಿನದಲ್ಲಿ 4-5 ಗಂಟೆ ಓದುತ್ತಿದ್ದೆ. ಪರೀಕ್ಷೆಗೆ ಮುಂಚೆ 15 ದಿನಗಳ ಕಾಲ ನಿರಂತರ ಓದಿನಲ್ಲೇ ಮುಗ್ನವಾಗಿರುತ್ತಿದ್ದೆ. ಮನೆಯಲ್ಲಿ ಟಿವಿ, ಕೇಬಲ್ ಕನೆಕ್ಷನ್ ಇದೆ. ದಿನಕ್ಕೆ 2 ತಾಸು ಟಿವಿ ವೀಕ್ಷಿಸುತ್ತಿದ್ದೆ. ನ್ಯೂಸ್ ಚಾನೆಲ್ ಮತ್ತು ಜಿಯೋಗ್ರಾಫಿಕಲ್ ಚಾನೆಲ್ ಹೆಚ್ಚಾಗಿ ವೀಕ್ಷಿಸುತ್ತಿದ್ದೆ. ಆದರೆ ಹೆಚ್ಚು ಹೊತ್ತು ಟಿವಿ ಮುಂದೆ ಕೂರುತ್ತಿರಲಿಲ್ಲ''.

''ಎಸ್ಸೆಸ್ಸೆಲ್ಸಿಯಲ್ಲಿ ನಾನು ಶೇ.88 ಮಾರ್ಕ್ಸ್ ಪಡೆದಿದ್ದೆ. ತಂದೆಯವರು ವಿಜ್ಞಾನ ವಿಷಯ ತೆಗೆದುಕೊಳ್ಳಲು ಸೂಚಿಸಿದರು. ಆದರೆ ನನಗೆ ವಿಜ್ಞಾನ ಇಷ್ಟವಿರಲಿಲ್ಲ. ಕಲಾ ವಿಭಾಗಕ್ಕೆ ಸೇರಿದೆ. ಇನ್ನು ಎಂ.ಎ. ಮಾಡಬೇಕೆಂದಿದ್ದೇನೆ. ನನ್ನ ಗುರಿ ಐಎಎಸ್. ಖಂಡಿತವಾಗಿಯೂ ನಾನು ಐಎಎಸ್ ಪಾಸಾಗಬಲ್ಲೆ ಎಂಬ ವಿಶ್ವಾಸ ಈಗ ಮೂಡುತ್ತಿದೆ''.

''ಶಿಕ್ಷಣ ಪಡೆಯಬೇಕು ಎಂಬ ಇಚ್ಛೆ ಇದ್ದರೆ ಅದಕ್ಕೆ ಬಡತನ ಅಡ್ಡಿಯಾಗುವುದಿಲ್ಲ. ಆರ್ಥಿಕ ಅಡಚಣೆಯ ಕಾರಣಕ್ಕಾಗಿ ಯಾವತ್ತೂ ಶಿಕ್ಷಣವನ್ನು ತ್ಯಜಿಸಬಾರದು. ಬಡತನದ ಹೆಸರಿನಲ್ಲಿ ಯಾರೂ ಶಿಕ್ಷಣ ವಂಚಿತರಾಗಬಾರದು ಎಂಬುದೇ ನನ್ನ ಹಾರೈಕೆ.''

ಇಸ್ರಾರ್ ಬಾನು ಬಳ್ಳಾರಿ ಅವರ ಕನಸು ನನಸಾಗಲಿ ಎಂದು ಪ್ರಸ್ತುತ ಪಾಕ್ಷಿಕ ಹಾರೈಸುತ್ತದೆ.

---

5ನೇ ಪುಟದಿಂದ...

### ಮೂರು ವರ್ಷಗಳ ಕರಾಳ ದಿನಗಳು

ಯಡಿಯೂರಪ್ಪ ಸರಕಾರದ ಸಹೋದ್ಯೋಗಿಗಳು ಒಂದಲ್ಲ ಒಂದು ಹಗರಣ, ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪನವರೇ ಖುದ್ದಾಗಿ ತನ್ನ ಕುಟುಂಬ ಸದಸ್ಯರಿಗೆ ಅನುಕೂಲವಾಗುವಂತೆ ಕೋಟ್ಯಂತರ ರೂಪಾಯಿ ಮೌಲ್ಯದ ಭೂಮಿ ಡಿನೋಟಿಫೈ ಮಾಡಿದ್ದು ಭಾರೀ ಚರ್ಚೆಗೆ ಗ್ರಾಸವಾಯಿತು. ಮುಖ್ಯಮಂತ್ರಿ ಪುತ್ರ, ಅಳಿಯ ಸೇರಿದಂತೆ ಕುಟುಂಬ ಸದಸ್ಯರು, ಬಂಧುಗಳಿಗೆ ಬಿಡಿಎ ನಿವೇಶನ ಮಂಜೂರು ಪ್ರಕರಣ. ಇದರ ವಿರುದ್ಧ ಇಬ್ಬರು ವಕೀಲರಿಗೆ ಮುಖ್ಯಮಂತ್ರಿಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ರಾಜ್ಯಪಾಲರು ಅನುಮತಿಯನ್ನೂ ನೀಡಿದ್ದಾರೆ. ಗಣಿಕಂಪೆನಿಗಳು ನೂರಾರು ಎಕರೆ ಜಮೀನು ಮಂಜೂರು ಮಾಡಿ, ಆ ಮೂಲಕ ಯಡಿಯೂರಪ್ಪ ತಮ್ಮ ಕುಟುಂಬ ಸದಸ್ಯರು ಇರುವ ಟ್ರಸ್ಟ್‌ಗೆ ಕೋಟ್ಯಂತರ ರೂಪಾಯಿ ಅನುದಾನ ಪಡೆದಿರುವುದು ಬಹಿರಂಗಗೊಂಡಿತ್ತು. ಮುಖ್ಯಮಂತ್ರಿಗಳ ಕುಟುಂಬದಿಂದ ಶಿವಮೊಗ್ಗದಲ್ಲಿ ಕೋಟ್ಯಂತರ ರೂಪಾಯಿ ವೆಚ್ಚದ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಹಿಂದೆಯೂ ಅವ್ಯವಹಾರದ ಸುಳಿವು ದೊರೆತಿದೆ. ನೆರೆಸಂತ್ರಸ್ತರಿಗೆ ಆಸರೆ ಮನೆ ನಿರ್ಮಾಣ, ಪರಿಹಾರ ವಿತರಣೆಯಲ್ಲಿ ಅಕ್ರಮ, ಇನ್ನೂ ಮುಗಿಯದ ಮನೆ ನಿರ್ಮಾಣ ಕಾಮಗಾರಿ ಇವೆಲ್ಲವೂ ಜೀವಂತವಾಗಿರುವ ಹಗರಣಗಳು.

ಹೀಗೆ ಹಗರಣ, ಅವ್ಯವಹಾರ, ಭ್ರಷ್ಟಾಚಾರದಲ್ಲಿ ರಾಜ್ಯವನ್ನು ದೇಶದಲ್ಲೇ ಮೊದಲ ಸ್ಥಾನಕ್ಕೇರಿಸಿದ ಯಡಿಯೂರಪ್ಪ ಸರಕಾರದ ಮೂರು ವರ್ಷಗಳು ಸುವರ್ಣ ಕರ್ನಾಟಕದ ಪಾಲಿಗೆ ಕರಾಳ ದಿನಗಳು.

# ಬಾಲ್ಯದ ಕನಸು ನನಸಾಗಿಸುವತ್ತ ಫಾತಿಮಾ ರಈಸಾ



ಕುಟುಂಬದೊಂದಿಗೆ ಫಾತಿಮಾ ರಈಸಾ

ಈ ಬಾರಿಯ ಪಿಯು ವಿಜ್ಞಾನ ಪರೀಕ್ಷೆಯಲ್ಲಿ ಶೇ.94.5 ಅಂಕ ಪಡೆದು ಅಭೂತಪೂರ್ವ ಸಾಧನೆಗೈದ ಮಂಗಳೂರಿನ ಸೈಂಟ್ ಆ್ಯನ್ಸ್ ಕಾಲೇಜಿನ ಫಾತಿಮಾ ರಈಸಾ ತನ್ನ ಬಾಲ್ಯದ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಿರಿಸುತ್ತಿದ್ದಾರೆ.

ದೊಡ್ಡವನಾದ ಮೇಲೆ ನಾನು ಡಾಕ್ಟ್ರು ಆಗುತ್ತೇನೆ ಎಂದು ಬಹುತೇಕ ಮಕ್ಕಳು ಚಿಕ್ಕಂದಿನಲ್ಲೇ ಹೇಳುವುದನ್ನು ಕೇಳುತ್ತೇವೆ. ಅದನ್ನು ಹೆತ್ತವರು ಅಷ್ಟೊಂದು ಗಂಭೀರವಾಗಿ ಪರಿಗಣಿಸಿರುವುದಿಲ್ಲ. ಆದರೆ ಮಮ್ತಾಝ್ ಹುಸೈನ್ - ಇಸ್ರತ್ ಜಹಾನ್ ದಂಪತಿಯ ಪುತ್ರಿ ಫಾತಿಮಾ ರಈಸಾ ಬಾಲ್ಯದಿಂದಲೇ ತಾನು ಡಾಕ್ಟ್ರು ಆಗಬೇಕೆಂದು ಕನಸು ಕಂಡವಳು. ಎಸ್ಸೆಸ್ಸೆಲ್ಸಿಯಲ್ಲಿ ಶೇ.89.1 ಅಂಕ ಗಳಿಸಿದ್ದ ರಈಸಾ, ಪಿಯುಸಿಯಲ್ಲಿ ವಿಜ್ಞಾನ ವಿಭಾಗವನ್ನು ಆಯ್ಕೆ ಮಾಡಿಕೊಂಡಳು. ಇತ್ತೀಚೆಗೆ ಪಿಯು ಫಲಿತಾಂಶ ಹೊರಬಿದ್ದಾಗ ತನ್ನ ಪರಿಶ್ರಮ ವ್ಯರ್ಥವಾಗಲಿಲ್ಲ ಎಂಬುದೇ ಆಕೆಗಾದ ಖುಷಿ. ಸೈಂಟ್ ಆ್ಯನ್ಸ್ ಕಾಲೇಜಿನಲ್ಲೇ ಟಾಪರ್ ಆಗಿ ಮೂಡಿಬಂದ ರಈಸಾ ಅವರಿಗೆ ಇಡೀ ಉಪನ್ಯಾಸಕ ವೃಂದ, ವಿದ್ಯಾರ್ಥಿ ಮಿತ್ರರು ಅಭಿನಂದನೆ ಸಲ್ಲಿಸಿದ್ದಾರೆ.

ರಈಸಾ ಫಾತಿಮಾ ಹುಟ್ಟಿದ್ದು ದೋಹಾ ಖತಾರ್‌ನಲ್ಲಿ. ದೋಹಾ ಖತಾರ್‌ನಲ್ಲಿಯೇ ಎಸ್ಸೆಸ್ಸೆಲ್ಸಿವರೆಗೆ ಕಲಿತ ರಈಸಾ, ಪಿಯು ಶಿಕ್ಷಣಕ್ಕಾಗಿ ಭಾರತಕ್ಕೆ ಬಂದಿದ್ದರು. ಮಂಗಳೂರಿನ ಸೈಂಟ್ ಆ್ಯನ್ಸ್ ಕಾಲೇಜಿನ ಸೈನ್ಸ್ ವಿಭಾಗವನ್ನು ಸೇರಿಕೊಂಡ ಅವರು, ಕಲಿಕೆಯಲ್ಲಿ ಮತ್ತಷ್ಟು ಪ್ರಗತಿ ಸಾಧಿಸಿದರು. ರಸಾಯನಶಾಸ್ತ್ರದಲ್ಲಿ 97, ಭೌತಶಾಸ್ತ್ರ, ಜೀವಶಾಸ್ತ್ರ ಹಾಗೂ ಗಣಿತದಲ್ಲಿ ತಲಾ 95, ಇಂಗ್ಲಿಷ್‌ನಲ್ಲಿ 92 ಮತ್ತು ಹಿಂದಿಯಲ್ಲಿ 95 ಅಂಕ ಪಡೆದು ಒಟ್ಟು 567 ಅಂಕಗಳನ್ನು ಪಡೆದಿದ್ದಾರೆ.

2010-11ರ ಅವಧಿಯಲ್ಲಿ ವಿದ್ಯಾರ್ಥಿ ನಾಯಕಿಯಾಗಿ ಆಯ್ಕೆಯಾಗಿದ್ದ ಫಾತಿಮಾ ರಈಸಾ, ಪಠ್ಯೇತರ ಚಟುವಟಿಕೆಗಳಲ್ಲೂ ಸಕ್ರಿಯವಾಗಿದ್ದರು. 2009-10ನೆ ಸಾಲಿನಲ್ಲಿ ಅವರು ಕಾಲೇಜಿನ ಅತ್ಯಂತ 'ಪ್ರತಿಭಾನ್ವಿತೆ' ವಿದ್ಯಾರ್ಥಿ ಎಂಬ ಪ್ರಶಸ್ತಿಯನ್ನೂ ಪಡೆದಿದ್ದರು. ದೋಹಾ ಕತಾರ್‌ನಲ್ಲಿ ಹೈಸ್ಕೂಲು ಶಿಕ್ಷಣ ಪಡೆಯುತ್ತಿರುವಾಗಲೇ ಹಲವು ಪ್ರಶಸ್ತಿ, ಬಹುಮಾನಗಳನ್ನು ಗಿಟ್ಟಿಸಿಕೊಂಡಿದ್ದ ರಈಸಾ, 'ಪ್ರಾಂಶುಪಾಲರ ಗೌರವಾನ್ವಿತರ ಪಟ್ಟಿ'ಯಲ್ಲಿ ಪ್ರತಿ ವರ್ಷವೂ ಸ್ಥಾನಪಡೆಯುತ್ತಿದ್ದರು. 2009ರಲ್ಲಿ ಖತಾರ್‌ನಲ್ಲಿ ಸಿಬಿಎಸ್‌ಇ ಸಿಲೆಬಸ್ ಪ್ರಕಾರ ನಡೆದ ಪರೀಕ್ಷೆಯಲ್ಲಿ ಉರ್ದು ಭಾಷೆಯಲ್ಲಿ ರಈಸಾ ಪ್ರಥಮ ಸ್ಥಾನಿಯಾಗಿ ಮೂಡಿಬಂದಿದ್ದರು. ಖತರ್‌ನಲ್ಲಿ ನಡೆದಿದ್ದ ಇಂಗ್ಲಿಷ್- ಉರ್ದು ಪ್ರಬಂಧ ಮತ್ತು ಚರ್ಚಾ ಸ್ಪರ್ಧೆಗಳಲ್ಲೂ ರಈಸಾ ಪ್ರಶಸ್ತಿ ಪಡೆದಿದ್ದರು. 2008ಲ್ಲಿ ಖತಾರ್‌ನ ವಿಜ್ಞಾನ ವಿದ್ಯಾರ್ಥಿನಿಯರಿಗಾಗಿ 'ಸಮನ್ವಯಂ' ಎಂಬ ಸಾಂಸ್ಕೃತಿಕ ಸಂಸ್ಥೆಯು ನಡೆಸಿದ ಸ್ಪರ್ಧೆಯಲ್ಲಿ ಭಾಗವಹಿಸಿ 'ಶಾಸ್ತ್ರ ಪ್ರತಿಭಾ' ಪುರಸ್ಕಾರಕ್ಕೂ ಅವರು ಭಾಜನರಾಗಿದ್ದರು.

ಲೌಕಿಕ ಶಿಕ್ಷಣವಲ್ಲದೆ, ಕುರ್‌ಆನ್ ಅಧ್ಯಯನದಲ್ಲಿಯೂ ರಈಸಾ ನಿರತರಾಗಿರುತ್ತಿದ್ದರು. ಕುರ್‌ಆನ್ ಪಾರಾಯಣ ಮಾತ್ರವಲ್ಲದೆ, ಉರ್ದು ಮತ್ತು ಇಂಗ್ಲಿಷ್ ಭಾಷೆಯಲ್ಲಿರುವ ಅನುವಾದವನ್ನೂ ಅವರು ಅಧ್ಯಯನ ಮಾಡುತ್ತಿದ್ದರು. 2004 ಮತ್ತು 2006ರಲ್ಲಿ ಖತಾರ್‌ನಲ್ಲಿ ಸೀರತುನ್ನಬಿ ಪ್ರಯುಕ್ತ ನಡೆದಿದ್ದ ಪ್ರವಾದಿ(ಸ)ರ ಕುರಿತ ಭಾಷಣ ಸ್ಪರ್ಧೆಯಲ್ಲಿ ಬಹುಮಾನ ಗಿಟ್ಟಿಸಿಕೊಂಡಿದ್ದರು.

ಮಂಗಳೂರಿನ ಕಂದಕ್ ನಿವಾಸಿ ಫಾತಿಮಾ ರಈಸಾ ಪಿಯುಸಿ ಕಲಿಯುತ್ತಿರುವುದು ಚಿಕ್ಕಪ್ಪನವರ ಗರಡಿಯಲ್ಲಿ. ತಂದೆ ತಾಯಿ ಖತಾರ್‌ನಲ್ಲಿ ನೆಲೆಸಿರುವುದರಿಂದ ಮಗಳ ಶಿಕ್ಷಣದ

54ನೇ ಪುಟಕ್ಕೆ

# ಪ್ರತಿಭಾನ್ವಿತರರು



ಬಜಪೆಯ ಹೋಲಿ ಫ್ಯಾಮಿಲಿ ಗರ್ಲ್ಸ್ ಹೈಸ್ಕೂಲ್ ವಿದ್ಯಾರ್ಥಿನಿ ಸೃಜನಾ ಅವರು ಎಸೆಸೆಲ್ಸಿ ಪರೀಕ್ಷೆಯಲ್ಲಿ ಶೇ.94.72 ಫಲಿತಾಂಶ ದಾಖಲಿಸಿದ್ದಾರೆ. ಒಟ್ಟು 592 ಅಂಕಪಡೆದಿರುವ ಅವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಅವರು ಶೇಖರ್ ಕರಂಬಾರ್ ಮತ್ತು ಸುಜಾತ ದಂಪತಿಯ ಪುತ್ರಿ.



ಬಜಪೆಯ ಹೋಲಿ ಫ್ಯಾಮಿಲಿ ಗರ್ಲ್ಸ್ ಹೈಸ್ಕೂಲ್ ವಿದ್ಯಾರ್ಥಿನಿ ದೀಕ್ಷಿತಾ ಅವರು ಎಸೆಸೆಲ್ಸಿ ಪರೀಕ್ಷೆಯಲ್ಲಿ ಶೇ.93.44 ಫಲಿತಾಂಶ ದಾಖಲಿಸಿದ್ದಾರೆ. ಒಟ್ಟು 584 ಅಂಕಪಡೆದಿರುವ ಅವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಅವರು ರಾಮಣ್ಣ ನಾಯಕ್ ಕಿನ್ನಿಪದವು ಮತ್ತು ಗೀತಾ ಆರ್. ನಾಯಕ್ ದಂಪತಿಯ ಪುತ್ರಿ.



ಬಜಪೆಯ ಹೋಲಿ ಫ್ಯಾಮಿಲಿ ಗರ್ಲ್ಸ್ ಹೈಸ್ಕೂಲ್ ವಿದ್ಯಾರ್ಥಿನಿ ಆಬಿದಾ ಬಾನು ಅವರು ಎಸೆಸೆಲ್ಸಿ ಪರೀಕ್ಷೆಯಲ್ಲಿ ಶೇ.89.28 ಫಲಿತಾಂಶ ದಾಖಲಿಸಿದ್ದಾರೆ. ಒಟ್ಟು 558 ಅಂಕಪಡೆದಿರುವ ಅವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಅವರು ಎಂ.ಇಸ್ಮಾಯೀಲ್ ಮರವೂರು ಮತ್ತು ಅಫ್ಸಾ ದಂಪತಿಯ ಪುತ್ರಿ.



ಬಜಪೆಯ ಅನ್ಸಾರ್ ಹೈಸ್ಕೂಲ್‌ನ ವಿದ್ಯಾರ್ಥಿನಿ ಶಮೀನಾ ಸನಾ ಅವರು ಎಸೆಸೆಲ್ಸಿ ಪರೀಕ್ಷೆಯಲ್ಲಿ ಶೇ.92.48 ಫಲಿತಾಂಶ ದಾಖಲಿಸಿದ್ದಾರೆ. ಒಟ್ಟು 578 ಅಂಕಪಡೆದಿರುವ ಅವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಅವರು ಅಮೀರ್ ಹುಸೈನ್ ಮತ್ತು ಸಲೀಕಾ ದಂಪತಿಯ ಪುತ್ರಿ.



ಬಜಪೆಯ ಅನ್ಸಾರ್ ಹೈಸ್ಕೂಲ್‌ನ ವಿದ್ಯಾರ್ಥಿ ಶೇಕ್ ರಿಝ್ವಾನ್ ಅಹ್ಮದ್ ಅವರು ಎಸೆಸೆಲ್ಸಿ ಪರೀಕ್ಷೆಯಲ್ಲಿ ಶೇ.84.48 ಫಲಿತಾಂಶ ದಾಖಲಿಸಿದ್ದಾರೆ. ಒಟ್ಟು 528 ಅಂಕಪಡೆದಿರುವ ಅವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಅವರು ಶೇಕ್ ಅಬ್ದುಲ್ ರಶೀದ್ ಮತ್ತು ಶಾಹಿದಾ ದಂಪತಿಯ ಪುತ್ರ.



ಬಜಪೆಯ ಅನ್ಸಾರ್ ಹೈಸ್ಕೂಲ್‌ನ ವಿದ್ಯಾರ್ಥಿ ಶೇಕ್ ಶರೂನ್ ಅವರು ಎಸೆಸೆಲ್ಸಿ ಪರೀಕ್ಷೆಯಲ್ಲಿ ಶೇ.88.48 ಫಲಿತಾಂಶ ದಾಖಲಿಸಿದ್ದಾರೆ. ಒಟ್ಟು 553 ಅಂಕಪಡೆದಿರುವ ಅವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಅವರು ಮುಹಮ್ಮದ್ ಶರೀಫ್ ಮತ್ತು ಜಮೀಲಾ ದಂಪತಿಯ ಪುತ್ರ.

## ■ ಕೇರಳ ಚುನಾವಣೆ: ಎಸ್‌ಡಿಪಿಐ ಉತ್ತಮ ಪ್ರದರ್ಶನ

ತಿರುವನಂತಪುರ: ಕೇರಳ ಅಸೆಂಬ್ಲಿ ಚುನಾವಣೆಯಲ್ಲಿ ಚೊಚ್ಚಲವಾಗಿ ಸ್ಪರ್ಧಿಸಿದ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಉತ್ತಮ ಪ್ರದರ್ಶನವನ್ನೇ ನೀಡಿದೆ. ಚುನಾವಣೆಯಲ್ಲಿ ಎಲ್‌ಡಿಎಫ್ ಮೈತ್ರಿಯ ವಿರುದ್ಧ ಕೇವಲ 4 ಸೀಟುಗಳಲ್ಲಿ ಯುಡಿಪಿಎಫ್ ಜಯಿಸಿದ್ದು, ಕೆಲವು ಕ್ಷೇತ್ರಗಳಲ್ಲಿ ಎಸ್‌ಡಿಪಿಐ ನಿರ್ಣಾಯಕ ಪಾತ್ರವನ್ನು ವಹಿಸಿದೆ.

ಎರಡು ಕ್ಷೇತ್ರಗಳಲ್ಲಿ ಎಸ್‌ಡಿಪಿಐ 5000ಕ್ಕೂ ಅಧಿಕ ಮತಗಳನ್ನು ಪಡೆದಿದೆ. ಕೊಲ್ಲಂ ಜಿಲ್ಲೆಯ ಕರುಂಗಲ್ಪಾಡಿ ಕ್ಷೇತ್ರದಿಂದ ಸ್ಪರ್ಧಿಸಿದ ನಾಸಿರುದ್ದೀನ್ ಎಲಮರಮ್ 7,645 ಮತಗಳನ್ನು ಪಡೆದಿದ್ದಾರೆ. ಅದೇ ವೇಳೆ, ಇಡುಕ್ಕಿ ಜಿಲ್ಲೆಯ ತೋಡುಪ್ಪುಝುದಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಎಂ.ಎ.ನಜೀಬ್ 5,386 ಮತಗಳನ್ನು ಗಳಿಸಿದ್ದಾರೆ.

ಮೊದಲ ಬಾರಿಗೆ ಅಸೆಂಬ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿರುವ ಎಸ್‌ಡಿಪಿಐ ರಾಜ್ಯದಲ್ಲಿ ಒಟ್ಟು ಒಂದೂವರೆ ಲಕ್ಷಕ್ಕೂ ಅಧಿಕ ಮತಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ.

ಮಂಜೇಶ್ವರ ಹಾಗೂ ನೆಮಾಮ್ ಕ್ಷೇತ್ರದಲ್ಲಿ ಪಕ್ಷವು ಬಿಜೆಪಿಯನ್ನು ಸೋಲಿಸುವುದಕ್ಕಾಗಿ ಕ್ರಮವಾಗಿ ಯುಡಿಎಫ್ ಮತ್ತು ಎಲ್‌ಡಿಎಫ್‌ಅನ್ನು ಬೆಂಬಲಿಸಿದ್ದು, ನಿರೀಕ್ಷಿತ ಫಲಿತಾಂಶವನ್ನೇ ಪಡೆದಿದೆ.

ಮಂಜೇಶ್ವರದಲ್ಲಿ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಮತ್ತು ನೆಮಮ್‌ನಲ್ಲಿ ಬಿಜೆಪಿ ಅಭ್ಯರ್ಥಿ ರಾಜ್ ಗೋಪಾಲ್ ಎಸ್‌ಡಿಪಿಐ ಬೆಂಬಲಿತ ಪಕ್ಷಗಳಿಂದ ಸೋಲಿಸಲ್ಪಟ್ಟಿದ್ದಾರೆ.

ಮೊದಲ ಅಸೆಂಬ್ಲಿಯಲ್ಲೇ ಈ ಮಟ್ಟದಲ್ಲಿ ಜನ ಬೆಂಬಲ ಪಡೆದಿರುವ ಎಸ್‌ಡಿಪಿಐ ಪಕ್ಷದ ಕಾರ್ಯಕರ್ತರಲ್ಲಿ ಹುರುಪು ತುಂಬಿದೆ ಮತ್ತು ಇತರ ಪಕ್ಷಗಳಲ್ಲಿ ಆತಂಕವನ್ನು ಸೃಷ್ಟಿಸಿದೆ.

## ■ ಮಂಗಳೂರಿನಲ್ಲಿ ಸ್ವಚ್ಛತಾ ಕಾರ್ಯಕ್ರಮ



ಮಂಗಳೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಮುಲ್ಕಿ-ಮೂಡಬಿದ್ರೆ ವಿಧಾನಸಭಾ ಕ್ಷೇತ್ರದ ಮೂಡುಶೆಡ್ಡೆ ಗ್ರಾಮ ಸಮಿತಿ ವತಿಯಿಂದ ಮೂಡುಶೆಡ್ಡೆ ಪಂಚಾಯತ್ ವ್ಯಾಪ್ತಿಗೊಳಪಟ್ಟ ಪ್ರದೇಶಗಳಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಎಸ್‌ಡಿಪಿಐ ಮೂಲ್ಕಿ-ಮೂಡಬಿದ್ರೆ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಇಸ್ಮಾಯೀಲ್ ಎಂಜಿನಿಯರ್ ನೆರವೇರಿಸಿದರು.

ಈ ಸಂದರ್ಭ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ನಿಯಾಝ್ ಅಹ್ಮದ್, ಮೂಲ್ಕಿ-ವಿಧಾನಸಭಾ ಕ್ಷೇತ್ರ ಸಮಿತಿ ಸದಸ್ಯ ಮುಹಮ್ಮದ್ ಇಲ್ಯಾಸ್ ಎದುರುಪದವು, ಪಾಪ್ಯುಲರ್ ಫ್ರಂಟ್ ಮಂಗಳೂರು ವಲಯಾಧ್ಯಕ್ಷ ಸೈಫುಲ್ಲಾ, ವಾಮಂಜೂರು ಏರಿಯಾ ಅಧ್ಯಕ್ಷ ಅಶ್ರಫ್ ಮೂಡುಶೆಡ್ಡೆ ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

## ■ ಹಾಸನ: ಪೆಟ್ರೋಲ್ ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ

ಹಾಸನ: ಪೆಟ್ರೋಲ್ ಬೆಲೆಯೇರಿಕೆಯನ್ನು ವಿರೋಧಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಸೋಮವಾರ ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿತು.

ಪ್ರತಿಭಟನಕಾರರು ತಮ್ಮ ದ್ವಿಚಕ್ರ ವಾಹನಗಳನ್ನು ಹೇಮಾವತಿ ಸರ್ಕಲ್‌ನಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ತಳ್ಳಿಕೊಂಡು ಹೋದರು.




ಎಸ್‌ಡಿಪಿಐ ಹಾಸನ ಜಿಲ್ಲಾಧ್ಯಕ್ಷ ಅಮೀರ್ ಜಾನ್, ಪ್ರಧಾನ ಕಾರ್ಯದರ್ಶಿ ಸೂಫಿ ಇಬ್ರಾಹೀಂ, ಅಸೆಂಬ್ಲಿ ಅಧ್ಯಕ್ಷ ಮುಹಮ್ಮದ್ ಸಾದಿಕ್ ಮತ್ತು ಇತರ ನಾಯಕರಾದ ಆರಿಫ್, ಹಿದಾಯತುಲ್ಲಾ ಹಾಗೂ ಫಿರೋಝ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ■ಇಐಎಫ್‌ಎಫ್‌ನಿಂದ ಮಹಿಳೆರಿಗಾಗಿ ವಿಚಾರ ಸಂಕಿರಣ



ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿರುವ ಮಹಿಳೆಯರು ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಮಕ್ಕಳು.

ಅಜ್ಮಾನ್: ಅನಿವಾಸಿ ಭಾರತೀಯರ ಸಾಮಾಜಿಕ ಸಂಘಟನೆಯಾದ ಎಮಿರೇಟ್ಸ್ ಇಂಡಿಯಾ ಫ್ರೆಟರ್ನಿಟಿ ಫಾರಂನ ವತಿಯಿಂದ ಇತ್ತೀಚೆಗೆ ಅಜ್ಮಾನ್‌ನ ಗಲ್ಫ್ ಮೆಡಿಕಲ್ ಯುನಿವರ್ಸಿಟಿ ಆಡಿಟೋರಿಯಂನಲ್ಲಿ ಮಹಿಳೆಯರಿಗಾಗಿ 'ಆರೋಗ್ಯವಂತ ಮಹಿಳೆ-ಆರೋಗ್ಯವಂತ ಕುಟುಂಬ' ಎಂಬ ವಿಷಯದಲ್ಲಿ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಪವಿತ್ರ ಕುರ್‌ಆನ್ ಪಠಣದೊಂದಿಗೆ ಪ್ರಾರಂಭಿಸಲಾಯಿತು. ನಂತರ ಇಐಎಫ್‌ಎಫ್‌ನ ಕಿರು ಪರಿಚಯ ಮತ್ತು ರಕ್ತದಾನ ಶಿಬಿರ, ಶುಚಿತ್ವ ದಿನ ಹಾಗೂ ಸಂಘಟನೆಯ ಇತರ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಲಾಯಿತು.

ಸ್ತ್ರೀರೋಗ ತಜ್ಞೆ ಡಾ। ವಜೀಹಾ ಅಜ್ಮಲ್ ಮಹಿಳೆಯರ ಹಲವು ಆರೋಗ್ಯ ಸಮಸ್ಯೆಗಳ ಕುರಿತು ಹಾಗೂ ಅದಕ್ಕೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಯ ಕುರಿತು ಉಪಯುಕ್ತ ಮಾಹಿತಿ ನೀಡಿದರು. ಈ ಸಂದರ್ಭ ಪ್ರಶ್ನೋತ್ತರ ಅವಧಿಯನ್ನೂ ನಿಗದಿಪಡಿಸಲಾಗಿತ್ತು.

ಡಾ। ಸಬೀನಾ ಮುಸ್ರತ್ ಮತ್ತು ಇಬ್ಬರು ದಾದಿಯರು ಮಹಿಳೆಯರ ಕೌನ್ಸೆಲಿಂಗ್ ನಡೆಸಿದರು. ರಕ್ತದೊತ್ತಡ ಹಾಗೂ ರಕ್ತ ಪರೀಕ್ಷೆಯನ್ನು ಉಚಿತವಾಗಿ ನಡೆಸಲಾಯಿತು. ಎಲ್ಲಾ ಅತಿಥಿಗಳನ್ನು ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. ಇದೇ ವೇಳೆ ಮಕ್ಕಳಿಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

# ■ಕಾಂಗ್ರೆಸ್ ಮುಸ್ಲಿಮ್ ನಾಯಕರನ್ನು ವಂಚಿಸಿದೆ: ಹನೀಫ್ ಖಾನ್ ಕೊಡಾಜೆ



ಮಂಗಳೂರು: ಎಸ್‌ಡಿಪಿಐ ಕೇವಲ ಮುಸ್ಲಿಮರಿಗಾಗಿರುವ ಪಕ್ಷವಲ್ಲ. ದಲಿತರು, ಮುಸ್ಲಿಮರು, ಕ್ರೈಸ್ತರು ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಇದು ಶ್ರಮಿಸುತ್ತಿದೆ ಎಂದು ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹನೀಫ್ ಖಾನ್ ಕೊಡಾಜೆ ಹೇಳಿದ್ದಾರೆ. ಅವರು ಕೃಷ್ಣಾಪುರದಲ್ಲಿ ಎಸ್‌ಡಿಪಿಐ ಕಚೇರಿ ಉದ್ಘಾಟನಾ ಸಮಾರಂಭದ ನಂತರ ಚೊಕ್ಕಬೆಟ್ಟುವಿನ ಎಂಜೆಎಂ ಹಾಲ್‌ನಲ್ಲಿ ನಡೆದ ಸಭಾ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಕಾಂಗ್ರೆಸ್ ಮುಸ್ಲಿಮ್ ನಾಯಕರನ್ನು ಮೋಸ ಮಾಡುತ್ತಿದೆ. ಎಸ್‌ಡಿಪಿಐ ಬಿಜೆಪಿಯಿಂದ ಲಂಚ ಸ್ವೀಕರಿಸಿದೆಯೆಂಬ ಸುಳ್ಳನ್ನು ಅದು ಹರಡುತ್ತಿದೆ. ಈ ಬಗ್ಗೆ ಮುಕ್ತ ಚರ್ಚೆಗೆ ಎಸ್‌ಡಿಪಿಐ ಸಿದ್ಧವಿದ್ದು ಕಾಂಗ್ರೆಸ್ ಮುಂದೆ ಬರಲಿ ಎಂದವರು ಸವಾಲೆಸೆದರು.

ಎಸ್‌ಡಿಪಿಐ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಜಲೀಲ್ ಕೃಷ್ಣಾಪುರ ಪಕ್ಷದ ಕಚೇರಿಯನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಅಂಗವಾಗಿ ಚೊಕ್ಕಬೆಟ್ಟುವಿನಿಂದ ಕಾಟಿಪಳ್ಳವರೆಗೆ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿತ್ತು.

ಎಸ್‌ಡಿಪಿಐ ರಾಜ್ಯ ಕೋಶಾಧಿಕಾರಿ ಅಥಾಉಲ್ಲಾ ಸುರತ್ಕಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ, ಜಿಲ್ಲಾ ಸಮಿತಿ ಸದಸ್ಯ ಅಬೂಬಕರ್ ಕುಳಾಯಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ■ ಎಸ್‌ಡಿಪಿಐಯಿಂದ ಬಡ ಕುಟುಂಬಕ್ಕೆ ನೆರವು



ಬೆಳ್ತಂಗಡಿ: ಬೆಂಕಿ ಆಕಸ್ಮಿಕದಲ್ಲಿ ಮನೆ ಹಾನಿಗೊಂಡ ದೇವರಾಜ ಪೂಜಾರಿಯವರಿಗೆ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಬೆಳ್ತಂಗಡಿ ನೆರವು ನೀಡಿದೆ.

ದೇವರಾಜ್‌ರ ಮನೆಗೆ ಭೇಟಿಯಿತ್ತ ಎಸ್‌ಡಿಪಿಐ ಕಾರ್ಯಕರ್ತರು ಒಂದು ತಿಂಗಳಿಗಾಗುವ ಆಹಾರ ಧಾನ್ಯಗಳನ್ನು ನೀಡಿದರು.

ಎಸ್‌ಡಿಪಿಐ ಬೆಳ್ತಂಗಡಿ ಕ್ಷೇತ್ರದ ಅಧ್ಯಕ್ಷ ಅಕ್ಬರ್ ಬೆಳ್ತಂಗಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಕಾರ್ಯದರ್ಶಿ ಅನೀಸ್ ಗೇರುಕಟ್ಟೆ, ಸಮಿತಿ ಸದಸ್ಯ ಉಸ್ಮಾನ್ ವೇಣೂರು, ಹೈದರ್ ಅಮ್ಮೆ, ಝಿಯಾಹುಲ್ ಹಕ್, ಶಬೀರ್ ಬೆಳ್ತಂಗಡಿ, ಕಬೀರ್ ಕೊಟ್ರಾಡಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ ಮುಲ್ಕಿ: ವೈದ್ಯಕೀಯ ತಪಾಸಣೆ, ರಕ್ತದಾನ ಶಿಬಿರ



ಮಂಗಳೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ವತಿಯಿಂದ ಇತ್ತೀಚೆಗೆ ಮುಲ್ಕಿಯ ಕಾರ್ನಾಡ್‌ನ ಅಮೃತ ಪಾಲಿ ಕ್ಲಿನಿಕ್‌ನಲ್ಲಿ ವೈದ್ಯಕೀಯ ತಪಾಸಣೆ ಹಾಗೂ ರಕ್ತ ದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಬಿರದ ಆರಂಭದಲ್ಲಿ ಸಭಾ ಕಾರ್ಯಕ್ರಮ ನಡೆಸಲಾಯಿತು. ಡಾ| ಎಫ್.ಇ.ಎ.ರಾಡ್ರಿಗಸ್, ಎಸ್‌ಡಿಪಿಐ ಮೂಡಬಿದ್ರೆ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಇಸ್ಮಾಯೀಲ್ ಎಂಜಿನಿಯರ್, ದಲಿತ ಸಂಘರ್ಷ ಸಮಿತಿ ತಾಲೂಕು ಸಂಚಾಲಕ ಇಶು, ಜೋಕಟ್ಟೆ ಗ್ರಾಮ ಪಂಚಾಯತ್ ಉಪಾಧ್ಯಕ್ಷ ಶೇಕುಞ್ಞಿ, ಮೂಲ್ಕಿ ಮೂಡಬಿದ್ರೆ ಕ್ಷೇತ್ರ ಸಮಿತಿ ಸದಸ್ಯೆ ಶಾಂತಿ ಕುವೆಲ್ಲೊ, ಅಮೃತ ಪಾಲಿ ಕ್ಲಿನಿಕ್‌ನ ಅಧ್ಯಕ್ಷ ನಝೀರ್ ಅಹ್ಮದ್, ಕೆ.ಎಸ್.ಹೆಗ್ಡೆ ಆಸ್ಪತ್ರೆಯ ವೆಂಕಟ್ ರಾಜೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಎಸ್‌ಡಿಪಿಐ ದ.ಕ ಜಿಲ್ಲಾಧ್ಯಕ್ಷ ಜಲೀಲ್ ಕೃಷ್ಣಾಪುರ ಶಿಬಿರದಲ್ಲಿ ರಕ್ತ ದಾನ ಮಾಡಿದರು.

## ■ ಕಲಬುರ್ಗಿ: ನೀರಿಗಾಗಿ ರಸ್ತೆ ತಡೆ

ಕಲಬುರ್ಗಿ: ಮಿಲ್ಲತ್ ನಗರ ಬಡಾವಣೆಗೆ ನೀರು ಸರಬರಾಜು ಮಾಡಬೇಕೆಂದು ಆಗ್ರಹಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಕಾರ್ಯಕರ್ತರು ಕಲಬುರ್ಗಿಯಲ್ಲಿ ರಸ್ತೆ ತಡೆ ನಡೆಸಿದರು.




'ನೀರಿಗಾಗಿ ಮಿಲ್ಲತ್ ನಗರ ನಿವಾಸಿಗಳು 1 ಕಿ.ಮೀ ನಡೆಯಬೇಕು. ಈ ಹಿಂದೆ ಹಲವು ಬಾರಿ ಮನವಿ ಸಲ್ಲಿಸಿದರೂ ಮಹಾನಗರ ಪಾಲಿಕೆ ಈ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಅದಕ್ಕಾಗಿ ನಾವು ರಸ್ತೆ ತಡೆ ನಡೆಸಬೇಕಾಯಿತು' ಎಂದು ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಸಯ್ಯದ್ ದಸ್ತಗಿರಿ ತಿಳಿಸಿದರು.

ಅಂಜದ ಗೋಲಾ, ಆಬಿದಾ ಹುಸೈನ್ ಮತ್ತು ಮಹಿಳೆಯರನ್ನೊಳಗೊಂಡಂತೆ ಬಡಾವಣೆಯ ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

### ಕ್ವಿಝ್ ಟೈಮ್-8ರ ಉತ್ತರಗಳು

| | |
|---|---|
| 1.ಇಬ್ರಾಹೀಂ ಲೋದಿ | 6.ಸ್ಪೇನ್ |
| 2.ಮೊದಲನೇ ಪುಲಕೇಶಿ | 7.ಮೂತ್ರಪಿಂಡ |
| 3.ಇಲಿಯಡ್ | 8.ಕಳಿಂಗ |
| 4.ಹಿಟ್ಲರ್ | 9.ಮಹೇಶ್ ಭೂಪತಿ |
| 5.ಇಕೆಬಾನ್ | 10.ಬೆಂಗಳೂರು |

## ■ ಮೈಸೂರ್: ನೂತನ ಮೇಯರ್‌ಗೆ ಪಾಪ್ಯುಲರ್ ಫ್ರಂಟ್‌ನಿಂದ ಅಭಿನಂದನೆ



ಮೈಸೂರು: ಮೈಸೂರು ಮಹಾನಗರ ಪಾಲಿಕೆಯ ನೂತನ ಮೇಯರ್ ಪುಷ್ಪಲತಾ ಬಿ ಚಿಕ್ಕಣ್ಣ ಹಾಗೂ ವಾರ್ಡ್ ನಂಬರ್ 40ರ ಕಾರ್ಪೊರೇಟರ್ ರಿಹಾನಾರನ್ನು ಸಂಘಟನೆಯ ಜಿಲ್ಲಾ ಕಚೇರಿಯಲ್ಲಿ ಇತ್ತೀಚೆಗೆ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪಾಪ್ಯುಲರ್ ಫ್ರಂಟ್ ಜಿಲ್ಲಾಧ್ಯಕ್ಷ ಅತಾವುಲ್ಲಾ ನಗರದ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಆಗ್ರಹಿಸಿದರು.

ಪಾಪ್ಯುಲರ್ ಫ್ರಂಟ್ ಪ್ರಧಾನ ಕಾರ್ಯದರ್ಶಿ ಆಝಮ್ ಪಾಶ, ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಟಿ.ಎಂ.ಹುಸೈನ್, ಕಾರ್ಯದರ್ಶಿ ಮತೀನ್ ಬೇಗ್, ಚಾಮರಾಜ ಅಸೆಂಬ್ಲಿ ಅಧ್ಯಕ್ಷ ತಬ್ರೇಝ್ ಸೇಟ್, 39ನೆ ವಾರ್ಡ್ ಅಧ್ಯಕ್ಷ ಇಕ್ಬಾಲ್ ಪಾಶ, ಟಿಪ್ಪು ಬ್ಲಾಕ್ ಅಧ್ಯಕ್ಷ ಸಯ್ಯದ್ ಅಕ್ರಮ್ ಪಾಶ ಮತ್ತು ಪಾಪ್ಯುಲರ್ ಫ್ರಂಟ್ ಹಾಗೂ ಎಸ್‌ಡಿಪಿಐಯ ಇತರ ಜಿಲ್ಲಾ ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ ಪುತ್ತೂರಿನಲ್ಲಿ ರಕ್ತದಾನ ಶಿಬಿರ

ಪುತ್ತೂರು: ಮಂಗಳೂರಿನ ವೆನ್‌ಲಾಕ್ ಬ್ಲಡ್ ಬ್ಯಾಂಕ್ ಸಹಯೋಗದೊಂದಿಗೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕುಂಬ್ರ ವಲಯ ವತಿಯಿಂದ ಇತ್ತೀಚೆಗೆ ಕಾವಿನ ಬುಶ್ರಾ ವಿದ್ಯಾ ಸಂಸ್ಥೆಯಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಯಿತು.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಬಶೀರ್ ದಾರಿಮಿ, ಇಸ್ಲಾಮಿನಲ್ಲಿ ರಕ್ತದಾನಕ್ಕೆ ಬಹಳ ಮಹತ್ವವಿದೆ, ಇಂದಿನ ಸಮಾಜದಲ್ಲಿ ಇಂತಹ ಕಾರ್‍ಯಕ್ರಮ ಅತ್ಯಂತ ಆವಶ್ಯಕವಾದುದು ಎಂದರು.

ಕಾರ‍್ಯಕ್ರಮದಲ್ಲಿ 30 ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರು.

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಪುತ್ತೂರು ಜಿಲ್ಲಾಧ್ಯಕ್ಷ ಕೆ.ಎ.ಸಿದೀಕ್. ಕುಂಬ್ರ ವಲಯ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಅಧ್ಯಕ್ಷ ರಿಝ್ವಾನ್ ಕೌಡಿಚಾರ್, ಬುಶ್ರಾ ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಅಬ್ದುಲ್ ಅಝೀಝ್ ಕಾವು, ಪುತ್ತೂರು ತಾಲೂಕು ಎಸ್.ಡಿ.ಪಿ.ಐ ಅಧ್ಯಕ್ಷ ಹಮೀದ್ ಸಾಲ್ಮರ, ವೆನ್ಲಾಕ್ ಆಸ್ಪತ್ರೆಯ ವೈದ್ಯ ಡಾ| ಬಿಪಿನೇಶ್, ಅರಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಇಕ್ಬಾಲ್ ಹುಸೈನ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕುಂಬ್ರ ವಲಯ ಕಾರ್ಯದರ್ಶಿ ಎಮ್.ಎಸ್.ರಫೀಕ್ ಸವಣೂರು ಸ್ವಾಗತಿಸಿ, ಸಂಶುದ್ದೀನ್ ಈಶ್ವರಮಂಗಲ ವಂದಿಸಿದರು. ಅನ್ಸಾರ್ ಶೇಖಮಲೆ ಕಾರ್ಯಕ್ರಮ ನಿರೂಪಿಸಿದರು.

## ■ 'ಯಶಸ್ವಿ ಇಸ್ಲಾಮೀ ಜೀವನ' ಕಾರ್ಯಕ್ರಮ

ಉಡುಪಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಇತ್ತೀಚೆಗೆ ಇಲ್ಲಿನ ಉಚ್ಚಿಲದ ಬೆಳಪುವಿನಲ್ಲಿ ಯಸಸ್ವಿ ಇಸ್ಲಾಮೀ ಜೀವನ ಎಂಬ ವಿಷಯದ ಮೇಲೆ ಸಾರ್ವಜನಿಕ ಕಾರ್ಯಕ್ರಮವೊಂದನ್ನು ಆಯೋಜಿಸಲಾಯಿತು.

ಸಯ್ಯದ್ ಮುಹಮ್ಮದ್ ಯುಎನ್‌ಎಸ್ ತಂಙಳ್‌ರವರು ದುಆದೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮೌಲಾನಾ ಝುಫ್ರುಲ್ಲಾ ಖಾನ್ ಕಿರಾಅತ್ ಪಠಿಸಿದರು.



ಪಾಪ್ಯುಲರ್ ಫ್ರಂಟ್ ರಾಜ್ಯಾಧ್ಯಕ್ಷ ಇಲ್ಯಾಸ್ ಮುಹಮ್ಮದ್ ತುಂಬೆ ಕುಟುಂಬ ಪುನರ್‌ನಿರ್ಮಾಣ ಎಂಬ ವಿಷಯದ ಮೇಲೆ ಮಾತನಾಡಿದರು.

ಎಸ್‌ಡಿಪಿಐ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಅನ್ವರ್ ಸಾದಾತ್, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಮೀರ್ ಹಂಝ, ಸಯ್ಯದ್ ಅರಬಿಕ್ ಜುಮ್ಮಾ ಮಸೀದಿ ಅಧ್ಯಕ್ಷ ಅಬ್ದುಲ್ ರಝಾಕ್, ಉಡುಪಿ ಜಿಲ್ಲಾ ಪಾಪ್ಯುಲರ್ ಫ್ರಂಟ್ ಅಧ್ಯಕ್ಷ ನಿಯಾಮತ್ ಅಲಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ರಫೀಕ್ ಮಜೂರು ವಂದಿಸಿದರೆ, ಹನೀಫ್ ಮೂಳೂರು ಕಾರ್ಯಕ್ರಮ ನಿರೂಪಿಸಿದರು.

## ತುಮಕೂರು: ಎಸ್‌ಡಿಪಿಐಯಿಂದ ಇಂಧನ ಬೆಲೆ ಏರಿಕೆಯ ವಿರುದ್ಧ ಪ್ರತಿಭಟನೆ



ತುಮಕೂರು: ಕೇಂದ್ರ ಸರಕಾರ ಇಂಧನ ಬೆಲೆಯೇರಿಸಿರುವುದನ್ನು ವಿರೋಧಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಇತ್ತೀಚೆಗೆ ಇಲ್ಲಿನ ಟೌನ್‌ಹಾಲ್ ವೃತ್ತದ ಬಳಿ ಧರಣಿ ನಡೆಸಿತು.

ಜಿಲ್ಲಾಧ್ಯಕ್ಷ ಬಶೀರ್ ಅಹ್ಮದ್ ಖಾನ್, ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ಸಾಜಿದ್ ಜಮೀಲ್, ಕಾರ್ಯದರ್ಶಿಗಳಾದ ಜೈ ಕುಮಾರ್ ಮತ್ತು ರಿಹಾನ್ ಖಾನ್ ಹಾಗೂ ಸಮಿತಿ ಸದಸ್ಯರಾದ ಆಸಿಫುಲ್ಲಾ ಶರೀಫ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಕಣ್ಣೂರಿನಲ್ಲಿ ಸ್ವಚ್ಛತಾ ಕಾರ್ಯಕ್ರಮ




ಮಂಗಳೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವತಿಯಿಂದ ರವಿವಾರ ಕಣ್ಣೂರು ನಗರದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸ್ವಚ್ಛತಾ ಕಾರ್ಯಕ್ರಮದ ನೇತೃತ್ವವನ್ನು ಎಸ್‌ಡಿಪಿಐ ದಕ್ಷಿಣ ವಿಧಾನಸಭಾಕ್ಷೇತ್ರ್ದ ಅಧ್ಯಕ್ಷ ಅಬೂಬಕ್ಕರ್ ಸಿದ್ದೀಕ್ ಕೆ. ವಹಿಸಿದ್ದರು.

ಸುಮಾರು 50ಕ್ಕೂ ಅಧಿಕ ಕಾರ್ಯಕರ್ತರು ಹಾಗೂ ಮಂಗಳೂರು ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

48ನೇ ಪುಟದಿಂದ

## ಬಾಲ್ಯದ ಕನಸು ನನಸಾಗುವತ್ತ

ಜವಾಬ್ದಾರಿಯನ್ನು ಚಿಕ್ಕಪ್ಪನಿಗೆ ವಹಿಸಿಕೊಡಲಾಗಿತ್ತು. ತಂದೆ ಹುಸೈನ್‌ರವರು ಇಲೆಕ್ಟ್ರಿಕಲ್ ಇಂಜಿನಿಯರ್, ತಾಯಿ ಇಸ್ರತ್ ಪಿಯುಸಿ ಸೈನ್ಸ್ ಶಿಕ್ಷಣವನ್ನು ಹೊಂದಿದ್ದಾರೆ. ಮನೆಯಲ್ಲಿರುವ ಶೈಕ್ಷಣಿಕ ವಾತಾವರಣವನ್ನು ಚೆನ್ನಾಗಿ ಬಳಸಿಕೊಂಡ ಫಾತಿಮಾ ರಈಸಾ, ಹೆತ್ತವರ ನಿರೀಕ್ಷೆಯನ್ನು ಹುಸಿ ಮಾಡಲಿಲ್ಲ. ಫಾತಿಮಾ ರಈಸಾ ಅವರನ್ನು ಪತ್ರಿಕೆ ಮಾತನಾಡಿಸಿದಾಗ ಅವರು ತಮ್ಮ ಅನುಭವವನ್ನು ಈ ರೀತಿ ಹಂಚಿಕೊಂಡರು;

''ಮೊದಲಿನಿಂದಲೂ ನನಗೆ ವಿಜ್ಞಾನ ಎಂದರೆ ಇಷ್ಟದ ಸಬ್ಜೆಕ್ಟ್. ಬಾಲ್ಯದಿಂದಲೂ ಡಾಕ್ಟ್ರ ಆಗಬೇಕು ಎಂದು ಕನಸು ಕಂಡಿದ್ದೆ. ಎಸ್ಸೆಸ್ಸೆಲ್ಸಿ ನಂತರ ಆ ಕನಸನ್ನು ಗುರಿಯಾಗಿಸಿಕೊಂಡೆ. ಪ್ರಥಮ ಪಿಯುಸಿಯಲ್ಲೂ ಕಾಲೇಜಿಗೆ ನಾನೇ ಟಾಪರ್ ಆಗಿದ್ದೆ. ಅಂತಿಮ ಪರೀಕ್ಷೆಯಲ್ಲಿ ಚೆನ್ನಾಗಿ ಅಂಕ ತೆಗೆಯಬೇಕು ಎಂದು ನಿರ್ಧರಿಸಿ, ದಿನದಲ್ಲಿ 3-4 ಗಂಟೆ ಓದುತ್ತಿದ್ದೆ. ಪರೀಕ್ಷೆ ಹತ್ತಿರ ಬರುತ್ತಿದ್ದಾಗ ದಿನದ ಹೆಚ್ಚಿನ ಸಮಯವನ್ನು ಓದಿಗಾಗಿ ವಿನಿಯೋಗಿಸುತ್ತಿದ್ದೆ. ಪರಿಶ್ರಮ ಫಲ ಕೊಟ್ಟಿತು, ಮನೆಯಲ್ಲಿದ್ದುಕೊಂಡೇ ಇಂಟರ್‌ನೆಟ್‌ನಲ್ಲಿ ಫಲಿತಾಂಶ ವೀಕ್ಷಿಸಿದಾಗ ಮಾರ್ಕ್ಸ್ ನೋಡಿ ತುಂಬಾ ಖುಷಿಯಾಯಿತು. ಮರುದಿನ ಕಾಲೇಜಿಗೆ ಹೋದಾಗ ಉಪನ್ಯಾಸಕರಾದ ರೂಪಾ, ಝೀನಾ, ಪವಿತ್ರಾ, ಗೀತಾಂಜಲಿ ಮುಂತಾದವರೆಲ್ಲರೂ ಅಭಿನಂದನೆ ಸಲ್ಲಿಸಿದರು. ನನ್ನ ಸಂತೋಷಕ್ಕೆ ಮಿತಿಯೇ ಇರಲಿಲ್ಲ.''

''ನನ್ನ ಈ ಸಾಧನೆಗೆ ಹೆತ್ತವರು, ಪೋಷಕರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿ ಮಿತ್ರರು ನೆರವಾಗಿದ್ದಾರೆ. ಅವರ ಪ್ರೋತ್ಸಾಹ, ಬೆಂಬಲ, ಸಹವಾಸ ನನಗೆ ನೆರವಾಯಿತು''.

''ನನಗೆ ಟಿವಿ ವೀಕ್ಷಣೆಯ ಹವ್ಯಾಸವಿಲ್ಲ. ಆಗೊಮ್ಮೆ ಈಗೊಮ್ಮೆ ಟಿವಿ ವೀಕ್ಷಿಸುತ್ತೇನೆ. ಆದರೆ ಸೀರಿಯಲ್‌ಗಳ ಹಿಂದೆ ಇದುವರೆಗೆ ಬಿದ್ದಿಲ್ಲ. ಈಗ ನಾನು ಸಿಇಟಿ ಫಲಿತಾಂಶಕ್ಕಾಗಿ ಕಾಯುತ್ತಿದ್ದೇನೆ''

''ನಮಗೆ ಯಾವುದರಲ್ಲಿ ಆಸಕ್ತಿ ಇದೆಯೋ ಅದೇ ವಿಷಯದಲ್ಲಿ ಕಲಿಕೆ ಮುಂದುವರಿಸಬೇಕು. ಮತ್ತು ನಮ್ಮ ಕಲಿಕೆಗೆ ಒಂದು ನಿರ್ದಿಷ್ಟ ಗುರಿ ಇರಬೇಕು- ಇದು ನಾನು ಕಂಡುಕೊಂಡ ಸಂಗತಿಯಾಗಿದೆ''.

ಫಾತಿಮಾ ರಈಸಾ ಕಂಡ ಕನಸು ನನಸಾಗಲಿ; ಅವರ ಉಜ್ವಲ ಭವಿಷ್ಯಕ್ಕಾಗಿ ಪ್ರಸ್ತುತ ಪಾಕ್ಷಿಕ ಹಾರೈಸುತ್ತದೆ.

## ■ಒರಿಸ್ಸಾ: ದಲಿತ ಮಕ್ಕಳ ಪುಸ್ತಕಗಳು 'ಅಸ್ಪೃಶ್ಯ'



ಕೇಂದ್ರಪಡ (ಒರಿಸ್ಸಾ): ಜಗತ್ಸಿಂಗ್ಪುರ ಜಿಲ್ಲೆಯಲ್ಲಿರುವ ಶಾಲೆಯೊಂದರಲ್ಲಿ ದಲಿತ ಮಕ್ಕಳಿಗೆ ತಾವೇನು ತಪ್ಪು ಮಾಡಿದ್ದೇವೆಂಬುದು ಅರ್ಥವಾಗುವುದಿಲ್ಲ. ಯಾಕೆಂದರೆ ಇಲಿ ಶಿಕ್ಷಕರು ದಲಿತ ಮಕ್ಕಳ ನೋಟ್ ಬುಕ್‌ಗಳನ್ನು ಪರಿಶೀಲಿಸುವುದಿಲ್ಲ.

ಕುಟಪಾಲಲದ ಶಾಲೆಯೊಂದರಲ್ಲಿ ನಾಲ್ಕನೆ ತರಗತಿಯಲ್ಲಿ ಕಲಿಯುತ್ತಿರುವ ಬಿಜಯ ಮಲಿಕ್ ಹೇಳುವಂತೆ, ''ನಮ್ಮನ್ನು ಅಸ್ಪೃಶ್ಯರಾಗಿ ಪರಿಗಣಿಸಲಾಗುತ್ತದೆ. ಶಿಕ್ಷಕರು ನಮ್ಮ ಪುಸ್ತಕಗಳನ್ನು ಸ್ಪರ್ಶಿಸಲು ನಿರಾಕರಿಸುತ್ತಾರೆ. ನಮ್ಮ ಹೋಮ್ ವರ್ಕ್‌ಗಳನ್ನು ತಿದ್ದಲಾಗುವುದಿಲ್ಲ. ನಾವು ನಮ್ಮ ಶಿಕ್ಷಕರನ್ನು ತಪ್ಪಿಯೂ ಸ್ಪರ್ಶಿಸಿದರೆ ಅವರು ನಮ್ಮನ್ನು ಗದರಿಸುತ್ತಾರೆ''.

ಶಾಲೆಯಲ್ಲಿರುವ ಸುಮಾರು 40ರಷ್ಟು ದಲಿತ ವಿದ್ಯಾರ್ಥಿಗಳನ್ನು ಹೆಕ್ಕಿ ತೆಗೆದು, ಅವರಿಂದ ಕ್ಲಾಸ್ ರೂಮ್ ಹಾಗೂ ಶೌಚಾಲಯಗಳನ್ನು ಸ್ವಚ್ಛಪಡಿಸಲಾಗುತ್ತದೆ.

''ನಾನು ಶಾಲೆಯಲ್ಲಿ ಟಾಯ್ಲೆಟ್‌ಗಳನ್ನು ಸ್ವಚ್ಛಗೊಳಿಸುತ್ತೇನೆ'' ಎಂದು 5ನೆ ತರಗತಿಯ ಸಮೀರ್ ಮಲಿಕ್ ಹೇಳುತ್ತಾನೆ. ಅದನ್ನೇಕೆ ಮಾಡುತ್ತಿ ಎಂಬ ಪ್ರಶ್ನೆಗೆ, ಆತ, 'ಟೀಚರ್ ಹಾಗೆ ಮಾಡಲು ಆದೇಶಿಸುತ್ತಾರೆ' ಎಂದ.

ಶಾಲೆಯಲ್ಲಿರುವ ನೀರಿನ ಪಾತ್ರೆಯಿಂದ ನೀರನ್ನು ಕುಡಿಯಲೂ ನಮಗೆ ಅನುಮತಿಸಲಾಗುವುದಿಲ್ಲ ಎಂದು ಅವನು ಹೇಳುತ್ತಾನೆ.

ಹಲವು ದೀರ್ಘ ಕಾಲದಿಂದ ನಾವು ಶಾಲಾ ಸಿಬ್ಬಂದಿಗಳಿಂದ ಜಾತಿ ತಾರತಮ್ಯಕ್ಕೊಳಗಾಗುತ್ತಿದ್ದೇವೆ ಎಂದು ಹೆತ್ತವರು ಮತ್ತು ಮಕ್ಕಳು ದೂರಿದ್ದಾರೆ. ಶಾಲೆಯಲ್ಲಿ ನೀಡಲಾಗುವ ಮಧ್ಯಾಹ್ನದ ಬಿಸಿಯೂಟದ ವೇಳೆಯು ತಮ್ಮ ಮಕ್ಕಳೊಂದಿಗೆ ತಾರತಮ್ಯ ನೀತಿ ಅನುಸರಿಸಲಾಗುತ್ತದೆ ಎಂದು ತಿಳಿದ ನಂತರ ದಲಿತ ಹೆತ್ತವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನೇ ನಿಲ್ಲಿಸಿಬಿಟ್ಟರು.

ದಲಿತ ವಿದ್ಯಾರ್ಥಿಯ ತಂದೆ ಬಾಬಾಜಿ ಮಲಿಕ್ ಹೇಳುವಂತೆ, ''ಮಧ್ಯಾಹ್ನದೂಟವನ್ನು ನೀಡುವ ಜವಾಬ್ದಾರಿ ಏಲ್ಪಿಸಲ್ಪಟ್ಟ ಅಡುಗೆಯವರು ಹಾಗೂ ಶಿಕ್ಷಕರು ಕೆಲವು ದಲಿತ ಮಕ್ಕಳನ್ನು ನಿಂದಿಸಿದರು ಮತ್ತು ಅವರಿಗೆ ಆಹಾರ ನೀಡಲು ನಿರಾಕರಿಸಿದರು. ಮಧ್ಯಾಹ್ನದೂಟದ ಸಂದರ್ಭದಲ್ಲಿ ನಮ್ಮ ಮಕ್ಕಳು ಮೇಲ್ಜಾತಿ ಮಕ್ಕಳೊಂದಿಗೆ ಅಂತರ ಕಾಪಾಡಬೇಕಾಗಿದೆ.''

## ಗುಜರಾತ್‌ನಲ್ಲಿ 7282 ಮಾನವ ಹಕ್ಕು ಉಲ್ಲಂಘನೆ ಪ್ರಕರಣ

ಗಾಂಧಿನಗರ: ರಾಜ್ಯ ಅಸೆಂಬ್ಲಿಗೆ ಮಂಡಿಸಿದ ತನ್ನ ಹೊಸ ವರದಿಯಲ್ಲಿ ಗುಜರಾತ್ ಮಾನವ ಹಕ್ಕು ಆಯೋಗವು ಕಳೆದ ನಾಲ್ಕುವರ್ಷಗಳಲ್ಲಿ ರಾಜ್ಯದಲ್ಲಿ 7292 ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳು ನಡೆದಿವೆ ಎಂಬುದನ್ನು ಒಪ್ಪಿಕೊಂಡಿದೆ. ಮಹಿಳೆಯರು ಮತ್ತು ಮಕ್ಕಳ ಮೇಲಾದ ದೌರ್ಜನ್ಯ ಪ್ರಕರಣಗಳು 2101. ಅವುಗಳಲ್ಲಿ ಮುಸ್ಲಿಮ್ ಮಹಿಳೆಯರ ಮೇಲಾದ ದೌರ್ಜನ್ಯ ಪ್ರಕರಣಗಳು 1940 ಮತ್ತು ಮುಸ್ಲಿಮ್ ಮಕ್ಕಳ ಮೇಲೆ 112.

ಸಮಗ್ರವಾದ ಸಮಿತಿಯ ಅನುಪಸ್ಥಿತಿಯಲ್ಲಿ ಸಂತ್ರಸ್ತರ ಸುಧಾರಣೆಗೆ ಉತ್ತಮ ಕ್ರಮವನ್ನು ತೆಗೆಯಲು ಸಾಧ್ಯವಾಗುತ್ತಿಲ್ಲ ಎಂದು ಆಯೋಗದ ಅಧ್ಯಕ್ಷ ಮತ್ತು ರಾಜ್ಯ ಹೈಕೋರ್ಟ್‌ನ ಮಾಜಿ ಮುಖ್ಯನ್ಯಾಯಮೂರ್ತಿ ಡಿ.ಎಸ್.ಸಿನ್ಹಾ ಹೇಳಿದ್ದಾರೆ. ಆಯೋಗದಲ್ಲಿ ಹಲವು ಸ್ಥಾನಗಳು ತೆರವಾಗಿವೆ. ಅವುಗಳನ್ನು ತಕ್ಷಣವೇ ತುಂಬಬೇಕು ಮತ್ತು ಆಯೋಗವನ್ನು ಆರ್ಥಿಕವಾಗಿ ಸ್ವಾಯತ್ತಗೊಳಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

### ಪ್ರತಿಭಾನ್ವಿತೆ



ಕ್ಯಾಶಿಯಾ ಸನ್‌ರಿಟಾ ಹೈಸ್ಕೂಲ್ ವಿದ್ಯಾರ್ಥಿನಿ ಅಮ್ರೀನ್ ನಾಝ್ ಬೇಗಂ ಇತ್ತೀಚೆಗೆ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 557 ಅಂಕಗಳೊಂದಿಗೆ ತೇರ್ಗಡೆಯಾಗಿದ್ದು, ಶಾಲೆಯಲ್ಲಿ ತೃತೀಯ ಸ್ಥಾನವನ್ನು ಪಡೆದಿದ್ದಾರೆ.

ನಾಝ್ ಮದ್ರಸಾದಲ್ಲಿ 7ನೆ ತರಗತಿಯಲ್ಲಿ ಕಲಿಯುತ್ತಿದ್ದಾರೆ. ಪಿಯುಸಿಯಲ್ಲಿ ಸೈನ್ಸ್ ಆಯ್ಕೆ ಮಾಡುವ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ.

ಈಕೆ ಜೆಪ್ಪು ಮೋರ್ಗನ್ಸ್‌ಗೇಟ್‌ನ ಬಿ.ಮುಹಮ್ಮದ್ ಮತ್ತು ಮುನೀರಾ ಬೀಬಿ ದಂಪತಿಯ ಪುತ್ರಿ.

## ಸಿಪಿಐ-ಎಂ ಕಚೇರಿ ಬಳಿ ಬಾಂಬ್ ಪತ್ತೆ

ಕೋಲ್ಕತಾ: ಪಶ್ಚಿಮ ಬಂಗಾಳದ ಪಶ್ಚಿಮ ಮಿಡ್ನಾಪುರ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ-ಎಂ)ದ ಕಚೇರಿಯ ಹಿಂದೆ ಬೃಹತ್ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳು ಪತ್ತೆಯಾಗಿವೆ.

2010ರ ಫೆಬ್ರವರಿಯಲ್ಲಿ ಶಂಕಿತ ಮಾವೊವಾದಿಗಳು ಪೊಲೀಸ್ ಶಿಬಿರದ ಮೇಲೆ ದಾಳಿ ನಡೆಸಿ ಲೂಟಿಗೈದ ಆಯುಧಗಳುಇದಾಗಿದೆಯೆಂಬ ಅನುಮಾನಗಳಿವೆ.

ಇನಾಯತ್‌ಪುರ ಪ್ರದೇಶದಲ್ಲಿರುವ ಕಚೇರಿಯ ಸಿಪಿಐ-ಎಂನ ಕಚೇರಿಯ ಹಿಂದೆ ಈ ಶಸ್ತ್ರಾಸ್ತ್ರಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

ಐಎನ್‌ಎಸ್‌ಎಎಸ್ ರೈಫಲ್‌ಗಳು, ಹನ್ನೊಲ್ ಎಸ್‌ಎಲ್‌ಆರ್‌ಗಳು, ಎಕೆ56ಗಳು, ಜೀವಂತ ಬಾಂಬ್‌ಗಳು ಮತ್ತು ಮದ್ದುಗುಂಡುಗಳು ಪತ್ತೆಯಾಗಿವೆಯೆಂದು ಪೊಲೀಸರು ಹೇಳಿದ್ದಾರೆ.

ಮಮತಾ ಬ್ಯಾನರ್ಜಿಯವರ ಹೊಸ ಸರಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಈ ರೀತೀ ಶಸ್ತ್ರಾಸ್ತ್ರಗಳ ಮುಟ್ಟುಗೋಲು ಆರಂಭವಾಗಿದೆ.

## ಕೇಸರಿಯಾಗುತ್ತಿರುವ ಮಧ್ಯಪ್ರದೇಶ

ಭೋಪಾಲ್: ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಪರಿವರ್ತಿಸುವಲ್ಲಿ ಮಧ್ಯಪ್ರದೇಶ ರಾಜ್ಯವು ಇತರ ರಾಜ್ಯಗಳಿಗೆ ನೇತೃತ್ವ ವಹಿಸಿದೆ. 2003ರಲ್ಲಿ ಮೊದಲ ಬಾರಿಗೆ ಇಲ್ಲಿ ಬಿಜೆಪಿ ಆಡಳಿತಕ್ಕೆ ಬಂದ ನಂತರ ವಿದ್ಯಾಭ್ಯಾಸವು ಕೇಸರೀಕರಣಗೊಂಡಿತ್ತು.

2007ರಲ್ಲಿ ಸೂರ್ಯ ನಮಸ್ಕಾರ, ಪ್ರಾಣಾಯಾಮಗಳನ್ನು ಸರಕಾರಿ ಶಾಲೆಗಳಲ್ಲಿ ಕಡ್ಡಾಯಗೊಳಿಸಲಾಗಿತ್ತು. ನಂತರ 2009ರಲ್ಲಿ ಸರಕಾರವು ಶಾಲೆಗಳಲ್ಲಿ ಮಧ್ಯಾಹ್ನದ ಊಟಕ್ಕೆ ಮೊದಲು ಭೋಜನ ಮಂತ್ರ ಹೇಳುವುದನ್ನು ಕಡ್ಡಾಯಗೊಳಿಸಿತು.

ಕೆಲವು ಮಾಹಿತಿಗಳ ಪ್ರಕಾರ ಶಿವರಾಜ್ ಸಿಂಗ್ ನೇತೃತ್ವದ ರಾಜ್ಯ ಸರಕಾರವು 2011-12ನೆ ಸಾಲಿನಲ್ಲಿ ಶಾಲೆಗಳಲ್ಲಿ ಭಗವದ್ಗೀತೆಯನ್ನು ಕಲಿಸಲು ಮುಂದಾಗಿದೆ. ಶಾಲೆಯ ಪಠ್ಯ ಕ್ರಮದಲ್ಲಿ ಭಗವದ್ಗೀತೆಯನ್ನು ಸೇರಿಸುವಂತೆ ಮತ್ತು ಅದಕ್ಕೆ ಬೇಕಾದ ಎಲ್ಲಾ ಕ್ರಮಗಳನ್ನು ಕೂಡಲೇ ಕೈಗೊಂಡು ಆದಷ್ಟು ಬೇಗನೇ ಈ ಬಗ್ಗೆ ತಮಗೆ ವರದಿಯೊಪ್ಪಿಸುವಂತೆ ಮುಖ್ಯಮಂತ್ರಿ ಸಂಬಂಧಿಸಿದ ಸಚಿವಾಲಯ/ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎನ್ನಲಾಗಿದೆ. ಛತ್ರಪಂಚಾಯತ್ ಅಸ್ತಿತ್ವಕ್ಕೆ ತರುವುದಕ್ಕಾಗಿಯೂ ಅವರು ಯೋಜನೆಗಳನ್ನು ರೂಪಿಸುತ್ತಿದ್ದಾರೆ ಎನ್ನಲಾಗಿದೆ.

## ಲಿಬಿಯಾ ಬಿಕ್ಕಟ್ಟು: ಮಧ್ಯವರ್ತಿಯಾಗಿ ದ.ಆ.ಅಧ್ಯಕ್ಷ ಜೇಕಬ್



ಲಿಬಿಯಾ: ಲಿಬಿಯಾ ಆಡಳಿತಗಾರ ಮುಅಮ್ಮರ್ ಗದ್ದಾಫಿಯನ್ನು ಅಧಿಕಾರದಿಂದ ಕೆಳಗಿಳಿಸಲು ಯೋಜನೆಗಳನ್ನು ರೂಪಿಸುವ ಸಲುವಾಗಿ ಚರ್ಚಿಸುವುದಕ್ಕಾಗಿ ದಕ್ಷಿಣ ಆಫ್ರಿಕದ ಅಧ್ಯಕ್ಷ ಜೇಕಬ್ ಝುಮಾ ಲಿಬಿಯಾಗೆ ಭೇಟಿ ನೀಡಲು ನಿರ್ಧರಿಸಿದ್ದಾರೆ.

ಲಿಬಿಯಾ ಕ್ರಾಂತಿಕಾರಿ ಹೋರಾಟಗಾರರು ಮತ್ತು ಗದ್ದಾಫಿಗೆ ನಿಷ್ಠರಾಗಿರುವ ಸೈನಿಕರ ನಡುವಿನ ಕಾದಾಟಕ್ಕೆ ಅಂತ್ಯ ತರುವುದಕ್ಕಾಗಿ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಲು ಝುಮಾ ಮುಂದಿನ ವಾರ ಲಿಬಿಯಾಗೆ ಭೇಟಿ ನೀಡಲಿದ್ದಾರೆ.

## ಅಲಹಾಬಾದ್ ಹೈಕೋರ್ಟ್ ತೀರ್ಪಿಗೆ ಸು.ಕೋ.ತಡೆಯಾಜ್ಞೆ: ಪಾಪ್ಯುಲರ್ ಫ್ರಂಟ್ ಸ್ವಾಗತ

ಬೆಂಗಳೂರು: ಬಾಬ್ರಿ ಮಸ್ಜಿದ್ ಧ್ವಂಸ ಸ್ಥಳವನ್ನು ಮೂರು ಭಾಗವಾಗಿ ವಿಂಗಡಿಸುವ ಅಲಹಾಬಾದ್ ಹೈಕೋರ್ಟ್ ತೀರ್ಪಿಗೆ ತಡೆಯಾಜ್ಞೆ ನೀಡಿರುವ ಸುಪ್ರೀಂ ಕೋರ್ಟ್ ತೀರ್ಪನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸ್ವಾಗತಿಸಿದೆ.

ಹೈಕೋರ್ಟ್ ತೀರ್ಪಿನಲ್ಲಿದ್ದ ಕೋಮು ಧೋರಣೆಯಿಂದ ಕಳವಳವಾಗಿದ್ದ ಎಲ್ಲಾ ಜಾತ್ಯತೀತ ಸಮೂಹಗಳಿಗೆ ಈ ತೀರ್ಪು ತುಸು ನಿರಾಳತೆಯನ್ನು ನೀಡಲಿದೆ ಎಂದು ಪಾಪ್ಯುಲರ್ ಫ್ರಂಟ್ ಪ್ರಧಾನ ಕಾರ್ಯದರ್ಶಿ ಕೆ.ಎಂ.ಶರೀಫ್ ಪತ್ರಿಕಾಪ್ರಕಟನೆಯಲ್ಲಿ ತಿಳಿಸಿದ್ದಾರೆ.

ನ್ಯಾಯದ ವಿಳಂಬವು ನ್ಯಾಯದ ನಿರಾಕರಣೆಯಾಗಿ ಪರಿವರ್ತನೆಯಾಗುವುದರಿಂದ ಸುಪ್ರೀಂಕೋರ್ಟ್ ಶೀಘ್ರ ವಿಚಾರಣೆ ನಡೆಸಿ ತೀರ್ಪು ನೀಡಲಿದೆ ಎಂದು ಅವರು ಹೇಳಿದ್ದಾರೆ.

# ಹಿಂದುಳಿದ ವರ್ಗಗಳಿಗೆ ಭರವಸೆಯಾಗಿ ಎಸ್‌ಡಿಪಿಐ

## ರಾಷ್ಟ್ರೀಯ ಅಧ್ಯಕ್ಷ ಇ.ಅಬೂಬಕರ್



1


2

**ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ ಇ. ಅಬೂಬಕರ್‌ರಿಗೆ ನಾಯಕರಿಂದ ಅಭಿನಂದನೆ (ಚಿತ್ರ-1). ಸಾರ್ವಜನಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ (ಚಿತ್ರ-2).**

ಬೆಂಗಳೂರು: ಸಮಾನತೆ ಮತ್ತು ನ್ಯಾಯ ನಿರಾಕರಿಸಲ್ಪಟ್ಟಿರುವ ಸಮಾಜದ ಎಲ್ಲಾ ಹಿಂದುಳಿದ ವರ್ಗಗಳಿಗೂ ಎಸ್‌ಡಿಪಿಐ ಭರವಸೆಯಾಗಿದೆ. ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಇದು ಸಾಬೀತಾಗಿದೆ.ಎಂದು ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ರಾಷ್ಟ್ರೀಯ ಅಧ್ಯಕ್ಷ ಇ.ಅಬೂಬಕರ್ ತಿಳಿಸಿದ್ದಾರೆ.

ಅವರು ಪಕ್ಷದ ನೂತನವಾಗಿ ಆಯ್ಕೆಯಾದ ರಾಷ್ಟ್ರೀಯ ನಾಯಕರಿಗೆ ಬೆಂಗಳೂರಿನ ಹೊಂಬೆ ಗೌಡ ಮೈದಾನದಲ್ಲಿ ನಡೆದ ಅಭಿನಂದನಾ ಸಮಾರಂಭವನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಮುಂಬರುವ ದಿನಗಳಲ್ಲಿ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಎಸ್‌ಡಿಪಿಐ ಒಂದು ಪ್ರಮುಖ ಶಕ್ತಿಯಾಗಿ ಮೂಡಿಬರಲಿದೆ ಎಂಬುದನ್ನು ಈ ಚುನಾವಣೆಗಳು ತೋರಿಸಿಕೊಟ್ಟಿದೆ ಎಂದ ಅವರು, ಜನರು ಎಸ್‌ಡಿಪಿಐಯೊಂದಿಗೆ ಕೈಜೋಡಿಸಬೇಕು ಮತ್ತು ಅತ್ಯಂತ ಅಗತ್ಯವಾದ ಬದಲಾವಣೆಯನ್ನು ತರುವಲ್ಲಿ ಪಾತ್ರವಹಿಸಬೇಕು ಎಂದು ಕರೆ ನೀಡಿದರು.

ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಕೊಡ್ಲಿಪೇಟೆ, ಕೇವಲ 2 ವರ್ಷಗಳ ಅತ್ಯಂತ ಕಿರು ಅವಧಿಯಲ್ಲಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ದೇಶದ ಎಲ್ಲಾ ಮೂಲೆ ಮೂಲೆಗೆ ತಲುಪಿದೆ ಎಂದರು.

ಸಮಾಜದ ಹಿಂದುಳಿದ ವರ್ಗಗಳನ್ನು ತಿರಸ್ಕರಿಸಿ ಕೇವಲ ತಮ್ಮ ಪಟ್ಟಭದ್ರ ಹಿತಾಸಕ್ತಿಯ ಬಗ್ಗೆ ರಾಜಕೀಯ ಪಕ್ಷಗಳು ಕಳವಳವನ್ನು ಹೊಂದಿರುವ ಈ ಕಾಲಘಟ್ಟದಲ್ಲಿ ಎಸ್‌ಡಿಪಿಐ ಮುಸ್ಲಿಮರು, ರೈತರು, ದಲಿತರನ್ನೊಳಗೊಂಡಂತೆ ಎಲ್ಲಾ ದಮನಿತ ವರ್ಗಗಳನ್ನು ಸಬಲೀಕರಣಗೊಳಿಸುವುದಕ್ಕಾಗಿ ಮತ್ತು ನ್ಯಾಯವನ್ನು ನೆಲೆಗೊಳಿಸುವುದಕ್ಕಾಗಿ ಮುಂದೆ ಬಂದಿದೆ ಎಂದು ಅವರು ನುಡಿದರು.

ನಮ್ಮ ದೇಶದ ಪರಿಸ್ಥಿತಿಯು ತುಂಬಾ ಹದಗೆಟ್ಟಿದೆ. ರೈತರ ಸ್ಥಿತಿಯು ದಿನದಿಂದ ದಿನಕ್ಕೆ ಹೀನಾಯವಾಗುತ್ತಿದೆ. ಮಣ್ಣಿನ ಮಕ್ಕಳು ಎಂದು ಕರೆಸಿಕೊಳ್ಳುವ ರಾಜಕಾರಣಿಗಳು ರೈತರನ್ನು ನಿರಂತರವಾಗಿ ಮೋಸಮಾಡುತ್ತಾ ಬಂದಿದ್ದಾರೆ. ಕರ್ನಾಟಕದಲ್ಲಿರುವ ಎಲ್ಲಾ ಮೂರು ಪ್ರಮುಖ ರಾಜಕೀಯ ಪಕ್ಷಗಳು ತಮ್ಮ ಮಾನವನ್ನು ಕಳೆದುಕೊಂಡಿದೆ ಮತ್ತು ಎಲ್ಲಾ ರಾಜಕಾರಣಿಗಳು ಕೊಳ್ಳೆ ಹೊಡೆಯುವುದರಲ್ಲಿ ನಿರತರಾಗಿದ್ದಾರೆ. ಕಾಂಗ್ರೆಸ್ ಹಾಗೂ ಜೆಡಿಎಸ್ ನಿರಂತರವಾಗಿ ಮುಸ್ಲಿಮರಿಗೆ ಸುಳ್ಳು ಭರವಸೆಗಳನ್ನು ನೀಡಿದೆ ಮತ್ತು ಮೋಸ ಮಾಡಿದೆ ಎಂದು ರಾಜ್ಯ ರೈತ ಸಂಘದ ನೇತಾರ ಕೋಡಿಹಳ್ಳಿ ಚಂದ್ರಶೇಖರ್ ನುಡಿದರು.

ಹೊಸದಾಗಿ ಆಯ್ಕೆಯಾದ ರಾಷ್ಟ್ರೀಯ ಅಧ್ಯಕ್ಷೆ ಪ್ರೊ। ನಾಝ್ನೀನ್ ಬೇಗಂ ಮಾತನಾಡಿ, ಜನರಿಗೆ ನೀರು, ಮನೆ, ಆರೋಗ್ಯ ಮತ್ತು ವಿದ್ಯಾಭ್ಯಾಸಗಳಂತಹ ಪ್ರಾಥಮಿಕ ಅಗತ್ಯಗಳನ್ನು ಒದಗಿಸಲು ದೇಶದ ರಾಜಕಾರಣಿಗಳು ವಿಫಲವಾಗಿದ್ದಾರೆ. ಜನರ ಸಮಸ್ಯೆಗಳನ್ನು ಬಗೆಹರಿಸುವ ತನಕ ಎಸ್‌ಡಿಪಿಐ ಕೇಡರ್‌ಗಳು ಸುಮ್ಮನಾಗಬಾರದು ಎಂದು ಅವರು ನುಡಿದರು.

ಎಸ್‌ಡಿಪಿಐ ರಾಷ್ಟ್ರೀಯ ಉಪಾಧ್ಯಕ್ಷರಿಯಾಝ್ ಅಝೀಮ್‌ಬದಿ, ಪ್ರಧಾನ ಕಾರ್ಯದರ್ಶಿಗಳಾದ ಎ.ಸಈದ್, ಎಂ.ಕೆ.ಫೈಝಿ ಮತ್ತು ಮನ್ಸೂರ್ ಅಲಿ ಖಾನ್, ಕಾರ್ಯದರ್ಶಿ ಡಾ। ಅವಾದ್ ಶರೀಫ್, ಕೋಶಾಧಿಕಾರಿ ಉಮರ್ ಖಾನ್, ಅಹಿಂದ ರಾಜ್ಯಾಧ್ಯಕ್ಷ ಮುಕುಡಪ್ಪ, ಲೋಕಜನ ಶಕ್ತಿ ಪಕ್ಷದ ರಾಜ್ಯಾಧ್ಯಕ್ಷೆ ಲೀಲಾವತಿ, ಅಂಬೇಡ್ಕರ್ ಸಮಾಜ ಪಾರ್ಟಿಯ ರಾಷ್ಟ್ರೀಯ ಅಧ್ಯಕ್ಷ ತೇಜ್ ಸಿಂಗ್, ಬಿಎಸ್‌ಪಿಯ ಮಾಜಿ ರಾಜ್ಯಾಧ್ಯಕ್ಷ ಗೋಪಾಲ್, ಎಸ್‌ಡಿಪಿಐಯ ರಾಷ್ಟ್ರೀಯ ಹಾಗೂ ರಾಜ್ಯ ನಾಯಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು.